ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 10 ಭಾನುವಾರ 2024

ಸಂಪುಟ: 45 | ಸಂಚಿಕೆ: 203 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ ಭಾನುವಾರ 10 ನವೆಂಬರ್ 2024

ಮಹಾಜನ ವಿದ್ಯಾಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಮಹಾಜನ ವಿದ್ಯಾಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು,ನ.9–ಮಹಾಜನ ವಿದ್ಯಾಸಂಸ್ಥೆ ವತಿಯಿಂದ ವಿವೇಕಾನಂದ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸಮಾರಂಭದ ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳಿಧರ್ ಭಾಗವತ್, ಮಹಾಜನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಎಸ್.ಸುಜಾತ, ಮಹಾಜನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ವಿಷಕಂಠಮೂರ್ತಿ, ಕನ್ನಡ ಪ್ರಾಧ್ಯಾಪಕ ಹೆಚ್.ಎಂ.ಸ್ವಾಮಿಗೌಡ, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಪ್ರೌಢಶಾಲೆಯ ಶಿಕ್ಷಕರಾದ ಬೀರೇಗೌಡ, ಸಿ.ಜೆ.ವಿಂದ್ಯಾ ಯೋಗ ನರಸಿಂಹ, ಅಜಯ್ ಎಂ.ಬಿ, ರಮೇಶ್, ಇಂದ್ರಾಂಜಲಿ, ಶೃತಿ, ಸುಪ್ರಿಯ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕನ್ನಡದ ಏಕತೆ, ಕನ್ನಡದ ಜಲ, ಮಣ್ಣು ಹಾಗೂ ಭಾರತಾಂಬೆಯ ಬಗ್ಗೆ ವಿವರಿಸುತ್ತಾ ಕನ್ನಡವನ್ನು ಗೌರವಿಸಿ ಇತರರಿಗೆ ಕನ್ನಡದ ಅರಿವನ್ನು ಮೂಡಿಸಬೇಕೆಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.


ವ್ಯಕ್ತಿ ನಾಪತ್ತೆ



ಮೈಸೂರು: ಚಾಮರಾಜನಗರ ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ದಿವಂಗತ ದೇವಯ್ಯ ಅವರ ಪುತ್ರ ಡಿ. ಆನಂದ ಮೂರ್ತಿ (57) ಸೋಮವಾರ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಾಪತ್ತೆಯಾಗಿದ್ದಾರೆ. ತಿಳಿ ನೀಲಿ ಬಣ್ಣದ ಟೀ ಶರ್ಟ್, ಕಂದು ಬಣ್ಣದ ಸ್ವೆಟರ್ ಮಾದರಿಯ ಜರ್ಕಿನ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418307 ಸಂಪರ್ಕಿಸಿ.

ನಿಧನ

ಡಿ.ಜಯಕಿರಣ್‌ಕುಮಾರ್



ಮೈಸೂರು,ನ.9–ಮೈಸೂರಿನ ಗೋಕುಲಂ ನಿವಾಸಿ ಡಿ.ಜಯಕಿರಣ್‌ಕುಮಾರ್ (79) ಶನಿವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಪದ್ಮಾ, ಪುತ್ರಿಯರಾದ ಶಾಲಿನಿ ಮತ್ತು ಸೌಮಿನಿ, ಅಳಿಯ ಅನಿಲ್ ಪ್ರಭಾಕರ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ಸಿಮೆಟ್ರಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತೋಷ್ ಎಂ.ಪಿ.



ಮೈಸೂರಿನ ಅಶೋಕ ರಸ್ತೆ ನಿವಾಸಿ ಸಂತೋಷ್ ಎಂ.ಪಿ. (31) ಶನಿವಾರ ಹೃದಯಾಘಾತದಿಂದ ನಿಧನರಾದರು.

ಮೃತರು ತಂದೆ, ತಾಯಿ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅಂದೇ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಸಂಜೆ 4.30ರಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ಯಾಲೆಸ್ಟೈನ್‌ನಲ್ಲಿ ಶಾಂತಿ ಸ್ಥಾಪನೆಗೆ ಒತ್ತಾಯಿಸಿ ಮೈಸೂರಲ್ಲಿ ಪ್ರತಿಭಟನೆ



ಪ್ಯಾಲೆಸ್ಟೈನ್‌ನಲ್ಲಿ ಶಾಂತಿ ನೆಲೆಸುವಂತೆ ಲಿಬರೇಶನ್ ಎಡಪಕ್ಷಗಳ ಜಂಟಿ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ನ.9(ಎಂಟಿವೈ)–ವಿಶ್ವದಲ್ಲಿ ಶಾಂತಿ ಸ್ಥಾಪಿಸುವುದರೊಂದಿಗೆ ಯುದ್ಧ ನೀತಿಯನ್ನು ವಿರೋಧಿಸಿ, ಪ್ಯಾಲೆಸ್ಟೈನ್‌ನಲ್ಲಿ ಶಾಂತಿ ಮರುಸ್ಥಾಪಿಸುವಂತೆ ಒತ್ತಾಯಿಸಿ ಲಿಬರೇಶನ್ ಎಡಪಕ್ಷಗಳ ಜಂಟಿ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಶನಿವಾರ ಲಿಬರೇಶನ್ ಎಡಪಕ್ಷಗಳ ಜಂಟಿ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ವಿಶ್ವಶಾಂತಿಗಾಗಿ ಆಗ್ರಹಿಸಿದರು.

ಪ್ಯಾಲೆಸ್ಟೈನ್ ಸ್ವತಂತ್ರ ದೇಶವಾಗಬೇಕು. ಇಸ್ರೇಲ್ ಆಕ್ರಮಣ ನಿಲ್ಲಿಸಬೇಕು. ಶಾಂತಿ ವಾತಾವರಣ ಸೃಷ್ಟಿಸಬೇಕು. 1948ರಲ್ಲಿ ಯಹೂದಿಗಳಿಗಾಗಿ ಬ್ರಿಟಿಷರು ಇಸ್ರೇಲ್ ದೇಶವನ್ನು ಸ್ಥಾಪಿಸಿದರು. ಪ್ಯಾಲೆಸ್ಟೈನ್ ಅರಬ್ಬರಿಗೆ ದೇಶವೇ ಇಲ್ಲದಾಯಿತು. ಪ್ಯಾಲೆಸ್ಟೈನ್–ಅರಬರ ನಡುವೆ ಆರಂಭವಾದ ಸಂಘರ್ಷ ಇದುವರೆಗೂ ನಿಂತಿಲ್ಲ. ಇಸ್ರೇಲ್ ದೇಶ ರಚನೆಗೆ ಬ್ರಿಟನ್, ಅಮೆರಿಕ, ಫ್ರಾನ್ಸ್ ಮತ್ತಿತರರ ಕೆಲವು ಸಾಮ್ರಾಜ್ಯಶಾಹಿ ದೇಶಗಳು ಬಿಟ್ಟರೆ ಜಗತ್ತಿನ ಹೆಚ್ಚಿನ ದೇಶಗಳೂ ಮಾನ್ಯತೆ ಕೊಟ್ಟಿಲ್ಲ. ಭಾರತವೂ ಇಸ್ರೇಲ್‌ಗೆ ಮಾನ್ಯತೆ ಕೊಟ್ಟಿಲ್ಲ. 1948ರಲ್ಲಿ ಅರಬ್–ಇಸ್ರೇಲ್ ಯುದ್ಧದಲ್ಲಿ ಇಸ್ರೇಲ್ ಗೆದ್ದ ನಂತರ 7.5 ಲಕ್ಷ ಪ್ಯಾಲೆಸ್ಟೈನ್ ಅರಬರನ್ನು ಇಸ್ರೇಲ್ ಗಡಿಪಾರು ಮಾಡಿತ್ತು. ಇವರು ಹತ್ತಿರದ ಅರಬ್ ರಾಷ್ಟ್ರಗಳಲ್ಲಿ ನಿರಾಶ್ರಿತರಾಗಿ ಬದುಕು ನಡೆಸುವಂತಾಗಿದೆ ಎಂದು ವಿಷಾದಿಸಿದರು.

ಪ್ಯಾಲೆಸ್ಟೈನ್ ಅರಬರು ಗಾಜಾ ಪಟ್ಟಿಯಲ್ಲಿ ದಾರುಣ ಸ್ಥಿತಿಯಲ್ಲಿ ಬದುಕುವಂತಾಗಿದೆ. 25 ಲಕ್ಷಕ್ಕೂ ಹೆಚ್ಚು ಜನರು ನೆಲೆಸಿದ್ದಾರೆ. 2023ರ ಅ.7ರಂದು ನಡೆದ ದಾಳಿಗೆ ಪ್ರತೀಕಾರವೆಂದು ಇಸ್ರೇಲ್ ಈಗ ಗಾಜಾದ ಮೇಲೆ ಆಕ್ರಮಣ ನಡೆಸಿ ಅವರ ಮನೆ, ಆಸ್ಪತ್ರೆ, ಶಾಲೆ, ವಾಣಿಜ್ಯ ಕಟ್ಟಡಗಳೆಲ್ಲವನ್ನೂ ಧ್ವಂಸ ಮಾಡಿದೆ. ಜಗತ್ತಿನಲ್ಲಿ 3ನೇ ಮಹಾಯುದ್ಧಕ್ಕೆ ನಾಂದಿ ಹಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಮಧ್ಯ ಪ್ರಾಚ್ಯದಲ್ಲಿ ಅರಬ್ ದೇಶಗಳನ್ನು ಹೆದರಿಸಿ ತನ್ನ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡಲು ಅಮೆರಿಕ, ಬ್ರಿಟನ್ ಮತ್ತಿತರ ಸಾಮ್ರಾಜ್ಯಶಾಹಿಗಳು ಈ ಯುದ್ಧದಲ್ಲಿ ಇಸ್ರೇಲ್ ಸೋಲದಂತೆ ತನ್ನ ಬೆಂಬಲ ಮುಂದುವರಿಸಿದೆ. ಅಮೆರಿಕ ತನ್ನ ವಿಮಾನ ವಾಹಕ ಯುದ್ಧ ಹಡಗುಗಳನ್ನು ಇಸ್ರೇಲ್ ಹತ್ತಿರ ತಂದು ನಿಲ್ಲಿಸಿದೆ ಎಂದು ಆರೋಪಿಸಿದರು.

ಬಲಪಂಥೀಯ ಇಸ್ರೇಲ್ ಸರ್ಕಾರಕ್ಕೆ ಭಾರತದ ಬಲಪಂಥೀಯ ಮೋದಿ ಸರ್ಕಾರ ಬೆಂಬಲ ನೀಡುತ್ತಿದೆ. ಪ್ಯಾಲೆಸ್ಟೈನ್ ಬೆಂಬಲಿಸಿದ ಚಾರಿತ್ರಿಕ ನಿರ್ಣಯವನ್ನು ಮೋದಿ ಸರ್ಕಾರ ಬದಲಾಯಿಸಲು ಹೊರಟಿದೆ. ಕೂಡಲೇ ಪ್ಯಾಲೆಸ್ಟೈನ್‌ನಲ್ಲಿ ಇಸ್ರೇಲ್ ನಡೆಸುತ್ತಿರುವ ನರಹತ್ಯೆ ತಕ್ಷಣ ನಿಲ್ಲಿಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಎನ್.ವಿಜಯ್ ಕುಮಾರ್, ಜಿ.ಜಯರಾಂ, ಜಗನ್ನಾಥ್, ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರಾದ ಹೆಚ್.ಆರ್.ಶೇಷಾದ್ರಿ, ದೇವದಾಸ್, ಬೆಲವತ್ತ ರಾಜು, ಡಿ.ಜಗನ್ನಾಥ್, ಸಿಪಿಐ(ಎಂಎಲ್) ಲಿಬರೇಶನ್ ಜಿಲ್ಲಾ ಕಾರ್ಯದರ್ಶಿ ಜವರಯ್ಯ ಇನ್ಸಾಫ್ ಮುಖಂಡರಾದ ನೂರ್ ಮರ್ಚೆಂಟ್, ಮೆಹಬೂಬ್, ಸುಬ್ರಮಣ್ಯ, ರಾಜೇಂದ್ರ, ಅಣ್ಣಪ್ಪ, ಅಭಿ, ಭರತ್, ಉಗ್ರನರಸಿಂಹೇಗೌಡ ಇನ್ನಿರರಿದ್ದರು.

ಕೂಡಲೇ ಒಳಮೀಸಲಾತಿ ಜಾರಿಗೆ ಒತ್ತಾಯ

ಮೈಸೂರು,ನ.9(ಎಂಟಿವೈ)– ಸುಪ್ರಿಂ ಕೋರ್ಟ್ ಆದೇಶದ ಅನುಸಾರ ರಾಜ್ಯ ಸರ್ಕಾರ ನ್ಯಾ.ಸದಾಶಿವ ಆಯೋಗದ ವರದಿ ಆಧರಿಸಿ ಕೂಡಲೇ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ದಲಿತ ವೆಲ್ಫೇರ್ ಟ್ರಸ್ಟ್ ಗೌರವಾಧ್ಯಕ್ಷ ಟಿ.ಎಂ. ಮಹೇಶ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿ ಸಂಬಂಧ ಸುಪ್ರಿಂಕೋರ್ಟ್ ಆ.1ರಂದು ಆದೇಶ ನೀಡಿದ್ದು, ಅದರಲ್ಲಿ ಸಂವಿಧಾನದ 341ರ ವಿಧಿಯ ತಿದ್ದುಪಡಿ ಅವಶ್ಯಕತೆ ಇಲ್ಲವೆಂದು ತೀರ್ಪು ನೀಡಿದೆ. 2011ರ ಜನಗಣತಿ ವರದಿ, ಹಿಂದುಳಿದ ಆಯೋಗದ ವರದಿಗಳ ಮಾಹಿತಿಗಳನ್ನೂ ಬಳಸಿಕೊಂಡು ಜನಸಂಖ್ಯಾವಾರು ಕೂಡಲೇ ಒಳ ಮೀಸಲಾತಿ ನೀಡಬೇಕು. ವರದಿ ಬರಲಿ ಎಂದು ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಹಿಂದೇಟು ಹಾಕುವುದು ಸರಿಯಲ್ಲ. ಇದು ನಿರುದ್ಯೋಗದ ಸಮಸ್ಯೆಯಲ್ಲಿರುವ, ವಯೋಮಿತಿ ಮೀರುತ್ತಿರುವ ಅಭ್ಯರ್ಥಿಗಳನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತದೆ. ಕೋರ್ಟ್ ತೀರ್ಪನ್ನು ಪ್ರಮುಖ ಜಾತಿಗಳಾದ ಹೊಲೆಯ ಮತ್ತು ಮಾದಿಗ ಸಮುದಾಯವು ಸ್ವಾಗತಿಸಿದ್ದು, ಅನುಷ್ಠಾನ ಮಾಡದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಲೇಖಕ ಸಿದ್ದಸ್ವಾಮಿ, ಮಾದಿಗ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಶಿವಮೂರ್ತಿ, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಿಕ್ಕಂದಾನಿ ಇದ್ದರು.

ವಿಶೇಷ ತಪಾಸಣೆ ವೇಳೆ ದೋಷಪೂರಿತ ನಂಬರ್ ಪ್ಲೇಟ್‌ವುಳ್ಳ 88 ವಾಹನಗಳ ವಶ



ದೋಷಪೂರಿತ ದ್ವಿಚಕ್ರ ವಾಹನ, ನಂಬರ್ ಪ್ಲೇಟ್ ರಹಿತ ವಾಹನಗಳ ವಿಶೇಷ ತಪಾಸಣೆಯಲ್ಲಿ ಮೈಸೂರು ಸಂಚಾರಿ ಪೊಲೀಸರು 88 ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರು, ನ.9(ಬಿಎಲ್‌ಯು)–ದೋಷಪೂರಿತ ದ್ವಿಚಕ್ರ ವಾಹನ ಹಾಗೂ ನಂಬರ್ ಪ್ಲೇಟ್‌ರಹಿತ ವಾಹನಗಳ ವಿಶೇಷ ತಪಾಸಣೆಯಲ್ಲಿ ಮೈಸೂರು ನಗರದ ಸಂಚಾರಿ ಪೊಲೀಸರು 88 ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ದೋಷಪೂರಿತ ವಾಹನ ಹಾಗೂ ನಂಬರ್ ಪ್ಲೇಟ್‌ರಹಿತ ವಾಹನಗಳನ್ನು ತಪಾಸಣೆ ಮಾಡುವ ಕಾರ್ಯಾಚರಣೆಯನ್ನು ನ.5ರಂದು ಕೈಗೊಳ್ಳಲಾಗಿತ್ತು. ಈ ವೇಳೆ ಮೈಸೂರಿನ ಸಂಚಾರಿ ಪೊಲೀಸರು 88 ವಾಹನಗಳನ್ನು ವಶಪಡಿಸಿಕೊಂಡು ವಾಹನ ಸವಾರರ ವಿರುದ್ಧ ಐಎಂವಿ ಕಾಯ್ದೆ ಅನ್ವಯ ಕಾನೂನು ರೀತ್ಯಾ ಕ್ರಮ ಕೊಂಡಿದ್ದಾರೆ. ಈ ಮೊದಲು ಕೈಗೊಂಡಿರುವ ಕಾರ್ಯಾಚರಣೆಯಲ್ಲಿ ಮೈಸೂರಿನ 3,631 ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿರುವ ಹಾಗೂ ನಂಬರ್ ಪ್ಲೇಟ್‌ರಹಿತ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆ, ಲಲಿತಾದ್ರಿಪುರ:** ಸಿಲಿಕಾಥನ್ 2024, ಕ್ರೀಡಾಕೂಟ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಮಾಜಿ ಸದಸ್ಯ ಡಾ.ನಿಂಗರಾಜ್‌ಗೌಡ, ಶಾಲೆಯ ಕಾರ್ಯದರ್ಶಿ ಎಲ್.ರವಿ, ಪ್ರಾಂಶುಪಾಲರಾದ ಡಾ ದೀಪ್ತಿ ಚತುರ್ವೇದಿ, ನಿರ್ದೇಶಕಿ ಡಾ.ಸುಮಾಲಿನಿ ಸ್ವಾಮಿ, ಶೈಕ್ಷಣಿಕ ಮುಖ್ಯಸ್ಥ ಡಾ.ಸಮೀರಾ ಸಿಂಹ, ಸ್ಥಳ: ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆ, ಲಲತಾದ್ರಿಪುರ, ಬೆಳಗ್ಗೆ 8.15ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಯೋಗ ಮತ್ತು ಆಕ್ಯೂಪಂಕ್ಚರ್ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಶ್ರೀ ಕ್ಷೇತ್ರ, ಮೈಸೂರು ಜಿಲ್ಲೆ, ಬೆಳಗ್ಗೆಯಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ಸರಸ್ವತಿಪುರಂನ ಶ್ರೀ ಸ್ವರ್ಣಗೌರಿ ಭಜನಾ ಮಂಡಳಿಯಿಂದ ಭಜನೆ, ಬಿಳಿಗೆರೆಹುಂಡಿ ಗ್ರಾಮದ ಲೇಟ್ ಸಿದ್ದರಾಮೇಗೌಡ ಮತ್ತು ತಂಡದಿಂದ ಕಂಸಾಳೆ ಪದ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಭಾರತ ಸರ್ಕಾರದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವಾಲಯ:** ಮೈಸೂರು ಸಂಗೀತ ಸುಗಂಧ–2024, ಬೆಳಗ್ಗೆ 9ರಿಂದ ಬೆಂಗಳೂರಿನ ಸುಮಾ ಸುಧೀಂದ್ರ ಅವರಿಂದ ಕರ್ನಾಟಕ ವೀಣಾ ವಾದ್ಯ ಸಂಗೀತ, 9.45 ರಿಂದ ಸುಕನ್ಯಾ ಪ್ರಭಾಕರ್ ಅವರಿಂದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಂಯೋಜನೆ ಕುರಿತು ಉಪನ್ಯಾಸ ಪ್ರಾತ್ಯಕ್ಷಿಕೆ, ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಎಂ.ಎಸ್. ಶೀಲಾ ಅವರಿಂದ ಕರ್ನಾಟಕ ಗಾಯನ ಸಂಗೀತ, ಮ. 12ರಿಂದ ರುದ್ರಪಟ್ನಂ ಸಹೋದರರಾದ ಆರ್.ಎನ್. ತ್ಯಾಗರಾಜನ್ ಮತ್ತು ಆರ್.ಎನ್.ತಾರಾನಾಥನ್ ಅವರಿಂದ ಕರ್ನಾಟಕ ಗಾಯನ ಸಂಗೀತ, ಮ. 2ರಿಂದ ಬೆಂಗಳೂರಿನ ಸರ್ವಮಂಗಳ ಶಂಕರ್ ಅವರಿಂದ ಬಸವಣ್ಣ ಕುರಿತು ಉಪನ್ಯಾಸ, ಮ. 3ರಿಂದ ಬೆಂಗಳೂರಿನ ಟಿ.ಎಸ್. ಪಟ್ಟಾಭಿರಾಮ ಪಂಡಿತ್‌ನ ವಿದ್ಯಾರ್ಥಿಗಳಿಂದ ಸಮೂಹ ಗಾಯನ, ಮ.4ರಿಂದ ಬೆಂಗಳೂರಿನ ನಾಗಮಣಿ ಶ್ರೀನಾಥ್ ಅವರಿಂದ ಕರ್ನಾಟಕ ಗಾಯನ ಸಂಗೀತ, ಸಂಜೆ 5 ರಿಂದ ಸಮಾರೋಪ ಸಮಾರಂಭ, ಸಂಜೆ 6ರಿಂದ ಬೆಂಗಳೂರಿನ ಅಮೃತ ವೆಂಕಟೇಶ್ ಅವರಿಂದ ಕರ್ನಾಟಕ ಗಾಯನ ಸಂಗೀತ, ಸಂಜೆ 7ರಿಂದ ಚೆನ್ನೈನ ಸಂದೀಪ್ ನಾರಾಯಣ್ ಅವರಿಂದ ಕರ್ನಾಟಕ ಗಾಯನ ಸಂಗೀತ, ರಾತ್ರಿ 8ರಿಂದ ಬಹುಮಾನ ವಿತರಣಾ ಸಮಾರಂಭ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣ.

■ **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್:** ರಾಜ್ಯೋತ್ಸವ ಪ್ರಯುಕ್ತ ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿಯವರ ಮಾರ್ಗದರ್ಶನದಲ್ಲಿ ಅಷ್ಟಾಂಗ ವಿನ್ಯಾಸ ಯೋಗ ಮತ್ತು ಪ್ರೆಗ್ನೇಸಿ ಯೋಗ ಕುರಿತು ಉಚಿತ ಕಾರ್ಯಾಗಾರ, ಸ್ಥಳ: 7ನೇ ಕ್ರಾಸ್, 4ನೇ ಮೇನ್, ರಾಮಕೃಷ್ಣನಗರ, ಬೆಳಗ್ಗೆ 6.30ಕ್ಕೆ.



ಇಂದಿನ ಪಂಚಾಂಗ

10.11.2024 ಭಾನುವಾರ, ಮಳೆ ನಕ್ಷತ್ರ: ವಿಶಾಖ, 06.11.2024ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಸಂಜೆ 4.30ರಿಂದ 6 ರವರೆಗೆ

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಮುಕ್ತಿದಾನಂದ ಅವರಿಂದ ದೈವ ಪ್ರಜ್ಞಾ ಜಪ ಕರ್ಮ ಯಜ್ಞ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಗಿರಿ ಚಂದ್ರಶೇಖರ್ ಮತ್ತು ಪಕ್ಷಿ ಪ್ರೇಮಿಗಳು :** ಭಾರತದ ಪಕ್ಷಿ ಪಿತಾಮಹ ಡಾ. ಸಲೀಂ ಅಲಿ ಅವರ ನೆನಪಿನಲ್ಲಿ ರೆಕ್ಕೆ ಪುಕ್ಕ ಭಾರತದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಸಂಗೀತ ವಿದ್ವಾನ್ ಬಿ. ನಾಗೇಶ್ ಅವರಿಂದ ದಾಸರ ಪದಗಳು, ವಿದ್ವಾನ್ ಸತ್ಯ–ರಿಧಮ್ ಪ್ಯಾಡ್, ವಿದ್ವಾನ್ ರಮೇಶ್ ದನ್ನೂರು–ತಬಲ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು :** ವಜ್ರ ಮಹೋತ್ಸವದ ಸಂಭ್ರಮಾಚರಣೆ ಅಂಗವಾಗಿ ರಂಗ ಬೆಳಕು ಕುರಿತ ಪ್ರಾತ್ಯಕ್ಷಿಕೆ, ರಂಗಾಯಣ ಬೆಳಕು ವಿನ್ಯಾಸಕರಾದ ಮಹೇಶ್ ಕಲ್ಲತ್ತಿ ಅವರಿಂದ, ಸ್ಥಳ: ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಬೆಳಗ್ಗೆ 11 ರಿಂದ.


■ **ರಂಗವಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ, ಬೆಂಗಳೂರು ಮತ್ತು ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆಗಳು:** ಸಂಜೆ 6ಕ್ಕೆ ರಂಗ ಹಬ್ಬ 'ರಂಗವಲ್ಲಿ ರಂಗ ಸಂಭ್ರಮ–2024', ಸಂಜೆ 4.30ಕ್ಕೆ ಗಾಂಧಿನಗರದ ಭಾರತ್ ಬ್ರಾಸ್ ಬ್ಯಾಂಡ್‌ನಿಂದ ಬ್ರಾಸ್ ಬ್ಯಾಂಡ್ ಪ್ರದರ್ಶನ, ಸಂಜೆ 7ಕ್ಕೆ ಬೆಂಗಳೂರಿನ ಕ್ರೋನಿಕಲ್ಸ್ ಆಫ್ ಇಂಡಿಯಾ ತಂಡದಿಂದ ಶಿವೋಹಂ ನಾಟಕ ಪ್ರದರ್ಶನ, ವಿನ್ಯಾಸ, ಸಂಗೀತ ಮತ್ತು ನಿರ್ದೇಶನ: ಗಣೇಶ್ ಮಂದಾರ್ತಿ. ಸ್ಥಳ: ಕಿರು ರಂಗಮಂದಿರ.

■ **ನಾಟ್ಯ ಅಕಾಡೆಮಿ ಪ್ರದರ್ಶಕ ಕಲೆಗಳು ಮತ್ತು ಸಂಶೋಧನಾ ಕೇಂದ್ರ** ವಾರ್ಷಿಕೋತ್ಸವ ಪ್ರಯುಕ್ತ ನೃತ್ಯ, ಗಾಯನ, ಏಕಪಾತ್ರಾಭಿನಯ, ರಂಗೋಲಿ, ಆಶುಭಾಷಣ, ಕರೋಕೆ, ವೇಷಭೂಷಣ, ಚಿತ್ರಕಲಾ, ಪ್ರಬಂಧ ಸ್ಪರ್ಧೆ, ಸ್ಥಳ: ಪುರಭವನ, ಬೆಳಗ್ಗೆ 10ರಿಂದ.

■ **ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ:** ಕನ್ನಡ ರಾಜ್ಯೋತ್ಸವ, ಪ್ರತಿಭಾ ಪುರಸ್ಕಾರ, ವಯೋಮಾನ ಮತ್ತು ಸದಸ್ಯತ್ವದ ಹಿರಿಯ ಸದಸ್ಯರಿಗೆ ಸನ್ಮಾನ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಚಂದ್ರಶೇಖರ್, ಉದ್ಘಾಟನೆ: ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್, ಸಮಾರೋಪ ಭಾಷಣ: ಉಪನಿರ್ದೇಶಕರ ಕಚೇರಿ ಸಹಾಯಕ ಯೋಜನಾ ಸಮನ್ವಯಾಧಿಕಾರಿ ವೆಂಕಟಾಚಲ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಭಾರತೀಯ ಅಂಚೆ ಇಲಾಖೆ:** 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ, ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಉಪಸ್ಥಿತರು: ಧ್ಯಾನ್‌ಚಂದ್ ಪ್ರಶಸ್ತಿ ವಿಜೇತರಾದ ಶ್ರೀಮತಿ ತೃಪ್ತಿ ಮುರುಗುಂಡೆ, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್, ಸ್ಥಳ: ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ 'ಆಯಿಷ್ ಯಶೋಗಾಥೆ' ಸರಣಿಯಲ್ಲಿ 'ಶ್ರವಣ ದೋಷದಿಂದಾಗಿ ಉಂಟಾಗಿರುವ ವಾಕ್ ಮತ್ತು ಭಾಷಾ ತೊಂದರೆ' ಹಾಗೂ 'ವಿಳಂಬ ಬೆಳವಣಿಗೆ ತೊಂದರೆ' ಕುರಿತು ಕಾರ್ಯಕ್ರಮ. ಭಾಗವಹಿಸುತ್ತಾರೆ: ಗೀತಾ. ಎಂ.ಪಿ,ಸಂತೋಷ್. ಜೆ.ಆರ್, ಪೂಜಾಶ್ರೀ. ಕೆ.ಪಿ, ಮಂಜುಳಾ. ಬಿ.ಎನ್, ಸುನೀತಾ. ಎಲ್ ಮತ್ತು ಜಯಶಂಕರ್. ಬಿ., ನಡೆಸಿಕೊಡುತ್ತಾರೆ: ಬೇದ್ರೆ ಮಂಜುನಾಥ್, ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ: ಕಥೆ ಕೇಳು ಪುಟ್ಟಿ–ಕಥೆ ಹೇಳುತ್ತಾರೆ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ: ಟಿ.ನರಸೀಪುರ ತಾಲೂಕು ತಲಕಾಡಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ–ಮಧ್ಯ ವಯಸ್ಸಿನ ಮಹಿಳೆಯರ ಪಾತ್ರ, ಜವಾಬ್ದಾರಿ ಕುರಿತು ಆಪ್ತಸಮಾಲೋಚಕಿ ಸುಮಾ ನಾಗೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಚಂದ್ರಮ್ಮ, 12.35 ದೇವರನಾಮ–ಶೀಲಾ ಹೂಗಾರ್, 12.45 ಜನಪದ ಸಂಗೀತ–ಮಾದಿಗಹಳ್ಳಿಯ ಚಿಕ್ಕತಾಯಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್.ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಸಾಕ್ಷಾತ್ಕಾರ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಅರಿಯಕುಡಿ ರಾಮಾನುಜ ಐಯ್ಯಂಗಾರ್–ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯ ಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಮೈಸೂರಿನ ರಾಜ್‌ಕುಮಾರ್ ಎಂದೇ ಹೆಸರುವಾಸಿಯಾಗಿರುವ ಮೈಸೂರು ಸೊಪ್ಪಿನಕೇರಿಯ ಗುಡ್ಡಮ್ಮ ಎಲ್ಲಮ್ಮ ತಾಯಿಯ ಉಪಾಸಕ ಪುಟ್ಟಸ್ವಾಮಿ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಜಿ. ಆರ್. ರಾಮಚಂದ್ರ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಅನಿರುದ್ಧ ಐತಾಳ್–ಹಿಂದೂಸ್ಥಾನಿ ಗಾಯನ

■ **ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್:** ಎಐಟಿಯುಸಿ ಕಾರ್ಮಿಕ ಸಂಘಟನೆಯ 105ನೇ ಸಂಸ್ಥಾಪನಾ ದಿನಾಚರಣೆ, ಮುಖ್ಯ ಅತಿಥಿಗಳು : ಹಿರಿಯ ಕಾರ್ಮಿಕ ನೇತಾರ ಡಾ.ಸಿದ್ದನಗೌಡ ಪಾಟೀಲ್, ಪ್ರಮುಖ ಭಾಷಣ: ಎಐಟಿಯುಸಿ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ಆರ್. ಶೇಷಾದ್ರಿ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ರಿಂದ.

■ **ಸ್ವರಸಂಕುಲ, ಕನ್ನಡಿ ಕ್ರಿಯೇಷನ್ಸ್:** ಪಂಡಿತ್ ಇಂದೂಧರ ನಿರೋಡಿ ಹಾಗೂ ಎಂ.ಜಗನ್ನಾಥ ಶೆಣೈ ಕುರಿತ ಸಾಕ್ಷ್ಯಚಿತ್ರಗಳ ಬಿಡುಗಡೆ ಸಮಾರಂಭ, ಪಂಡಿತ್ ರಾಮರಾವ್ ವಿ.ನಾಯಕ್ ಸ್ಮರಣಾರ್ಥ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಡುಗಾರಿಕೆ ಕಾರ್ಯಕ್ರಮ, ಉಪಸ್ಥಿತರು: ಎಂ.ಜಗನ್ನಾಥ್ ಶೆಣೈ, ಜಯರಾಮ್ ಪಾಟೀಲ್, ಲಕ್ಷ್ಮೀನಾರಾಯಣ (ಬಾಬು), ಸಾಕ್ಷ್ಯ ಚಿತ್ರ: ಪರಿಕಲ್ಪನೆ–ಡಾ. ಎಂ.ಎಸ್. ಭಾಸ್ಕರ್, ನಿರ್ವಹಣೆ: ಪಂಡಿತ್ ವೀರಭದ್ರಯ್ಯ ಹಿರೇಮಠ, ನಿರ್ದೇಶನ: ರಂಜಿತ್ ಸೇತು ಮತ್ತು ಡಾ.ಎಂ.ಸಿ. ಮನೋಹರ, ಸಂಜೆ 6ಕ್ಕೆ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಡುಗಾರಿಕೆ, ಪುಣೆ ಪಂಡಿತ್ ನಿಶಾದ್ ಬಾಕ್ರೆ ಅವರಿಂದ ಹಾಡುಗಾರಿಕೆ, ಪಂಡಿತ್ ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ಬಿದನೂರು ಪಂಡಿತ್ ಭೀಮಾಶಂಕರ್–ತಬಲಾ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 5 ರಿಂದ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಕನ್ನಡ ಯೋಧ ನಾ. ನಾಗಲಿಂಗಸ್ವಾಮಿ ಸಂಸ್ಮರಣೆ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಗೂ ಸುವರ್ಣ ಸಂಭ್ರಮ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆಗಿರುವ ಮಡ್ಡೀಕೆರೆ ಗೋಪಾಲ್ ಅವರಿಗೆ ಅಭಿನಂದನೆ, ಹಿರಿಯ ಸಾಧಕರಿಗೆ ಗೌರವ ಸಮರ್ಪಣೆ ಸಮಾರಂಭ, ಸಾನ್ನಿಧ್ಯ : ಮೇಲುಕೋಟೆ ವಂಗೀಪುರ ನಂಬೀ ಮಠದ ಪೀಠಾಧಿಪತಿ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಹಿರಿಯ ಲೇಖಕಿ ಹಾಗೂ ಚೈತ್ರಾ ಫೌಂಡೇಷನ್‌ನ ಸಂಸ್ಥಾಪಕಿ ಡಾ. ಸುಧಾ ರಮೇಶ್, ಉದ್ಘಾಟನೆ: ಶಿಕ್ಷಣ ತಜ್ಞ ಹಾಗೂ ನೈಪುಣ್ಯ ಸಂಸ್ಥೆಯ ಸಂಸ್ಥಾಪಕ ಆರ್.ರಘು, ಉಪಸ್ಥಿತರು: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಾಜಶೇಖರ್ ಮೆಡಿಕಲ್ ಫೌಂಡೇಷನ್ ಅಧ್ಯಕ್ಷ ಹಿರಿಯ ವೈದ್ಯ ಡಾ.ಎಚ್.ಬಿ.ರಾಜಶೇಖರ್, ಮುಖ್ಯ ಅತಿಥಿಗಳು: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸಾಹಿತ್ಯ ಲೋಕ ಸಂಸ್ಥೆಯ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಗೌರವ ಸಮರ್ಪಣೆ: ಹಿರಿಯ ಶಿಕ್ಷಕ ಎ.ಸಂಗಪ್ಪ, ಎಚ್.ವಿ.ಮುರಳೀಧರ್, ವೆಂಕಟರಮಣ ಕಲಗಾರ್, ಶ್ರೀಮತಿ ರಮಾಮಣಿ, ವೇದಾವಿದ್ವಾಂಸ ರಾಜಶೇಖರ್, ಸಾಮಾಜಿಕ ಹೋರಾಟಗಾರ ತೇಜಸ್ವಿ ನಾಗಲಿಂಗಸ್ವಾಮಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ

■ **ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ:** ವೈಜ್ಞಾನಿಕವಾಗಿ ಒಳಮೀಸಲಾತಿ ಜಾರಿ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ: ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರ್, ಅಧ್ಯಕ್ಷತೆ: ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ಉಪಸ್ಥಿತರು : ಡಾ.ರಾಜು, ಸಿ. ಹರಕುಮಾರ್, ಸಮಿತಿಯ ಎನ್.ಭಾಸ್ಕರ್, ಮಾಜಿ ಮೇಯರ್ ಪುರುಷೋತ್ತಮ್, ಡಾ.ನವೀನ್ ಮನಿಯಾ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ :** ಹಿರಿಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆ, ಮುಖ್ಯ ಅತಿಥಿಗಳು : ನಿವೃತ್ತ ಮುಖ್ಯ ಡ್ರಿಲ್ಲಿಂಗ್ ಇಂಜಿನಿಯರ್ ಎನ್. ಜಿತೇಂದ್ರ ಕುಮಾರ್, ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಇಂಜಿನಿಯರ್ ಮಾದೇಶ್, ಅಧ್ಯಕ್ಷತೆ : ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಮಂಜಪ್ಪ ನಾಯಕ್, ಸ್ಥಳ: ಹಿರಿಯ ವಿದ್ಯಾರ್ಥಿಗಳ ಸಂಘದ ಕಟ್ಟಡದ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ದೇವಸ್ಥಾನ ಟ್ರಸ್ಟ್ :** 17ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ, ಪ್ರಾತಃ ಪುಣ್ಯಾ, ಪ್ರಧಾನ ಕಳಶ ಸ್ಥಾಪನೆ, ಪೂಜೆ ಹಾಗೂ ದುರ್ಗಾಹೋಮ, ಸಪ್ತಮಾತೃಕಾ ಹೋಮ, ಪೂರ್ಣಾಹುತಿ, ಕಳಾಹೋಮ, ಬೆಳಗ್ಗೆ 9ಕ್ಕೆ ಕುಂಭಾಭಿಷೇಕ, ಅಲಂಕಾರ, ಮಹಾನೈವೇದ್ಯ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ವಿಶೇಷ ಅತಿಥಿಗಳು: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್ ಗೌಡ, ಶ್ರೀವತ್ಸ, ಜಿ.ಟಿ.ದೇವೇಗೌಡ, ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ, ಸ್ಥಳ: ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ದೇವಸ್ಥಾನ, ಚಾಮರಾಜಪುರಂ.

■ **ಆರ್ಯ ಸಮಾಜ:** ಮಹರ್ಷಿ ಶ್ರೀ ದಯಾನಂದ ಸರಸ್ವತಿ ಅವರ ಸಂಸ್ಮರಣೋತ್ಸವ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಆರ್ಯ ಸಮಾಜದ ಅಧ್ಯಕ್ಷ ಹೇಮಚಂದ್ರ, ಮಹರ್ಷಿ ದಯಾನಂದರ ಕುರಿತು: ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕಿ ಡಾ.ಕೆ.ಲೀಲಾ ಪ್ರಕಾಶ್, ಉಪಸ್ಥಿತರು : ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಅನಂತು, ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಮಹರ್ಷಿ ಶ್ರೀ ದಯಾನಂದ ಸರಸ್ವತಿ ಸದ್ಭಾವನಾ ಪ್ರಶಸ್ತಿ ಪುರಸ್ಕೃತರು : ವಿದುಷಿ ಡಾ. ಕೆ.ಲೀಲಾಪ್ರಕಾಶ್, ಯೋಗಾಚಾರ್ಯ ಡಾ.ಬಿ.ಪಿ.ಮೂರ್ತಿ, ಸ್ಥಳ: ಆರ್ಯ ಸಮಾಜದ ಸಭಾಂಗಣ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್:** ಡಾ.ದಿನಮಣಿ ಬಿ.ಎಸ್. ಅವರ ಬಯಲು ದೀಪ ಪುಸ್ತಕ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಲೇಖಕ ವಿಕ್ರಂ ಚದುರಂಗ, ಪುಸ್ತಕ ಬಿಡುಗಡೆ: ಲೇಖಕ ಚ.ಹ.ರಘುನಾಥ, ಪುಸ್ತಕ ಕುರಿತು: ಕವಿ ಡಾ.ಸತ್ಯಮಂಗಲ ಮಹಾದೇವ, ಮುಖ್ಯ ಅತಿಥಿಗಳು: ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ಉಪಸ್ಥಿತರು: ಕವಿ ಡಾ.ಬಿ.ಎಸ್.ದಿನಮಣಿ, ಸ್ಥಳ: ಶ್ರೀ ಬಿ.ವಿ.ಕಾರಂತ ರಂಗ ಚಾವಡಿ, ರಂಗಾಯಣ, ಬೆಳಗ್ಗೆ 11ಕ್ಕೆ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ–ಲಿಂಗಾಯಿತ ವಧು–ವರರ ಸಮಾವೇಶ, ಸಾನ್ನಿಧ್ಯ: ಬಂಡಳ್ಳಿ ದೊಡ್ಡಮಠದ ಶ್ರೀ ಫಲಾಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ: ಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ಸಹಾಯಕ ಉಪಸಮನ್ವಯಾಧಿಕಾರಿ ಕೆ. ಸುರೇಶ್, ಅಧ್ಯಕ್ಷತೆ: ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಮುಖ್ಯ ಅತಿಥಿಗಳು: ಜಿ.ಎನ್.ಪ್ರಶಾಂತ್, ಸಿ.ಎಲ್. ಶರ್ಮಿಳಾ, ಹೆಚ್.ಕೆ.ಗಾಯಿತ್ರಿ, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಉತ್ತರಾದಿ ಮಠದ ರಸ್ತೆ, ಮಧ್ಯಾಹ್ನ 3 ರಿಂದ.

■ **ರಂಗಾಯಣ:** ರಂಗಾಯಣ ರೆಪರ್ಟರಿ ಕಲಾವಿದರಿಂದ ಚೆಕ್‌ಮೇಟ್ ನಾಟಕ ಪ್ರದರ್ಶನ, ನಿರ್ದೇಶನ: ಅನೂಪ್ ಜೋಷಿ, ಸಂಗೀತ : ಶ್ರೀನಿವಾಸ ಭಟ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಸಾರ್ವಜನಿಕ ಕುಂದುಕೊರತೆ ಉಪಸಮಿತಿ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಖ್ಯ ಅತಿಥಿಗಳು: ಪ್ರಾಧಿಕಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಾಕೀರ್ ಹುಸೇನ್, ಸ್ಥಳ: ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ, ಸಂಜೆ 5ಕ್ಕೆ.

■ **ಯಾಜ್ಞವಲ್ಕ್ಯ ಶುಕ್ಲ ಯಜುರ್ವೇದ ಮಹಾಸಭಾ:** 50ನೇ ವರ್ಷದ ಸುವರ್ಣ ಸಂಭ್ರಮ, ಶ್ರೀ ಸದ್ಗುರುಗಳ ಜಯಂತಿ, ಸ್ಥಾಪಿತ ದೇವತಾ, ಗೋಮಾತಾ ಪೂಜೆ, ಮಂಗಳವಾದ್ಯ ವೇದಘೋಷ ಗೋ ಪುರಸ್ಸರ ಭವನ ಪ್ರವೇಶ, ರುದ್ರಹವನ, ಸನ್ಮಾನಿತರು: ವೈ.ಎ. ಅರುಣ್ ಕುಮಾರ್, ಕೆ.ವಿ.ಅನಂತರಾಮಯ್ಯ, ರುದ್ರ ಹವನದ ಪೂರ್ಣಾಹುತಿ ವೃಷವಾಸ್ತು ಸ್ಥಾಪನೆ, ಮಹಾಮಂಗಳಾರತಿ, ಮಹಾಪ್ರಸಾದ, ಸ್ಥಳ:ಶ್ರೀ ಹೊನ್ನಪ್ಪ ರಾಮಯ್ಯ ಶುಕ್ಲ ಯಜುರ್ವೇದೀಯ ಭವನ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ನವೆಂಬರ್ 10 ಭಾನುವಾರ 2024

ಸಂಪುಟ: 45 | ಸಂಚಿಕೆ: 203 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಮನೆ ಮಾರಾಟಕ್ಕಿದೆ!

ರಾಜ್ಯದ ಮಹಾನ್ ರಾಜಕೀಯ ಮುತ್ಸದ್ದಿಯ ಸ್ಫೂರ್ತಿ ಸೆಲೆ ಸ್ಮಾರಕವಾಗಬಾರದೆ...!: ಆದರೆ ಕಾನೂನು ತೊಡಕಿದೆ ಎಂದು ಕೈಕಟ್ಟಿ ಕುಳಿತ ಸರ್ಕಾರ!; ಖರೀದಿಗೆ ಕಾಂಗ್ರೆಸ್

ಚಿತ್ರದುರ್ಗ, ನ.9– ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ನಿವಾಸ, 117x130 ಅಡಿ ವಿಸ್ತೀರ್ಣದ ಶ್ವೇತಭವನ ಇದೀಗ ಮಾರಾಟಕ್ಕಿದೆ. ಕಳೆದೊಂದು ದಶಕದಿಂದ ನಿಜಲಿಂಗಪ್ಪ ಅವರ ಈ ನಿವಾಸವನ್ನು ಖರೀದಿಸಿ ಸ್ಮಾರಕ ಮಾಡಲು ಸರ್ಕಾರ ಪ್ರಯತ್ನಿಸುತ್ತಿದೆ. ಆದರೆ ಕಾನೂನು ತೊಡಕುಗಳ ಕಾರಣ ಇದು ಸಾಧ್ಯವಾಗಿಲ್ಲ.

ಇತ್ತ ನಿಜಲಿಂಗಪ್ಪ ಕುಟುಂಬಸ್ಥರು ಸರ್ಕಾರಕ್ಕೆ ಮನೆ ಹಸ್ತಾಂತರಿಸಲು ನಡೆಸಿದ ಪ್ರಯತ್ನಗಳು ಕೈಗೂಡಿಲ್ಲ. ಅಂತಿಮವಾಗಿ ಕುಟುಂಬಸ್ಥರು ಮನೆಯನ್ನು ಮಾರಾಟ ಮಾಡಲು ಮುಂದಾಗಿದ್ದಾರೆ. ಸ್ಮಾರಕವಾಗಬೇಕಿದ್ದ ಮಾಜಿ ಮುಖ್ಯಮಂತ್ರಿಗಳ ನಿವಾಸ, ಇದೀಗ ಖಾಸಗಿ ವ್ಯಕ್ತಿಗಳ ಪಾಲಾಗುವ ಆತಂಕ ಎದುರಾಗಿದೆ. ಈ ನಡುವೆ ಕಾಂಗ್ರೆಸ್ ಸದರಿ ಮನೆ ಖರೀದಿಗೆ ತಯಾರಿ ನಡೆಸಿದೆ ಎಂದು ಹೇಳಲಾಗುತ್ತಿದೆ. ಸದ್ಯ ನಿಜಲಿಂಗಪ್ಪನವರ ಮನೆ ಮಾರಾಟಕ್ಕಿದೆ ಎಂಬ ಜಾಹೀರಾತು ಮಾತ್ರ ಎಲ್ಲೆಡೆ ಹರಿದಾಡುತ್ತಿದೆ. ನಿಜಲಿಂಗಪ್ಪ ಅವರ ಪುತ್ರ ಕಿರಣ್ ಶಂಕರ್ ಈ ಮನೆ


ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ

ಮಾರಾಟಕ್ಕಿಟ್ಟಿದ್ದಾರೆ. ಹಲವರು ಮನೆ ಖರೀದಿಸಲು ಆಸಕ್ತಿ ತೋರಿದ್ದಾರೆ. ಚಿತ್ರದುರ್ಗದ ವಾರ್ಡ್ ಸಂಖ್ಯೆ 32ರ ವಿಪಿ ಬಡಾವಣೆಯಲ್ಲಿ ಜಿಲ್ಲಾಧಿಕಾರಿಗಳ ಬಂಗಲೆ ಹತ್ತಿರವೇ ಈ ಮನೆ ಇದೆ. ಮೂಲ ಬೆಲೆ 10 ಕೋಟಿಗೂ ಅಧಿಕವಾಗಿದ್ದು, ಈ ಕುರಿತ ಮಾಹಿತಿಗಳು ಜಾಹೀರಾತಿನಲ್ಲಿ ಉಲ್ಲೇಖಿಸಲಾಗಿದೆ. ಮನೆ ಖರೀದಿಸಲು ಆಸಕ್ತಿ ಇದ್ದವರು ಮಧ್ಯವರ್ತಿಗಳ ಕಿರಿಕಿರಿ ಇಲ್ಲದೆ ನೇರವಾಗಿ ಸಂಪರ್ಕಿಸಲು ನಿಜಲಿಂಗಪ್ಪ ಪುತ್ರ ಕಿರಣ್ ಶಂಕರ್ ಕೋರಿದ್ದಾರೆ.

ಒಂದು ದಶಕದ ಹಿಂದೆ ನಿಜಲಿಂಗಪ್ಪ ಮನೆ ಖರೀದಿಗೆ ಸರ್ಕಾರ 1 ಕೋಟಿ ರೂಪಾಯಿ ಮೀಸಲಿಟ್ಟಿತ್ತು ಆದರೆ ಮಾತುಕತೆ ಫಲಪ್ರದವಾಗಲಿಲ್ಲ, ಇತ್ತ ಸರ್ಕಾರ ಕೂಡ ಹೆಚ್ಚಿನ ಆಸಕ್ತಿ ತೋರಲಿಲ್ಲ. ಬಳಿಕ ಯಡಿಯೂರಪ್ಪ ಸರ್ಕಾರ 5 ಕೋಟಿ ರೂ. ಹಣವನ್ನು ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸಿತ್ತು. ಈ ಪೈಕಿ 4.18 ಕೋಟಿ ರೂ.


ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ನಿವಾಸ

ಹಣವನ್ನು ನಿಜಲಿಂಗಪ್ಪ ಮನೆ ವಾರಸುದಾರರಿಗೆ ಹಾಗೂ 82 ಲಕ್ಷ ರೂಪಾಯಿ ಹಣವನ್ನು ಈ ಮನೆಯನ್ನು ಸ್ಮಾರಕವಾಗಿ ಸುಸ್ಥಿತಿಯಲ್ಲಿಡಲು ಸೂಚನೆ ನೀಡಲಾಗಿತ್ತು. ಆದರೆ ತಾಂತ್ರಿಕ ಕಾರಣ, ಕಾನೂನು ತೊಡಕಿನಿಂದ ಸರ್ಕಾರ ಮನೆ ಖರೀದಿ ನನೆಗುದಿಗೆ ಬಿದ್ದಿದೆ. ಈ ಮನೆಯನ್ನು ನಿಜಲಿಂಗಪ್ಪ ಅವರು ತಮ್ಮ ಮೊಮ್ಮಗ ವಿನಯ್ ಹೆಸರಿಗೆ ವಿಲ್ ಬರೆದಿದ್ದಾರೆ. ಹೀಗಾಗಿ ಈ ಮನೆಯನ್ನು ಸಬ್ ರಿಜಿಸ್ಟ್ರಾರ್ ಮೂಲಕ ನೋಂದಣಿ ಮಾಡಲು ಸಾಧ್ಯವಾಗುತ್ತಿಲ್ಲ. ಕಾರಣ ನಿಜಲಿಂಗಪ್ಪ ಪುತ್ರರು ಈ ಮನೆ ಅನುಭವಿಸಿದ ಬಳಿಕ ವಿನಯ್‌ಗೆ ಈ ಮನೆ ಸೇರಬೇಕು ಎಂದು ವಿಲ್‌ನಲ್ಲಿದೆ. ಹೀಗಾಗಿ ನಿಜಲಿಂಗಪ್ಪ ಪುತ್ರರ ಪೈಕಿ ಓರ್ವ ಧಾರವಾಡದಲ್ಲಿದ್ದರೆ, ಮತ್ತೊರ್ವ ಕಿರಣ್ ಶಂಕರ್ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ನಿಜಲಿಂಗಪ್ಪ ಅವರ ಇಬ್ಬರು ಮಕ್ಕಳು ಜೀವಂತವಿರುವಾಗ ಈ ಮನೆ ವಿನಯ್ ಹೆಸರಿಗೆ ರಿಜಿಸ್ಟ್ರೇಶನ್ ಮಾಡಲು ಸಾಧ್ಯವಿಲ್ಲ. ಇದೇ ಇರುವ ಕಾನೂನು ತೊಡಕು. ಈ ಮನೆ ವಿನಯ್ ಹೆಸರಿಗೆ ರಿಜಿಸ್ಟ್ರೇಶನ್ ಆಗದೇ ಸರ್ಕಾರಕ್ಕೆ ಖರೀದಿಸಲು ಸಾಧ್ಯವಿಲ್ಲ. ಇತ್ತ ಸರ್ಕಾರ ಮನಸ್ಸು ಮಾಡಿದರೆ ಕಾನೂನು ತೊಡಕು ನಿವಾರಿಸಿ ಖರೀದಿಸಲು ಸಾಧ್ಯವಿದೆ. ಈ ವಿಚಾರದಲ್ಲಿ ಸರ್ಕಾರ ನಡೆಸಿಕೊಂಡ ರೀತಿ ನಮಗೆ ಅಸಮಾಧಾನ ತಂದಿದೆ. ಹೀಗಾಗಿ ಸರ್ಕಾರಕ್ಕೆ ಈ ಆಸ್ತಿ ಮಾರಾಟ ಮಾಡುವುದಿಲ್ಲ ಎಂದು ಕಿರಣ್ ಶಂಕರ್ ಹೇಳಿದ್ದಾರೆ. ಖಾಸಗಿ ವ್ಯಕ್ತಿಗಳು ಕೆಲ ವರ್ಷಗಳ ಬಳಿಕ ನೋಂದಣಿ ಒಪ್ಪಂದಕ್ಕೆ ಒಪ್ಪಿಕೊಳ್ಳುತ್ತಾರೆ. ಹೀಗಾಗಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಲು ಕಿರಣ್ ಶಂಕರ್ ಮುಂದಾಗಿದ್ದಾರೆ. ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂಕೆ ತಾಜ್ ಫೀರ್ ಕೆಪಿಸಿಸಿಗೆ ಈ ಸಂಬಂಧ ಪತ್ರ ಬರೆದಿದ್ದಾರೆ. ನಿಜಲಿಂಗಪ್ಪ ಕೆಪಿಸಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗಾಗಿ ಇವರ ಮನೆಯನ್ನು ಕಾಂಗ್ರೆಸ್ ಖರೀದಿಸಬೇಕು ಎಂದು ಪತ್ರ ಬರೆದಿದ್ದರು. ಇದರ ಹಿನ್ನೆಲೆಯಲ್ಲಿ ಈಗಾಗಲೇ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ನಿಜಲಿಂಗಪ್ಪ ಮನೆಗೆ ಭೇಟಿ ನೀಡಿ ಕುಟುಂಬಸ್ಥರ ಜೊತೆ ಮಾತುಕತೆ ನಡೆಸಿದ್ದಾರೆ.

ವಕ್ಫ್‌ನಿಂದ ರೈತರಿಗೆ ನೀಡಿದ ಎಲ್ಲಾ ನೋಟಿಸ್ ವಾಪಸ್; ಯಾವುದೇ ಕ್ರಮವೂ ಇಲ್ಲ

ಪ್ರಾದೇಶಿಕ ಆಯುಕ್ತರು, ಡಿಸಿಗೆ ಕಂದಾಯ ಇಲಾಖೆ ಸೂಚನೆ

ಬೆಂಗಳೂರು, ನ.9– ವಕ್ಫ್‌ನಿಂದ ನೀಡಲಾಗಿರುವ ಎಲ್ಲಾ ನೋಟಿಸ್‌ಗಳನ್ನೂ ಹಿಂಪಡೆಯುವಂತೆಯೂ, ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಬಾರದೆಂದು ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಮಹತ್ವದ ಸೂಚನೆ ನೀಡಿದ್ದಾರೆ.

ಕೆಲವು ರೈತರ ಹಾಗೂ ಇತರ ಆಸ್ತಿಗಳನ್ನು ವಕ್ಫ್ ಹೆಸರಿಗೆ ಖಾತೆ ಮಾಡುತ್ತಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಈ ಹಿಂದೆ ಮುಖ್ಯಮಂತ್ರಿಗಳು ಸಭೆ ನಡೆಸಿ ಸೂಚನೆ ನೀಡಿದ್ದನ್ನು ಈ ಆದೇಶದಲ್ಲಿ ಉಲ್ಲೇಖಿಸಿರುವ ಅವರು, ಈ ವಿಷಯಕ್ಕೆ

● 6ನೇ ಪುಟಕ್ಕೆ

ಬಿಎಸ್‌ವೈ, ಶ್ರೀರಾಮುಲು ಮೇಲೆ ಕೊರೊನಾಸ್ತ್ರ ಪ್ರಯೋಗ!

ಕೊರೊನಾ ಸಂದರ್ಭ ಚಿಕಿತ್ಸೆ, ನಿರ್ವಹಣೆಯಲ್ಲಿ ಬಹುಕೋಟಿ ಲೂಟಿ ಆರೋಪ; ನ್ಯಾಯಮೂರ್ತಿ ಜಾನ್ ಮೈಕಲ್ ಡಿ.ಕುನ್ಹಾ ನೇತೃತ್ವದ ಆಯೋಗ ತನಿಖೆಗೆ ಶಿಫಾರಸು


ಬಿ.ಎಸ್.ಯಡಿಯೂರಪ್ಪ

ಬೆಂಗಳೂರು, ನ.9(ಕೆಎಂಶಿ)– ಕೋವಿಡ್–19 ಸಂದರ್ಭದಲ್ಲಿ ಚಿಕಿತ್ಸೆ ಹಾಗೂ ನಿರ್ವಹಣೆ ಹೆಸರಿನಲ್ಲಿ ನಡೆದಿದೆ ಎನ್ನಲಾದ ಹಗರಣದಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಬಿ.ಶ್ರೀರಾಮುಲು ವಿರುದ್ಧ ತನಿಖೆಗೆ ನ್ಯಾಯಮೂರ್ತಿ ಜಾನ್‌ಮೈಕಲ್ ಡಿ.ಕುನ್ಹಾ ನೇತೃತ್ವದ ಆಯೋಗ ಶಿಫಾರಸು ಮಾಡಿದೆ.

ಸಿದ್ದರಾಮಯ್ಯ ಗೊಡ್ಡು ಬೆದರಿಕೆಗೆ ಬಗ್ಗುವುದೂ ಇಲ್ಲ; ಜಗ್ಗುವುದೂ ಇಲ್ಲ!

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕಿಡಿನುಡಿ

ಬೆಂಗಳೂರು, ನ.9(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೊಡ್ಡು ಬೆದರಿಕೆಗಳಿಗೆ ಬಗ್ಗುವುದೂ ಇಲ್ಲ, ಜಗ್ಗುವುದೂ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಿಡಿಕಾರಿದ್ದಾರೆ. ನನ್ನ ಆಡಳಿತಾವಧಿಯಲ್ಲಿ ಯಾವುದೇ ತಪ್ಪುಗಳು ನಡೆದಿಲ್ಲ, ಎಲ್ಲಾ ಕಾನೂನಾತ್ಮಕವಾಗಿಯೇ ಆಗಿದೆ, ಯಾವುದೇ ತನಿಖೆಗಳನ್ನಾದರೂ ನಡೆಸಲಿ. ತಮ್ಮ ವಿರೋಧಿಗಳನ್ನು ಬಗ್ಗುಬಡಿಯಲು ತಮಗೆ ಬೇಕಾದಂತೆ ಆಯೋಗ ಮತ್ತು ತನಿಖಾ ಸಂಸ್ಥೆಗಳನ್ನು ನೇಮಕ ಮಾಡಿ ಹೆದರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಲಾಭವಿಲ್ಲ, ಪ್ರಯೋಜನವೂ ಆಗುವುದಿಲ್ಲ, ನಮಗೂ ಕಾನೂನು ಮತ್ತು ನ್ಯಾಯಾಲಯ ಇದೆ, ಹೋರಾಟ ಮಾಡುತ್ತೇವೆ ಎಂದು ಗುಡುಗಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಅಧಿಕಾರದ ಬುಡ ಅಲ್ಲಾಡುತ್ತಿದೆ. ಭ್ರಷ್ಟಾಚಾರದ ಆರೋಪಗಳು ಅವರನ್ನು ಸುತ್ತುವರೆದಿವೆ. ಒಂದರ ಮೇಲೊಂದು ತನಿಖೆ ನಡೆಯುತ್ತಿದೆ. ಇದರಿಂದ ಹತಾಶರಾಗಿ ಇಂತಹ ತನಿಖೆಗಳನ್ನು ಮಾಡಿ ನಮ್ಮನ್ನು ಹೆದರಿಸಲು ಹೊರಟಿದ್ದಾರೆ. ಉಪಚುನಾವಣೆ ನಂತರ ಅಧಿಕಾರದಿಂದ ಕೆಳಗಿಳಿಯಬೇಕೆಂಬುದು ಮುಖ್ಯಮಂತ್ರಿ ಅವರಿಗೂ ಗೊತ್ತಿದೆ, ಹೀಗಾಗಿ ವಿರೋಧ ಪಕ್ಷಗಳ ಮೇಲೆ

● 6ನೇ ಪುಟಕ್ಕೆ


ಶ್ರೀರಾಮುಲು

ಈ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಕುನ್ಹಾ ನೇತೃತ್ವದ ಆಯೋಗವು ನೀಡಿರುವ ವರದಿಯನ್ನು ಕಾಂಗ್ರೆಸ್ ಬಹಿರಂಗಪಡಿಸಿದೆ. ಆಯೋಗವು ಕಳೆದ ಆಗಸ್ಟ್ 31ರಂದು ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿ, ಈ ಹಗರಣದಲ್ಲಿ ಆರೋಗ್ಯ, ನಗರಾಭಿವೃದ್ಧಿ, ಪೌರಾಡಳಿತ, ವೈದ್ಯಕೀಯ ಇಲಾಖಾ ಅಧಿಕಾರಿಗಳು ಭಾಗಿಯಾಗಿದ್ದಾರೆ. ಇವರಿಂದ 700 ಕೋಟಿ ರೂ. ವಸೂಲಿ

● 6ನೇ ಪುಟಕ್ಕೆ

ಮೈಸೂರಲ್ಲಿ ಸಚಿವ–ಕಾಂಗ್ರೆಸ್ ಮುಖಂಡ ಮಾರಾಮಾರಿ!



ಮೈಸೂರು, ನ. 9– ಹಣದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಭಾವಿ ಸಚಿವರು ಮತ್ತು ಹಿರಿಯ ಕಾಂಗ್ರೆಸ್ ಮುಖಂಡನ ನಡುವೆ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ರಾತ್ರಿ ಮಾರಾಮಾರಿ ನಡೆದಿದೆ.

ಮೈಸೂರಿನ ನೆರೆಯ ಜಿಲ್ಲೆಯ ಈ ಇಬ್ಬರೂ ಮುಖಂಡರು ಪರಸ್ಪರ ಮಾರಾಮಾರಿ ನಡೆಸಿದ ವಿಚಾರ ಭಾರಿ ಸದ್ದು ಮಾಡುವುದರ ಜೊತೆಗೆ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಈ ಹಿಂದೆ ನಡೆದಿದ್ದ ವಿಧಾನಪರಿಷತ್ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಲು ಹಿರಿಯ ಕಾಂಗ್ರೆಸ್ ಮುಖಂಡನಿಗೆ ಇಂತಿಷ್ಟು ಹಣ ನೀಡುವುದಾಗಿ ಭರವಸೆ ನೀಡಿದ್ದ ಸಚಿವರು, ಆ ಸಂದರ್ಭದಲ್ಲಿ ಭಾಗಶಃ ಹಣ ಕೊಟ್ಟಿದ್ದರಂತೆ. ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿ ಗೆದ್ದದ್ದೂ ಆಯಿತು. ಆದರೆ, ಕಾಂಗ್ರೆಸ್ ಮುಖಂಡನಿಗೆ ಸಚಿವರು ಭರವಸೆ ನೀಡಿದ್ದಂತೆ ಹಣ ಪಾವತಿಸಿರಲಿಲ್ಲವಂತೆ. ಅಲ್ಲದೇ, ಸಚಿವರು ಈ ಮುಖಂಡನ ಸಂಪರ್ಕಕ್ಕೂ ಸಿಗಲಿಲ್ಲವಂತೆ. ಶುಕ್ರವಾರ ರಾತ್ರಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಮಂಡ್ಯ ಜಿಲ್ಲೆಯ ರಾಜಕಾರಣಿಯೊಬ್ಬರ ಮನೆಯ ಖಾಸಗಿ ಕಾರ್ಯಕ್ರಮದಲ್ಲಿ ಸಚಿವರು ಮತ್ತು ಆ ಕಾಂಗ್ರೆಸ್ ಮುಖಂಡ ಮುಖಾಮುಖಿಯಾಗಿದ್ದಾರೆ. ದಶಕಗಳ ಕಾಲ ಸ್ನೇಹಿತರಾಗಿರುವ ಇವರಿಬ್ಬರು ಒಟ್ಟಿಗೆ ಕುಳಿತು ಮಾತನಾಡುತ್ತಿದ್ದ ವೇಳೆ ವಿಧಾನಪರಿಷತ್ ಚುನಾವಣೆ ವೇಳೆ ಮಾತು ಕೊಟ್ಟಂತೆ ತನಗೆ ಹಣ ಪಾವತಿಸಲಿಲ್ಲ. ಅಭ್ಯರ್ಥಿ ಗೆದ್ದ ನಂತರ ನನ್ನ ಸಂಪರ್ಕಕ್ಕೆ ನೀವು

● 6ನೇ ಪುಟಕ್ಕೆ

ಮಹಾರಾಷ್ಟ್ರ ಚುನಾವಣೆಗಾಗಿ ಕರ್ನಾಟಕ ಕಾಂಗ್ರೆಸ್‌ನಿಂದ 700 ಕೋಟಿ ವಸೂಲಿ

ಪ್ರಧಾನಿ ಮೋದಿ ಗಂಭೀರ ಆರೋಪ



ಮುಂಬೈ, ನ.9– ಮಹಾರಾಷ್ಟ್ರ ಚುನಾವಣೆ ವೆಚ್ಚಕ್ಕಾಗಿ ಕರ್ನಾಟಕ ಕಾಂಗ್ರೆಸ್ ಪಕ್ಷವು ಬರೋಬ್ಬರಿ 700 ಕೋಟಿ ವಸೂಲಿ ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಆರೋಪಿಸಿದ್ದಾರೆ.

ಚುನಾವಣೆ ಸಲುವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಗಳ ಪರ ಅಕೋಲದಲ್ಲಿ ಪ್ರಚಾರ ನಡೆಸಿದ ಮೋದಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರುವ ರಾಜ್ಯವು ಆ ಪಕ್ಷದ 'ರಾಯಲ್ ಫ್ಯಾಮಿಲಿ' ಪಾಲಿಗೆ ಎಟಿಎಂ ಆಗಿ ಬದಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ, ಹಿಮಾಚಲ ಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳು ಆ ಕುಟುಂಬದ ಎಟಿಎಂಗಳಾಗಿವೆ ಎಂದು ದೂರಿದ್ದಾರೆ. ಮಹಾರಾಷ್ಟ್ರ ಚುನಾವಣೆ ಹೆಸರಿನಲ್ಲಿ ಕರ್ನಾಟಕದಲ್ಲಿ ವಸೂಲಿ ಮೊತ್ತವನ್ನು ದ್ವಿಗುಣಗೊಳಿಸಲಾಗಿದೆ ಎಂದು ಜನರು ಹೇಳುತ್ತಿದ್ದಾರೆ. ಚುನಾವಣೆ ನಡೆಯುತ್ತಿರುವುದು ಮಹಾರಾಷ್ಟ್ರದಲ್ಲಿ. ಆದರೆ, ವಸೂಲಿಯನ್ನು ದ್ವಿಗುಣಗೊಳಿಸಿರುವುದು ಕರ್ನಾಟಕ ಮತ್ತು ತೆಲಂಗಾಣದಲ್ಲಿ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರದ ವಿರುದ್ಧ ಚಾಟಿ ಬೀಸಿರುವ ಅವರು, ರಾಜ್ಯದಲ್ಲಿ ಮದ್ಯದಂಗಡಿಗಳ ಮಾಲೀಕರಿಂದ ಆ ಪಕ್ಷದವರು 700 ಕೋಟಿ ಸಂಗ್ರಹಿಸಿದ್ದಾರೆ ಎಂಬ ಆರೋಪವಿದೆ ಎಂಬ ಬಾಣ ಬಿಟ್ಟಿದ್ದಾರೆ. 288 ಸದಸ್ಯ

● 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರದಿಂದ ಇಳಿಸಲು ಮುಡಾ ಹಗರಣ ಬಯಲು ಮಾಡಿದ್ದೇ ಡಿಕೆಶಿ!

● ಶಾಸಕ ಜನಾರ್ಧನ ರೆಡ್ಡಿ ಹೊಸ ಬಾಂಬ್ ● ಸಿದ್ದರಾಮಯ್ಯ ಬೆಂಬಲಿಗರ ಹೆಸರಲ್ಲಿ ಬೇನಾಮಿಯಾಗಿ ಸೈಟ್ ಮಾಡಿದ್ದಾರೆ; ಇಡಿ ತನಿಖೆ ವೇಳೆ ಬಯಲಾಗಿದೆ: ಆರೋಪ

ಮೈಸೂರು, ನ. 9– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂಬ ಕಾರಣಕ್ಕಾಗಿ ಮುಡಾ ಹಗರಣವನ್ನು ಬಯಲು ಮಾಡಿದ್ದೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂದು ಶಾಸಕ ಜನಾರ್ಧನ ರೆಡ್ಡಿ ಬಾಂಬ್ ಸಿಡಿಸಿದ್ದಾರೆ.

ಖಾಸಗಿ ಸುದ್ದಿ ವಾಹಿನಿಯ ಸಂದರ್ಶನದಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಯಾರೂ ಮಾಹಿತಿ ಹಕ್ಕು ಅಡಿ ಅರ್ಜಿ ಹಾಕಿ ವಿವರ ಪಡೆದು ಪ್ರಕರಣವನ್ನು ಬಯಲು ಮಾಡಿಲ್ಲ. ಆದರೆ, ಸಿದ್ದರಾಮಯ್ಯ ಮೊಂಡು ವ್ಯಕ್ತಿ, ಅವರು ಅಧಿಕಾರವನ್ನು ಬಿಟ್ಟು ಕೊಡುವುದಿಲ್ಲ ಎಂಬ ಕಾರಣಕ್ಕಾಗಿ ಹಾಗೂ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲು ಡಿ.ಕೆ ಶಿವಕುಮಾರ್ ಮುಡಾ ಹಗರಣ ಬಯಲು ಮಾಡಿದರು ಎಂದು ರೆಡ್ಡಿ ಹೇಳಿದರು.

● 6ನೇ ಪುಟಕ್ಕೆ


ಜನಾರ್ಧನ ರೆಡ್ಡಿ



ಸಿದ್ದರಾಮಯ್ಯ ಸ್ವಕ್ಷೇತ್ರ ವರುಣದಲ್ಲೂ 'ವಕ್ಫ್ ಆಸ್ತಿ' ಆತಂಕ

ತಿ.ನರಸೀಪುರದ ರಂಗಸಮುದ್ರದ ಸ್ಮಶಾನ ಜಾಗ ಈಗ ಮುಸಲ್ಮಾನರ ಖಬ್ರಸ್ತಾನ ಉಲ್ಲೇಖ

ಮೈಸೂರು, ನ.9(ಬಿಎಲ್‌ಯು)– ಈ ತನಕ ಉತ್ತರ ಕರ್ನಾಟಕದಲ್ಲಿ ಭಾರಿ ಸದ್ದು ಮಾಡಿದ್ದ ವಕ್ಫ್ ವಿವಾದ ಈಗ ಮೈಸೂರಿಗೂ ಕಾಲಿಟ್ಟಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರದಲ್ಲಿ ಸ್ಮಶಾನದ ಭೂಮಿ ಪಹಣಿಯಲ್ಲಿ ಮುಸಲ್ಮಾನರ ಖಬ್ರಸ್ತಾನ್ ಸುನ್ನಿ ವಕ್ಫ್ ಆಸ್ತಿ ಎಂಬ ಉಲ್ಲೇಖವಿದೆ.

ರಾಜ್ಯದ ನೂರಾರು ರೈತರ, ಶಾಲೆ, ದೇವಸ್ಥಾನ ವಕ್ಫ್‌ಗೆ ಸೇರಿದ ಆಸ್ತಿ ಎಂದು ಪಹಣಿಯಲ್ಲಿ ಈಗಾಗಲೇ ನಮೂದಾಗಿದೆ. ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯ ರೈತರ ಭೂಮಿ ವಕ್ಫ್ ಆಸ್ತಿ ಎಂದು ತಿದ್ದುಪಡಿ ಮಾಡಿದ ಕಾರಣ ಆ ಭಾಗದಲ್ಲಿ ಹೋರಾಟ ತೀವ್ರಗೊಂಡಿದೆ. ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಇತರರು ಸತ್ಯಾಗ್ರಹ ಕೂಡ ನಡೆಸುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ದಿನ ನಿತ್ಯ ಸದ್ದು ಮಾಡಿದ್ದ ವಕ್ಫ್ ವಿವಾದ ಈಗ ಮೈಸೂರಿಗೂ ಕಾಲಿಟ್ಟಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುತ್ತಿರುವ ವರುಣ ಕ್ಷೇತ್ರದ ರಂಗಸಮುದ್ರ ಗ್ರಾಮದ ಸ್ಮಶಾನ ಭೂಮಿಯನ್ನು ಮುಸಲ್ಮಾನರ ಖಬ್ರಸ್ತಾನ್ ವಕ್ಫ್ ಆಸ್ತಿ ಎಂದು ಉಲ್ಲೇಖಿಸಲಾಗಿದೆ.

ಮೈಸೂರಿನ ತಿ.ನರಸೀಪುರ ತಾಲೂಕು ರಂಗಸಮುದ್ರ ಗ್ರಾಮದ ಸ್ಮಶಾನಕ್ಕೆ ಸೇರಿದ ಸರ್ವೆ ನಂಬರ್ 257ರ 19 ಗುಂಟೆ ಭೂಮಿಯನ್ನು ವಕ್ಫ್‌ಗೆ ಸೇರಿದ ಆಸ್ತಿ ಎಂದು ಉಲ್ಲೇಖಿಸಲಾಗಿದೆ. 2019–20ರವರೆಗೆ ಈ ಭೂಮಿ ಪಹಣಿಯಲ್ಲಿ ಕಪನಯ್ಯನ ತೋಪು ಎಂಬುದು ಉಲ್ಲೇಖಿಸಲಾಗಿತ್ತು. ಆ ಊರಿನ ಜನರು ಸ್ಮಶಾನವಾಗಿ ಬಳಕೆ ಮಾಡಿಕೊಳ್ಳುತ್ತಿದ್ದರು. ರೈತನೊಬ್ಬ ಖಾಲಿ ಭೂಮಿಯಲ್ಲಿ ಉಳುಮೆ ಮಾಡುತ್ತಿದ್ದ. ಇದರಿಂದ ಪಹಣಿಯಲ್ಲಿ ಭತ್ತ ಬೆಳೆಯುತ್ತಿರುವುದನ್ನು ಉಲ್ಲೇಖಿಸಲಾಗಿತ್ತು. ಆದರೆ ಈಗ ಜನವರಿ 10–1–2002ರ ಎಂಡಿಡಬ್ಲ್ಯೂ ಬಿ 19(2) 01–04–1965 ರ ಕ್ರಮ ಸಂಖ್ಯೆ 317 ವಕ್ಫ್ ಅಧಿಸೂಚನೆ ಸಂಖ್ಯೆ ಆಧಾರದ ಮೇಲೆ ಇ–ಖಾತೆ ಮಾಡಲಾಗಿದೆ.

ಖಾತೆ ನಂಬರ್ 999ನಲ್ಲಿ ಮುಸಲ್ಮಾನರ ಖಬ್ರಸ್ತಾನ್ ಸುನ್ನಿ, ವಕ್ಫ್ ಆಸ್ತಿ ಎಂದು ಉಲ್ಲೇಖಿಸಲಾಗಿದೆ. 2019–20ರಲ್ಲಿ ಇದೇ ಭೂಮಿಯಲ್ಲಿ ಭತ್ತ ಬೆಳೆದಿರುವ ಬಗ್ಗೆ ಆರ್‌ಟಿಸಿಯಲ್ಲಿ ಸ್ಪಷ್ಟ ಉಲ್ಲೇಖವಿದೆ.

ಕಪನಯ್ಯನ ತೋಪು ಎಂದು ಉಲ್ಲೇಖವಿದ್ದ ಭೂಮಿಯ ಪಹಣಿಯಲ್ಲಿ ಈಗ ದಿಢೀರ್ 'ವಕ್ಫ್ ಆಸ್ತಿ' ಎಂದು ಉಲ್ಲೇಖಿಸಲಾಗಿದೆ. 2024–25ರ ಪಹಣಿಯಲ್ಲಿ ಇದೇ ಉಲ್ಲೇಖವಿದೆ.

ವಕ್ಫ್ ತಿದ್ದುಪಡಿ ವಿವಾದ ತೀವ್ರವಾದಂತೆ ಈ ಆದೇಶ ವಾಪಸ್ಸು ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಇದರಿಂದ ತಮ್ಮ ಭೂಮಿಯ ಪಹಣಿಯಲ್ಲಿ ವಕ್ಫ್ ಎಂಬ ಉಲ್ಲೇಖ ತೆರವಾಗುತ್ತದೆ ಎಂದು ರೈತರು ನಿಟ್ಟುಸಿರು ಬಿಟ್ಟಿದ್ದರು. ಆದರೆ ಈ ತನಕ ಎಲ್ಲೂ ಕೂಡ ವಕ್ಫ್ ಎಂಬ ಉಲ್ಲೇಖವನ್ನು ತೆರವು ಮಾಡಿಲ್ಲ. ಇದರಿಂದ ವಕ್ಫ್ ವಿವಾದ ದಿನ ಕಳೆದಂತೆ ತೀವ್ರ ವಿವಾದಕ್ಕೆ ಆಸ್ಪದವಾಗುತ್ತಿದೆ.

> “ವಕ್ಫ್ ಆಸ್ತಿ ಎಂದು ಈಗ ಉಲ್ಲೇಖಿಸಿರುವ ರಂಗಸಮುದ್ರದ ಜಾಗ ಸ್ಮಶಾನ ಎಂಬ ಮಾಹಿತಿ ಇದೆ. ಆ ಭೂಮಿ ಜಾಗದ ಪಹಣಿಯಲ್ಲಿ 2022ರಲ್ಲೇ ಖಬ್ರಸ್ತಾನ ಎಂದು ಉಲ್ಲೇಖಿಸಲಾಗಿದೆ. ಪಹಣಿಯಲ್ಲಿ ವಕ್ಫ್ ಆಸ್ತಿ ಎಂಬ ಉಲ್ಲೇಖವನ್ನು ಈಗ ಮಾಡಿಲ್ಲ. ಈ ಜಾಗ ಹಿಂದೆ ಸ್ಮಶಾನವಾಗಿತ್ತು ಎಂಬ ಮಾಹಿತಿ ಇದೆ. ಆದರೂ ಈ ಜಾಗ ಯಾರಿಗೆ ಸೇರಿತ್ತು, ಯಾರು ಉಳುಮೆ ಮಾಡುತ್ತಿದ್ದರು ಎಂಬ ಬಗ್ಗೆ ದಾಖಲಾತಿ ಪರಿಶೀಲನೆ ನಡೆಯುತ್ತಿದೆ. ಇದು ಬಿಟ್ಟರೆ ಮೈಸೂರಿನ ಎಲ್ಲೂ ಕೂಡ ವಕ್ಫ್ ಆಸ್ತಿ ಎಂದು ಉಲ್ಲೇಖ ಮಾಡಿಲ್ಲ
> – ಜಿ.ಲಕ್ಷ್ಮಿಕಾಂತ ರೆಡ್ಡಿ, ಮೈಸೂರು ಜಿಲ್ಲಾಧಿಕಾರಿ.



ನಕ್ಕರೆ ಅದೇ ಸ್ವರ್ಗ

ಟೀಚರ್ : ಲೋ ಗುಂಡ, ಅಕ್ಬರ್ ಯಾರು ಅಂತ ಗೊತ್ತ?
ಗುಂಡ : ಇಲ್ಲ ಟೀಚರ್
ಟೀಚರ್ : ಸ್ವಲ್ಪ ಓದಿನ ಕಡೆ ಗಮನ ಕೊಡು ಗೊತ್ತಾಗುತ್ತೆ.
ಗುಂಡ : ಟೀಚರ್, ರವಿ, ಸೋಮು, ರಾಜು ಯಾರು ಅಂತ ಗೊತ್ತ?
ಟೀಚರ್ : ಇಲ್ಲ
ಗುಂಡ : ಸ್ವಲ್ಪ ನಿಮ್ಮ ಮಗಳ ಕಡೆ ಗಮನ ಕೊಡಿ ಗೊತ್ತಾಗುತ್ತೆ.

ಮೈಸೂರು ಮಿತ್ರ

ಭಾನುವಾರ, 10 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನನ್ನಂತವರು ಕನ್ನಡಕ್ಕೆ ಅನೇಕರಿದ್ದಾರೆ.
ಆದರೆ ನನಗಿರುವುದು ಒಂದೇ ಕನ್ನಡ. – ಅ.ನ. ಕೃಷ್ಣರಾಯರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

■ ಅನ್ನಭಾಗ್ಯ 'ಅನ್ಯರಭಾಗ್ಯ' ಆಗದಿರಲಿ



ಮಾನ್ಯರೆ,

ಸರ್ಕಾರದ 'ಅನ್ನಭಾಗ್ಯ' ಯೋಜನೆಯು ಕೂಲಿಕಾರ್ಮಿಕರಿಗೆ ಹಾಗೂ ಕಡುಬಡವರಿಗೆ ಮೂರು ಹೊತ್ತು ಹಸಿವನ್ನು ನೀಗಿಸುವ ಮಹತ್ತರವಾದ ಯೋಜನೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ, ಆದರೆ ಸಮರ್ಪಕವಾಗಿ ಹಾಗೂ ಗುಣಾತ್ಮಕವಾಗಿ ಅನುಷ್ಠಾನ ಆಗುತ್ತಿಲ್ಲ ಎನ್ನುವುದು ಸಾರ್ವಜನಿಕರ ಅಭಿಪ್ರಾಯ. ವಂಚನೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರವು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರೂ ಬಹಳಷ್ಟು ಫಲಾನುಭವಿಗಳು ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ತಡೆಯಲಾಗುತ್ತಿಲ್ಲ. ಇಲ್ಲಿ ಹಸಿದವರಿಗಿಂತ ಹೆಚ್ಚು ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಬಲಿಷ್ಠರು ಇದರ ಉಪಯೋಗವನ್ನು ಪಡೆಯುತ್ತಿರುವುದು ಸುಳ್ಳಲ್ಲ. ನ್ಯಾಯಸಮ್ಮತವಾಗಿ ಅರ್ಹರಿರುವ ಫಲಾನುಭವಿಗಳು ಕೊಟ್ಟ ಅಕ್ಕಿ ಮತ್ತು ಇತರೆ ದಿನಸಿಗಳನ್ನು ಲೋಪವಾಗದ ಹಾಗೆ ಉಪಯೋಗಿಸಿಕೊಂಡು ತಮಗಿದ್ದ ಆಹಾರದ ಕೊರತೆಯಿಂದ ಹೊರಬಂದು ನಿರುಮ್ಮಳವಾಗಿದ್ದಾರೆ.

ಅರ್ಹರಲ್ಲದವರು ಹಾಗೂ ಅರ್ಹರಿದ್ದು ದುಶ್ಚಟಗಳಿಗೆ ಬಲಿಯಾದವರು ನ್ಯಾಯಬೆಲೆ ಅಂಗಡಿಯಲ್ಲಿ ಅವರ ಪಾಲಿನ ಅಕ್ಕಿಯನ್ನು ಪಡೆದು ಅಲ್ಲೇ ಮಾರಿಕೊಳ್ಳುವುದು ಇಲ್ಲವೆ ಮನೆಗಳ ಬಳಿಗೆ ಬಂದು ಪ್ರತೀ ಕೆಜಿಗೆ ರೂಪಾಯಿ ಹದಿನೈದು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಕೊಟ್ಟು ತೆಗೆದುಕೊಳ್ಳುತ್ತಿರುವುದು ಎಲ್ಲರಿಗೂ ಗೊತ್ತಿರುವಂತಹದ್ದೆ. ವಿಪರ್ಯಾಸವೆಂದರೆ ಐವತ್ತು ಎಕರೆಯಷ್ಟು ಜಮೀನು ಹೊಂದಿರುವವರು, ಆರ್‌ಸಿಸಿ ಮನೆ ಇರುವ ಹಾಗೂ ಕಾರು ಬೈಕುಗಳಲ್ಲಿ ಓಡಾಡಿಕೊಂಡು ಆರ್ಥಿಕವಾಗಿ ಸಬಲವಾಗಿರುವವರು ಅನ್ನಭಾಗ್ಯದ ಫಲಾನುಭವಿಗಳು.

ಅನ್ನಭಾಗ್ಯದ ಅಕ್ಕಿಗೆ ಕಾಳಸಂತೆಯ ಚೋರರು ಹೆಚ್ಚಿನ ಪಾಲಿಶ್ ಕೊಟ್ಟು ಅದೇ ಅಕ್ಕಿಯನ್ನು ಸೋನಾಮಸೂರಿ ಅಥವಾ ಬುಲೆಟ್‌ರೈಸ್ ಹೆಸರಿನಲ್ಲಿ ಕೊಂಡ ದರಕ್ಕಿಂತ ಸರಿಸುಮಾರು ನಾಲ್ಕೈದು ಪಟ್ಟು ಹೆಚ್ಚಿನ ದರಕ್ಕೆ ಮಾರುತ್ತಿದ್ದಾರೆಂದರೆ ನಂಬಲಿಕ್ಕೆ ಕಷ್ಟವಾಗಬಹುದು. ಹದಿನೈದಕ್ಕೆ ಕೊಂಡ ಅಕ್ಕಿಯನ್ನು ಅರವತ್ತು ಎಪ್ಪತ್ತಕ್ಕೆ ಮಾರುವುದೆಂದರೆ ಲಾಭದ ವ್ಯಾಪಾರವಲ್ಲವೇ? ಅದಕ್ಕೇ ಹೇಳಿದ್ದು 'ಅನ್ಯರಭಾಗ್ಯ' ಎಂದು.

ಕಾಳಸಂತೆಯಲ್ಲಿ ಅಕ್ಕಿಯನ್ನು ಮಾರುತ್ತಿರುವುದಕ್ಕೆ ಎರಡು ಕಾರಣಗಳೆಂದರೆ: ಒಂದು ಫಲಾನುಭವಿಗಳಲ್ಲಿ ಆರ್ಥಿಕವಾಗಿ ಮೇಲಸ್ತರದಲ್ಲಿ ಇರುವವರು ಮತ್ತೊಂದು ಫಲಾನುಭವಿಗಳೇ ಹೇಳುವಂತೆ ಕೊಡುವ ಅಕ್ಕಿಯು ಗುಣಾತ್ಮಕವಾಗಿ ಇಲ್ಲದಿರುವುದು. ಸೌಲಭ್ಯವು ಸಮರ್ಪಕವಾಗಿ ಹಾಗೂ ಸೂಕ್ತವಾದವರಿಗೆ ಸಿಗಬೇಕಾದರೆ ಈ ಎರಡು ಅಂಶಗಳ ಬಗ್ಗೆ ಸರ್ಕಾರವು ಕ್ರಮವಹಿಸಿದರೆ ಶೇಕಡ ನೂರರಷ್ಟು ಅನ್ನಭಾಗ್ಯ ಯೋಜನೆಯು ಯಶಸ್ವಿ ಆಗುವುದರಲ್ಲಿ ಸಂದೇಹವೇ ಇಲ್ಲ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

■ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್‌ರ ಇಬ್ಬಂದಿ ನೀತಿ

ಮಾನ್ಯರೆ,

ಬಿಜೆಪಿ ಸರ್ಕಾರದ ಆಡಳಿತ ಅವಧಿಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ, ಹಾಲೀ ಯಶವಂತಪುರದ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರು ಬಹಿರಂಗವಾಗೇ ಕಾಂಗ್ರೆಸ್ ಪಾಳೆಯದಲ್ಲಿ ಗುರುತಿಸಿಕೊಳ್ಳುವ ಮೂಲಕ ತಮ್ಮ ಇಬ್ಬಂದಿ ನೀತಿಯನ್ನು ಪ್ರದರ್ಶಿಸಿದ್ದಾರೆ.


ಈ ಹಿಂದೆ ಜೆಡಿಎಸ್– ಕಾಂಗ್ರೆಸ್ ಸರ್ಕಾರದ ಪತನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಂತರ ಬಿಜೆಪಿ ವಲಯದಲ್ಲಿ ಗುರುತಿಸಿಕೊಂಡು ಯಶವಂತಪುರ ಕ್ಷೇತ್ರದಿಂದ ಆಯ್ಕೆಯಾಗಿ ಯಡಿಯೂರಪ್ಪ ಹಾಗೂ ಬೊಮ್ಮಾಯಿ ಸರ್ಕಾರದಲ್ಲಿ ಪ್ರಮುಖ ಸಚಿವ ಖಾತೆ ಜೊತೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಧಿಕಾರದ ಸವಿ ಉಂಡ ಸೋಮಶೇಖರ್ ಪ್ರಸ್ತುತ ಬಿಜೆಪಿ ಶಾಸಕರಾಗಿದ್ದೂ ಸಹ ಸ್ವಾಮಿನಿಷ್ಠೆ ಮಾತ್ರ ಕಾಂಗ್ರೆಸ್ ಕಡೆ ತೋರುತ್ತಿರುವುದು ನ್ಯಾಯಸಮ್ಮತವೇ ಎಂಬ ಪ್ರಶ್ನೆ ಕಾಡುತ್ತದೆ.

ಬಿಜೆಪಿ ಪಕ್ಷದಿಂದ ಆಯ್ಕೆಯಾಗಿರುವ ಸೋಮಶೇಖರ್ ಕಾಂಗ್ರೆಸ್ ಪಕ್ಷದ ಕಚೇರಿಗೆ ಭೇಟಿ ನೀಡುತ್ತಾರೆ. ಅಲ್ಲದೇ ಚನ್ನಪಟ್ಟಣ ಉಪಚುನಾವಣೆ ವೇದಿಕೆಯಲ್ಲಿ ಉಪಸ್ಥಿತರಿದ್ದು, ಕಾಂಗ್ರೆಸ್ ಪರ ಮತಯಾಚಿಸುವ ಮೂಲಕ ಸೋಮಶೇಖರ್ ಅವರು ಇಬ್ಬಂದಿ ನೀತಿ ಅನುಸರಿಸುತ್ತಿರುವುದು ಎಷ್ಟು ಸಮಂಜಸ? ಕೆಲ ದಿನಗಳ ಹಿಂದೆ ಬಿಜೆಪಿಯ ಏಳೆಂಟು ಶಾಸಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆಂದು ಹೇಳುವ ಮೂಲಕ ಬಹಿರಂಗವಾಗಿ ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಹೀಗಿದ್ದೂ ಅವರ ವಿರುದ್ಧ ಯಾವುದೇ ದಿಟ್ಟ ಕ್ರಮ ಅನುಸರಿಸುವಲ್ಲಿ ಬಿಜೆಪಿ ನಾಯಕರು ಹಿಂದೇಟು ಹಾಕುತ್ತಿರುವ ಗೂಢಾರ್ಥ ತಿಳಿಯದಾಗಿದೆ.

– ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

■ ಮಿಂಚಿ ಮರೆಯಾದ ಅದ್ಭುತ ನಟ ಶಂಕರ್‌ನಾಗ್

ಮಾನ್ಯರೆ,



ಬನ್ನೂರು ರಾಜು ಅವರು ಬರೆದ 'ಶರವೇಗದ ಶಂಕರ್ ನಾಗ್' ಲೇಖನ ಓದಿ ಶಂಕರನಾಗ್ ಅವರ ಅದ್ಭುತವಾದ ನಟನೆ, ಕ್ರಿಯಾಶೀಲತೆ, ಚಿಂತನೆಗಳ ಬಗ್ಗೆ ಹೆಮ್ಮೆ ಎನಿಸಿತು .ಹಾಗೆಯೇ ಇಷ್ಟು ಸಣ್ಣ ವಯಸ್ಸಿನಲ್ಲಿ ಇಂತಹ ಕ್ರಿಯಾಶೀಲ ವ್ಯಕ್ತಿ ಮರೆಯಾಗಿದ್ದು ಬೇಸರವಾಯಿತು.ಕೇವಲ 12 ವರ್ಷದಲ್ಲಿ 90ಕ್ಕೂ ಅಧಿಕ ಚಿತ್ರಗಳಲ್ಲಿ ನಟನೆ, ರಂಗಭೂಮಿ ಚಟುವಟಿಕೆ, ನಿರ್ದೇಶನ, ಸಾಮಾಜಿಕ ಚಿಂತನೆಗಳು, ಬೆಂಗಳೂರು ಹೇಗಿರಬೇಕು ಎಂಬ ಕನಸ್ಸು ಮತ್ತು ಅದಕ್ಕೆ ಬೇಕಾದ ಸಲಹೆಗಳು ಎಲ್ಲವನ್ನೂ ನೋಡಿದರೆ ಎಂತಹ ಅದ್ಭುತ ಪ್ರತಿಭಾವಂತ ಮತ್ತು ಕ್ರಿಯಾಶೀಲ ವ್ಯಕ್ತಿ ಎಂದು ತಿಳಿಯುತ್ತದೆ.

'ಒಂದಾನೊಂದು ಕಾಲದಲ್ಲಿ 'ಜೀವಕ್ಕೆ ಜೀವ' ಕೊಡುತ್ತಿದ್ದ 'ಹೊಸ ಜೀವನ' ನಡೆಸಲು 'ಮುನಿಯನ ಮಾದರಿ' ಆಗಿದ್ದ ಸಿನಿಮಾರಂಗದಲ್ಲಿ 'ಗೆದ್ದ ಮಗ' ಆಗಿದ್ದ 'ಮಿಂಚಿನ ಓಟ'ದಲ್ಲಿ ಓಡುತ್ತಿದ್ದ, ಓಡಿಸುತ್ತಿದ್ದ 'ಆಟೋರಾಜ', 'ಆಕ್ಸಿಡೆಂಟ್' ನಲ್ಲಿ ಜೀವ ಕಳೆದುಕೊಂಡಿದ್ದು ನೋಡಿದರೆ 'ನ್ಯಾಯ ಎಲ್ಲಿದೆ' ಅನಿಸುತ್ತದೆ. 'ದೇವರ ಆಟ' ಬಲ್ಲವರಾರು?

–ರಾಘವೇಂದ್ರ ಜೋಯಿಸ್, ಮೈಸೂರು

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಸಾಧನೆಗೆ ಛಲವೇ ಬಲ...!

ಉಡುಪಿಯ ಹೆಸರನ್ನು ಕೇಳದವರಾರು? ಜಗದೊಡೆಯನಾದ ಶ್ರೀ ಕೃಷ್ಣನ ದರುಶನಕ್ಕಾಗಿ ಜಗತ್ತಿನ ಎಲ್ಲೆಡೆಯಿಂದ ಅವನ ಭಕ್ತರು ಉಡುಪಿ ಕ್ಷೇತ್ರಕ್ಕೆ ಆಗಮಿಸುತ್ತಾರೆ. ಹಿಂದೆ ಅಲ್ಲೇ ಹತ್ತಿರದಲ್ಲೇ.. ಮೂರು ಮೈಲಿ ದೂರದಲ್ಲೇ ಒಂದು ಗುಡ್ಡದ ಮೇಲೆ ದೊಡ್ಡ ಹಳ್ಳವಿತ್ತು. ಮಳೆಗಾಲದ ನೀರು ಅಲ್ಲಿ ಶೇಖರವಾಗುತ್ತಿತ್ತು. ಸುತ್ತಲೂ ಗುಡ್ಡ, ದಟ್ಟ ಕಾಡು, ಕ್ರೂರ ಜಂತುಗಳಿಗೆ, ಮೃಗಗಳಿಗೆ ವಾಸ ಮಾಡಲು ಪ್ರಶಸ್ತವಾದ ಜಾಗವಾಗಿತ್ತು. ತುಳು ಭಾಷೆಯಲ್ಲಿ ಅದನ್ನು ಮಣ್ಣಪಳ್ಳ ಎಂದು ಕರೆಯುತ್ತಿದ್ದರು. ಉಡುಪಿಯಿಂದಲೂ ಸಿಕ್ಕ ವಿಷಜಂತುಗಳನ್ನು ಬಿಡಲು ಅಲ್ಲಿಗೆ ಜನ ಹೋಗುತ್ತಿದ್ದುದು ಸಾಮಾನ್ಯವಾಗಿತ್ತು. ಅದು ಈಗ ಸುಮಾರು ಎಪ್ಪತ್ತು ವರುಷಗಳ ಹಿಂದಿನ ಮಾತು. ಈಗ ಅದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿ, ತನ್ನ ಇರವನ್ನು ಅನೇಕ ಕ್ಷೇತ್ರಗಳಲ್ಲಿ ಖಚಿತಗೊಳಿಸಿರುವ ಶಾಲೆ, ಕಾಲೇಜು, ವಿಮೆ, ಬ್ಯಾಂಕ್, ವೈದ್ಯಕೀಯ–ತಾಂತ್ರಿಕ ಮಹಾ ವಿದ್ಯಾಲಯ, ಆಸ್ಪತ್ರೆ, ಗ್ರಂಥಾಲಯ, ಮುದ್ರಣಾಲಯ, ಸಾಂಸ್ಕೃತಿಕ ಕಲಾ ಕೇಂದ್ರ, ಆರೋಗ್ಯಧಾಮ ಹೀಗೆ ಅಸಂಖ್ಯಾತ ಕಾರಣಗಳಿಗಾಗಿ ಹೆಸರು ಮಾಡಿರುವ, ದೇಶ ವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುವ ಪ್ರಖ್ಯಾತ ಮಣಿಪಾಲ್ ಆಗಿ ಪರಿವರ್ತಿತವಾಗಿದೆ. ಮಾಹೆ–ಮಣಿಪಾಲ್ ಅಕಾಡಮಿ ಆಫ್ ಹೈಯರ್ ಎಜುಕೇಷನ್‌ಗೆ ಇಂದು ದೇಶದಲ್ಲಿ ಅತ್ಯಂತ ಗೌರವದ ಸ್ಥಾನ ಸಿಕ್ಕಿದೆ ಎಂದರೆ ಅತಿಶಯೋಕ್ತಿ ಅಲ್ಲ.



ಡಾ.ಟಿ.ಎಂ.ಎ. ಪೈ

ಇಷ್ಟೆಲ್ಲ ಪರಿವರ್ತನೆ ಹೇಗೆ ಸಾಧ್ಯವಾಯಿತು. ಅದಕ್ಕಿಂತ ಹೆಚ್ಚಾಗಿ ಕೇವಲ ಒಬ್ಬ ವ್ಯಕ್ತಿಯ ದೂರದೃಷ್ಟಿ, ಪರಿಶ್ರಮ ಮತ್ತು ಛಲದಿಂದ ಈ ಅಗಾಧ ಬದಲಾವಣೆ ಆಯಿತು ಎಂದರೆ, ನಂಬಲೇಬೇಕಾದ ಸತ್ಯ. ಇಂದು ನಿಮಿಷಕ್ಕೊಂದರಂತೆ ಅಲ್ಲಿಂದ ಹೊರಡುವ ಜನರಿಂದ ಕಿಕ್ಕಿರಿದಿರುವ ಬಸ್‌ಗಳು, ರೋಗಿಗಳಿಂದ ತುಂಬಿ ತುಳುಕಾಡುವ ಅತ್ಯಂತ ಆಧುನಿಕ ಆಸ್ಪತ್ರೆಗಳು, ಬೇರೆ ಬೇರೆ ದೇಶಗಳಿಂದ ಇಲ್ಲಿ ಕಲಿಯಲು ಬಂದ ವಿದ್ಯಾರ್ಥಿಗಳಿಂದ ತುಂಬಿದ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳು, ಕೆಲಸಗಾರರಿಂದ ತುಂಬಿರುವ ಹತ್ತು ಹಲವು ಕೈಗಾರಿಕೆಗಳು, ಕಾರ್ಯಾಗಾರ ಮತ್ತು ಮುದ್ರಣಾಲಯಗಳು, ರಾಷ್ಟ್ರೀಕೃತ ಸಿಂಡಿಕೇಟ್ ಬ್ಯಾಂಕಿನ ಮುಖ್ಯ ಕಚೇರಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಒಂದೇ ಎರಡೇ ಅತ್ಯಂತ ಆಧುನಿಕ ವಾತಾವರಣವು ನಿರ್ಮಾಣವಾಗಿರುವುದು ಎಷ್ಟು ಸಹಜವೋ ಅಷ್ಟೇ ಸಹಜವಾಗಿ ತುಳು, ಕನ್ನಡ, ಕೊಂಕಣಿ ಭಾಷೆಗಳನ್ನು ಮಾತನಾಡುವ ಅಲ್ಲಿಯ ಮಂದಿ ತಮ್ಮ ಮೂಲ ಸಂಸ್ಕೃತಿಯನ್ನೂ ಉಳಿಸಿಕೊಂಡಿರುವುದನ್ನು ಕಾಣಬಹುದು.

ಈ ಅದ್ಭುತ ಬದಲಾವಣೆಗೆ ಮೂಲ ಕಾರಣ–ಪ್ರೇರಣೆ ದಿವಂಗತ ಡಾ. ತೋನ್ಸೆ ಮಾಧವ ಅನಂತ ಪೈ ಅವರು. ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತವಾದ ಹೆಸರೆಂದರೆ ಡಾ. ಟಿ.ಎಂ.ಎ.ಪೈ ಎಂಬುದು. ನಮ್ಮ ಧರ್ಮವು ಹೊಂದಾಣಿಕೆ, ಸಹಿಷ್ಣುತೆ, ಕರುಣೆ, ದಾನ, ಸಹಾಯ ಮುಂತಾದ ಸದ್ಗುಣಗಳಿಗೆ ಒತ್ತು ಕೊಟ್ಟಿರುವುದು ಎಲ್ಲರಿಗೂ ತಿಳಿದ ವಿಷಯವೇ. ಅದನ್ನು ಅನುಸರಿಸುವವರು ಎಷ್ಟು ಮಂದಿ ಸರ್ವೇ ಜನಾಃ ಸುಖಿನೋ ಭವಂತು? ಎಂಬುದು ಹೇಳಲು, ಕೇಳಲು ಬಲು ಚಂದ. ಆದರೆ ಅದನ್ನು ತಮ್ಮ ಬದುಕಿನಲ್ಲಿ ಅಕ್ಷರಶಃ ಅಳವಡಿಸಿಕೊಂಡು, ತಾನು ಬೆಳೆಯುವುದರ ಜೊತೆಗೆ ಸಮಾಜದ ಎಲ್ಲರಿಗೂ ಬೆಳೆಯಲು ಅವಕಾಶವನ್ನು ನಿರ್ಮಾಣ ಮಾಡಿ, ತಮ್ಮ ದೂರದರ್ಶಿತ್ವದಿಂದಾಗಿ ನಾಡಿಗೆ, ಜನರಿಗೆ, ಸಮಸ್ತರಿಗೆ ಒಳಿತನ್ನು ಮಾಡಿದ ಮಹಾನ್ ವ್ಯಕ್ತಿಯಾಗಿ ಶ್ರೀಮಾನ್ ಪೈಗಳು ಕಾಣಿಸುತ್ತಾರೆ. ಹಳ್ಳಿಯ ಜನರ ಬದುಕನ್ನು ಬದಲಿಸಿ, ಅವರಿಗೆ ಒಂದು ಆತ್ಮಸಮ್ಮಾನವನ್ನು ದೊರಕಿಸಿಕೊಡಲು ಅವರು ಪಟ್ಟ ಶ್ರಮವೇನು ಕಡಿಮೆಯೇ ಬಡವರ ಉದ್ಧಾರದ ಹೆಸರಿನಲ್ಲಿ ಅವರ ಆಸ್ತಿಯನ್ನೇ ಕಬಳಿಸುವ ಇಂದಿನ ನೇತಾರರಿಗೂ ಪೈಗಳಂತಹ ನಿಃಸ್ವಾರ್ಥ ಮನಸಿನ ಜನಸೇವಕರಿಗೂ ಎಲ್ಲಿಯ ಹೋಲಿಕೆ?

> "ಡಾ. ಮಾಧವ ಪೈಗಳಲ್ಲಿ ಧೈರ್ಯ, ಕಾರ್ಯಕ್ಷಮತೆ, ಉತ್ಸಾಹ, ಕೈಬಿಡದ ಛಲ, ಕನಸುಗಾರಿಕೆ ಮತ್ತು ಯೋಜನಾಶಕ್ತಿ ತುಂಬಿತ್ತು. ಅದರಿಂದಲೇ ಅವರು ನವ ಮಣಿಪಾಲದ ಕರ್ತೃವಾದರು, ಆಧುನಿಕ ಉಡುಪಿಯ ಪಿತ ಎಂದೆನಿಸಿದರು. ಕರ್ನಾಟಕದ ನಕ್ಷೆಯನ್ನು ಬದಲಿಸಿದ ಮಹಾನ್ ಪುರುಷರಲ್ಲಿ ಒಬ್ಬರೆನಿಸಿದರು. ಅದೃಷ್ಟವನ್ನು ನಂಬಿ ಕೈಕಟ್ಟಿ ಕೂರದೆ, ಪ್ರಾಮಾಣಿಕ ಪ್ರಯತ್ನ ಮಾಡಿದಲ್ಲಿ ಯಶಸ್ಸು ಎಂಬುದು ಕಟ್ಟಿಟ್ಟಬುತ್ತಿ ಎಂದು ಅವರು ನಂಬಿದ್ದರು.

ಬಡವರ ಉದ್ಧಾರ ಆಗಬೇಕಾದರೆ, ಅವರು ಮೊದಲು ವಿದ್ಯಾವಂತರಾಗಬೇಕೆಂಬುದನ್ನು ಮನಗಂಡ ಅವರು ತೆರೆದ ಶಾಲೆಗಳು ಅದೆಷ್ಟು? ಮನುಷ್ಯ ದುಡಿದು ಗಳಿಸಬೇಕು. ಗಳಿಸಿದುದರಲ್ಲಿ ಸ್ವಲ್ಪವನ್ನಾದರೂ ಉಳಿಸಬೇಕೆಂಬ ವಿಚಾರವನ್ನು ದೃಢವಾಗಿ ನಂಬಿದ್ದ ಅವರು ಸಿಂಡಿಕೇಟ್ ಬ್ಯಾಂಕನ್ನು ತೆರೆದ ಮಹಾ ದೂರದೃಷ್ಟಿ ಉಳ್ಳ ಮುತ್ಸದ್ದಿ ಆಗಿದ್ದುದರಲ್ಲಿ ಅಚ್ಚರಿ ಏನಿಲ್ಲ. ಒಬ್ಬ ಚಿಕ್ಕ ಮನುಷ್ಯನನ್ನು ಪ್ರೋತ್ಸಾಹಿಸಿ, ಸ್ಫೂರ್ತಿ ತುಂಬಿದಲ್ಲಿ ಕಾಲಾಂತರದಲ್ಲಿ ಅವನೇ ಮಹಾನ್ ವ್ಯಕ್ತಿಯಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲ ಎಂದು ಅವರು ನಂಬಿದ್ದರು.

ಬೇರೆಯವರು ಅಸಾಧ್ಯ ಎಂದು ಕೈಬಿಟ್ಟುದನ್ನು ಕೈಗೆತ್ತಿಕೊಂಡು ಅಸಾಧ್ಯವಾದುದನ್ನು ಸಾಧ್ಯವಾಗಿಸಿ ತೋರಿಸುತ್ತಿದ್ದ ಧೀಮಂತ ವ್ಯಕ್ತಿತ್ವ ಅವರದು. ಅವರು ಮುಟ್ಟಿದ್ದೆಲ್ಲವೂ ಚಿನ್ನವಾಗುತ್ತಿತ್ತು. ಪ್ರಾರಂಭದಲ್ಲಿ ಅವರ ಕರ್ತೃತ್ವ ಶಕ್ತಿಯಲ್ಲಿ ನಂಬಿಕೆ ಇಲ್ಲದವರು ಅವರು ಪ್ರಾರಂಭಿಸಿದ ಕಾರ್ಯಗಳು ಪೂರ್ಣಗೊಳ್ಳುವುದು ಅಸಾಧ್ಯ ಎಂದು ಹೇಳಿದವರೂ ಅದು ಪೂರ್ಣ ಯಶಸ್ವಿ ಆದುದನ್ನು ಕಂಡು ಮೂಗಿನ ಬೆರಳಿಟ್ಟುಕೊಂಡವರು ಅದೆಷ್ಟೋ ಮಂದಿ. ಮಾಧವ ಪೈಗಳಲ್ಲಿ ಅಂತಹ ಧೈರ್ಯ, ಕಾರ್ಯಕ್ಷಮತೆ, ಉತ್ಸಾಹ, ಕೈಬಿಡದ ಛಲ, ಕನಸುಗಾರಿಕೆ ಮತ್ತು ಯೋಜನಾಶಕ್ತಿ ತುಂಬಿತ್ತು. ಅದರಿಂದಲೇ ಅವರು ನವ ಮಣಿಪಾಲದ ಕರ್ತೃವಾದರು, ಆಧುನಿಕ ಉಡುಪಿಯ ಪಿತ ಎಂದೆನಿಸಿದರು. ಕರ್ನಾಟಕದ ನಕ್ಷೆಯನ್ನು ಬದಲಿಸಿದ ಮಹಾನ್ ಪುರುಷರಲ್ಲಿ ಒಬ್ಬರೆನಿಸಿದರು. ಅದೃಷ್ಟವನ್ನು ನಂಬಿ ಕೈಕಟ್ಟಿ ಕೂರದೆ, ಪ್ರಾಮಾಣಿಕ ಪ್ರಯತ್ನ ಮಾಡಿದಲ್ಲಿ ಯಶಸ್ಸು ಎಂಬುದು ಕಟ್ಟಿಟ್ಟಬುತ್ತಿ ಎಂದು ಅವರು ನಂಬಿದ್ದರು.

ಗೌಡ ಸಾರಸ್ವತ ಬ್ರಾಹ್ಮಣರ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅವರು ಇಡೀ ಜಗತ್ತಿನಲ್ಲಿ ಈ ಸಮುದಾಯದ ಹೆಸರು ಪರಿಚಿತವಾಗಲು ಕಾರಣಕರ್ತರೆನಿಸಿದರು. ಯಾವ ಶ್ರೀಮಂತಿಕೆಯೂ ಇಲ್ಲದ ಸಾಧಾರಣ ಕುಟುಂಬದ ಹಿನ್ನೆಲೆಯಿಂದ ಬಂದ ಅವರಲ್ಲಿ ತಾಯಿಯು ಬಿತ್ತಿದ ಸದ್ಗುಣಗಳ ಸಂಸ್ಕಾರದ ಬೀಜವಿತ್ತು. ಅದು ಬೆಳೆದು ಹೆಮ್ಮರವಾಗಿ ತನ್ನ ಸುತ್ತಮುತ್ತಲಿನ ಎಲ್ಲರಿಗೂ ಒಳಿತನ್ನೇ ಮಾಡುವಂತಹ ಗಟ್ಟಿಮುಟ್ಟಾದ ಬೀಜವಾಗಿತ್ತು. ಅವರ ವೈದ್ಯಕೀಯ ಓದಿನ ಫಲವು ತಮ್ಮ ಊರಿನ ಜನಕ್ಕೆ ಸಿಗಲೆಂದು ಬಯಸಿದ ತಾಯಿಯ ಮಾತಿಗೆ ಗೌರವ ಕೊಟ್ಟು, ಜರ್ಮನಿಗೆ ಹೊರಟು ನಿಂತಿದ್ದ ಮಗ ತನ್ನ ಪ್ರಯಾಣವನ್ನು ರದ್ದುಗೊಳಿಸಿ, ತನ್ನವರ, ತನ್ನ ಸಮಸ್ತ ಜನಗಳ ಉದ್ಧಾರಕ್ಕಾಗಿ ಟೊಂಕಕಟ್ಟಿ ನಿಂತಿದುದು, ಇತಿಹಾಸ ನಿರ್ಮಾಣಕ್ಕೆ ನಾಂದಿ ಯಾಗುವುದೆಂದು ಯಾರು ಅರಿತಿದ್ದರು ಅವರ ಯಶೋಗಾಥೆಯ ಬಗ್ಗೆ ಮತ್ತಷ್ಟು ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಯೋಣ.

ಪ್ರಶಿಕ್ಷಣಾರ್ಥಿಗಳಿಂದ ಹಣ ವಸೂಲಿ ಆರೋಪ

ಕೆಎಆರ್‌ಪಿ ಕಮಾಂಡೆಂಟ್ ಶೈಲೇಂದ್ರಕುಮಾರ್ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಸ್ನೇಹಮಯಿ ಕೃಷ್ಣ ಡಿಜಿಪಿಗೆ ಪತ್ರ

ಮೈಸೂರು, ನ.9(ಬಿಎಲ್‌ಯು)– ತರಬೇತಿ ಪಡೆಯುತ್ತಿರುವ ಪ್ರಶಿಕ್ಷಣಾರ್ಥಿಗಳಿಂದ ಲಂಚ ಪಡೆಯುತ್ತಿರುವ ಮೈಸೂರಿನ ಕೆಎಆರ್‌ಪಿ (ಕರ್ನಾಟಕ ಸಶಸ್ತ್ರ ಮೀಸಲು ಪೊಲೀಸ್) ಮೌಂಟೆಡ್ ಕಂಪನಿ ಕಮಾಂಡೆಂಟ್ ಶೈಲೇಂದ್ರ ಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಅಲೋಕ್ ಮೋಹನ್ ಅವರಿಗೆ ಪತ್ರ ಬರೆದಿದ್ದಾರೆ.

ಕೆಎಸ್‌ಆರ್‌ಪಿಗೆ ಆಯ್ಕೆಯಾಗಿರುವ 224 ಬ್ಯಾಂಡ್ ಪ್ರಶಿಕ್ಷಣಾರ್ಥಿಗಳನ್ನು ಕೆಎಆರ್‌ಪಿಗೆ ಕಳುಹಿಸಿದ್ದು, ಐದು ವಿಭಾಗಗಳನ್ನು ಮಾಡಲಾಗಿದೆ. ಇವರಿಂದ ಪ್ರತಿ ತಿಂಗಳು ತಲಾ 500 ರೂ. ವಸೂಲಿ ಮಾಡಬೇಕೆಂದು ಶೈಲೇಂದ್ರ ಮೌಖಿಕ ಆದೇಶ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ.

ಒಂದೊಂದು ವಿಭಾಗದಲ್ಲಿ ಒಬ್ಬ ಪ್ರಶಿಕ್ಷಣಾರ್ಥಿ ನೇಮಕ ಮಾಡಿ, ಆತ ಆ ವಿಭಾಗದಲ್ಲಿರುವ ಎಲ್ಲರಿಂದ ಹಣ ವಸೂಲಿಗೆ ನಿಯೋಜಿಸಿದ್ದಾರೆ ಎಂದು ದೂರಿದ್ದಾರೆ.



ಸ್ನೇಹಮಯಿ ಕೃಷ್ಣ

2ನೇ ಪಡೆಯ ಬೆಳಗಾವಿಯ ಪೇದೆ (ಸಂಖ್ಯೆ –15) ವಿ.ಮಹೇಶ್ ಎಂಬಾತ ಎಲ್ಲಾ ಪಡೆಗಳಿಂದ ವಸೂಲಿಯಾದ ಹಣವನ್ನು ಇಂಗ್ಲಿಷ್ ಬ್ಯಾಂಡ್‌ನ ಸ್ಟ್ಯಾನ್ಲಿ ಕಿರಣ್‌ಗೆ ನೀಡಬೇಕು. ಸ್ಟ್ಯಾನ್ಲಿ ಕಿರಣ್ ಆ ಹಣವನ್ನು ಶೈಲೇಂದ್ರಕುಮಾರ್‌ಗೆ ನೀಡಬೇಕು. ಈ ಸಂಬಂಧ ಐದು ವಿಭಾಗಗಳಲ್ಲಿ ವಾಟ್ಸ್ ಆಪ್ ಗ್ರೂಪ್ ಮಾಡಿಕೊಳ್ಳಲಾಗಿದೆ. ಈ ಗುಂಪಿನಲ್ಲಿ ಚರ್ಚೆಯಾದ ಧ್ವನಿ ಮುದ್ರಣವನ್ನು ನಿಮಗೆ ಕಳುಹಿಸಿದ್ದು, ಇದನ್ನು ಪರಿಶೀಲನೆ ನಡೆಸಿದರೆ ಸಾಕ್ಷ್ಯಾಧಾರ ದೊರೆಯುತ್ತದೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ.

ಕೆಲವು ಪ್ರಶಿಕ್ಷಣಾರ್ಥಿಗಳು ಫೋನ್ ಪೇ, ಗೂಗಲ್ ಪೇ ಮೂಲಕ ಹಣ ನೀಡಿದರೆ, ಕೆಲವರು ನಗದು ರೂಪದಲ್ಲಿ ಹಣ ನೀಡಿದ್ದಾರೆ. ಈ ಸಂಬಂಧ ಹಣ ವಸೂಲಿ ಮಾಡಿರುವ ಪೇದೆ ಮಹೇಶ್‌ಗೆ ಸಂಬಂಧಿಸಿದ ಬ್ಯಾಂಕ್ ಖಾತೆ ದಾಖಲಾತಿ ಪರಿಶೀಲನೆ ನಡೆಸಿದರೆ ಮತ್ತಷ್ಟು ಸಾಕ್ಷ್ಯಾಧಾರ ದೊರೆಯುತ್ತದೆ ಎಂದಿದ್ದಾರೆ.

ಇದಲ್ಲದೆ ಪ್ರೊಬೆಷನರಿ ಅವಧಿಯಲ್ಲಿ ಉತ್ತೀರ್ಣರಾಗಿಸಿ, ಪ್ರಮಾಣ ಪತ್ರ ನೀಡಲು ತಲಾ ಎರಡು ಸಾವಿರ ನೀಡಬೇಕೆಂದು ಸೂಚನೆ ನೀಡಿದ್ದಾರೆ. ಈ ಹಿನ್ನೆಲೆ ಹಣ ನೀಡದಿದ್ದರಿಂದ ಪ್ರಮಾಣ ಪತ್ರ ನೀಡಿಲ್ಲ ಎಂದು ಆಪಾದಿಸಿದ್ದಾರೆ.

ಈ ಸಂಬಂಧ ಪ್ರಾಥಮಿಕ ವಿಚಾರಣೆ ನಡೆಸಿ ಶೈಲೇಂದ್ರಕುಮಾರ್ ವಿರುದ್ಧ ಮೊಕದ್ದಮೆ ದಾಖಲಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಈ ಮೂಲಕ ಪೊಲೀಸ್ ಇಲಾಖೆಯಲ್ಲಿ ಇಂತಹ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂದು ಸ್ನೇಹಮಯಿ ಕೃಷ್ಣ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಮನವಿ ಮಾಡಿದ್ದಾರೆ.

ಚನ್ನಪಟ್ಟಣ ಉಪ ಸಮರ

ಪಕ್ಷಾಂತರಿ ಯೋಗೇಶ್ವರ್‌ಗೆ ಜನ ತಕ್ಕಪಾಠ ಕಲಿಸ್ತಾರೆ...

ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ

ಬೆಂಗಳೂರು, ನ.9 (ಕೆಎಂಶಿ)–ಯೋಗೇಶ್ವರ್ ಅವರು 6 ವರ್ಷಕ್ಕೊಮ್ಮೆ ಪಕ್ಷಾಂತರ ಮಾಡುತ್ತಾರೆ. ಈ ಬಾರಿ ಅವರಿಗೆ ಜನ ತಕ್ಕಪಾಠ ಕಲಿಸುತ್ತಾರೆ ಎಂದು ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.



ಚನ್ನಪಟ್ಟಣದಲ್ಲಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ವಿವಿಧ ಗ್ರಾಮಗಳಲ್ಲಿ ಮತಯಾಚಿಸಿದರು.

ಯೋಗೇಶ್ವರ್‌ಗೆ ಬಿಜೆಪಿಯಲ್ಲಿ ಎಲ್ಲಾ ಗೌರವ ನೀಡಿ ಶಕ್ತಿ ತುಂಬಿದ್ದರು, ಆದರೂ ಪಕ್ಷ ತೊರೆದರು. ಕಾಂಗ್ರೆಸ್ ಇವರಿಗೆ ಏಕೆ ಟಿಕೆಟ್ ಕೊಟ್ಟಿದೆ ಎಂಬುದನ್ನು ಚನ್ನಪಟ್ಟಣ ಕ್ಷೇತ್ರದ ಮತದಾರರಿಗೆ ಗೊತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇಡೀ ಸಂಪುಟ ಚನ್ನಪಟ್ಟಣದಲ್ಲಿ ನನ್ನ ವಿರುದ್ಧ ಚುನಾವಣಾ ಹೋರಾಟ ನಡೆಸುತ್ತಿದೆ. ಕಾಂಗ್ರೆಸ್‌ನಿಂದ ಕ್ಷೇತ್ರದ ಅಭಿವೃದ್ಧಿ ಆಗಿಲ್ಲ. ಡಿ.ಕೆ.ಸುರೇಶ್ ಸಂಸದರಾಗಿದ್ದಾಗ ಅವರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಚನ್ನಪಟ್ಟಣ ಸಹ ಇತ್ತು. ಆದರೆ, ಯಾವುದೇ ಅಭಿವೃದ್ಧಿ ಮಾಡಲಿಲ್ಲ.


ಚುನಾವಣೆ ವೇಳೆ ಚನ್ನಪಟ್ಟಣದ ಅಭಿವೃದ್ಧಿ ಬಗ್ಗೆ ಮಾತನಾಡುತ್ತಿದ್ದಾರೆ. ಈ ಹಿಂದೆ ಏಕೆ ಮಾಡಲಿಲ್ಲ. ಈಗ ಚನ್ನಪಟ್ಟಣ ನೆನಪಾಯ್ತಾ ಎಂದು ವಾಗ್ದಾಳಿ ನಡೆಸಿದರು. ಚುನಾವಣೆಯಲ್ಲಿ ಅಭಿವೃದ್ಧಿ ಬಗ್ಗೆ ಮಾತನಾಡಲು ಏನೂ ಇಲ್ಲದ್ದಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಎಚ್.ಡಿ. ಕುಮಾರಸ್ವಾಮಿ ಮತ್ತು ತಮ್ಮನ್ನು ಗುರಿ ಮಾಡಿ ಕಾಂಗ್ರೆಸ್‌ನವರು ಮಾತನಾಡುತ್ತಿದ್ದಾರೆ. ಯೋಗೇಶ್ವರ್ ಮತ್ತು ನಾನು ಸತ್ತರೆ ಇಲ್ಲೇ ಮಣ್ಣಾಗುತ್ತೇವೆ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ಯಾರೂ ಸಾಯುವುದು ಬೇಡ, ಎಲ್ಲ ನೂರಾರು ವರ್ಷ ಚೆನ್ನಾಗಿರಲಿ. ಇಲ್ಲಿ ಹುಟ್ಟು, ಸಾವಿನ ವಿಚಾರ ಅಗತ್ಯವಿಲ್ಲ. ಇಂತಹ ಮಾತುಗಳಿಂದ ಪ್ರಚೋದನೆಗೊಳ್ಳುವುದಿಲ್ಲ.

ದಿನೇ ದಿನೇ ನನ್ನ ಆತ್ಮವಿಶ್ವಾಸ ಹೆಚ್ಚುತ್ತಿದೆ. ಕುಮಾರಣ್ಣ ಸ್ವಕ್ಷೇತ್ರ ಎಂಬ ಕಾರಣಕ್ಕೆ ದೇಶದ ಗಮನ ಸೆಳೆದಿದೆ. ಜನ ಆತ್ಮಸ್ಥೈರ್ಯ ತುಂಬುತ್ತಿದ್ದಾರೆ. ನನ್ನ ಮನದಾಳದ ಮಾತು ಜನರಿಗೆ ತಲುಪುತ್ತಿದೆ ಎಂದರು.

ಜಾರ್ಖಂಡ್ ಸಿಎಂ ಹೇಮಂತ್ ಸೊರೇನ್ ಆಪ್ತ ಕಾರ್ಯದರ್ಶಿಗೆ ಸೇರಿದ ಸ್ಥಳಗಳ ಮೇಲೆ ಐಟಿ ದಾಳಿ

ರಾಂಚಿ,ನ.9–ಜಾರ್ಖಂಡ್ ವಿಧಾನ ಸಭೆ ಚುನಾವಣೆಗೆ ಮುನ್ನ ಮುಖ್ಯಮಂತ್ರಿ ಹೇಮಂತ್ ಸೊರೇನ್‌ಗೆ ದೊಡ್ಡ ಹೊಡೆತ ನೀಡುವ ಘಟನೆ ನಡೆದಿದ್ದು, ಆದಾಯ ತೆರಿಗೆ ಇಲಾಖೆ ರಾಂಚಿ ಮತ್ತು ಜೆಮ್‌ಶೆಡ್‌ಪುರದಲ್ಲಿ ಅವರ ಆಪ್ತ ಕಾರ್ಯದರ್ಶಿ ಸುನಿಲ್ ಶ್ರೀವಾಸ್ತವ್‌ಗೆ ಸಂಬಂಧಿಸಿದ 17 ಸ್ಥಳಗಳ ಮೇಲೆ ದಾಳಿ ಮಾಡಿದೆ.

ಆರಂಭಿಕ ವರದಿಗಳ ಪ್ರಕಾರ, ರಾಂಚಿಯಲ್ಲಿ 7 ಮತ್ತು ಜಮ್ಶೆಡ್‌ಪುರದ 9 ಸ್ಥಳಗಳಲ್ಲಿ ದಾಳಿ ನಡೆಸಲಾಗುತ್ತಿದೆ. ಸುನಿಲ್ ಶ್ರೀವಾಸ್ತವ ಅವರ ನಿವಾಸವು ರಾಂಚಿಯ ಅಶೋಕ್ ನಗರ ರಸ್ತೆ ಸಂಖ್ಯೆ 4ರ ಮುಂಭಾಗದಲ್ಲಿದೆ. ವಿಧಾನಸಭೆ ಚುನಾವಣೆ ಹೊತ್ತಿನಲ್ಲಿ ಹವಾಲಾ ಮೂಲಕ ಹಣದ ವ್ಯವಹಾರ ನಡೆದಿರುವ ಬಗ್ಗೆ ದಾಳಿ ನಡೆದಿದೆ ಎನ್ನಲಾಗಿದೆ.



ಇದಕ್ಕೂ ಮುನ್ನ ಅ.26ರಂದು ರಾಂಚಿ, ಜಮ್‌ಶೆಡ್‌ಪುರ, ಗಿರಿದಿಹ್, ಕೊಲ್ಕತ್ತಾದ 35 ಸ್ಥಳಗಳಲ್ಲಿ ಐಟಿ ದಾಳಿ ನಡೆಸಿತ್ತು. ಈ ವೇಳೆ ಸುಮಾರು 150 ಕೋಟಿ ಮೌಲ್ಯದ ಬೇನಾಮಿ ಆಸ್ತಿ ಮತ್ತು ಹೂಡಿಕೆ ಸಂಬಂಧಿತ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ವೇಳೆ ಪತ್ತೆಯಾದ ಮೊತ್ತವನ್ನು ವರ್ತಕರ ಖಾತೆ ಪುಸ್ತಕಗಳೊಂದಿಗೆ ತಾಳೆ ಹಾಕಿ 70 ಲಕ್ಷ ವಶಪಡಿಸಿಕೊಂಡು ಬ್ಯಾಂಕ್‌ಗೆ ಜಮಾ ಮಾಡಲಾಗಿದೆ. ಆದರೆ, ಯಾವುದೇ ಅಧಿಕೃತ ದೃಢೀಕರಣವಿಲ್ಲ, ಇಂದಿನ ದಾಳಿಗಳು ಸಹ ಅದಕ್ಕೆ ಸಂಬಂಧಿಸಿವೆ ಎಂದು ಹೇಳಲಾಗುತ್ತದೆ.

ಉಪಚುನಾವಣೆ ಸೋಲಿನ ಭೀತಿ; ಭ್ರಷ್ಟಾಚಾರ ಆರೋಪದಿಂದ ಕಂಗೆಟ್ಟ ಕಾಂಗ್ರೆಸ್

● ಜನರ ಗಮನ ಬೇರೆಡೆ ಸೆಳೆಯಲು ತನಿಖೆ ಕುತಂತ್ರ ● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಾಗ್ದಾಳಿ ● ಇದಕ್ಕೆಲ್ಲ ನಾವ್ಯಾರೂ ಹೆದರಲ್ಲ

ಬೆಂಗಳೂರು, ನ.9(ಕೆಎಂಶಿ)–ಉಪಚುನಾವಣೆ ಸೋಲು ಹಾಗೂ ಭ್ರಷ್ಟಾಚಾರ ಆರೋಪಗಳಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷಗಳ ನಾಯಕರ ಮೇಲೆ ತನಿಖೆಗಳ ಕುತಂತ್ರ ನಡೆಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ಅವರ ಸರ್ಕಾರ ಹಳೆಯ ವಿಷಯಗಳನ್ನು ಕೆದಕಿ ತನಿಖೆ ನಡೆಸುವುದರಿಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಆಗಲಿ, ಬಿಜೆಪಿ ಆಗಲಿ ಹೆದರುವುದಿಲ್ಲ ಎಂದರು.

ಸರ್ಕಾರ ಏನೇ ತನಿಖೆ ನಡೆಸಿದರೂ ಎದುರಿಸುತ್ತೇವೆಯೇ ಹೊರತು ಹೆದರುವುದಿಲ್ಲ, ಹಿಂದಿನ ಆಡಳಿತದಲ್ಲಿ ತಾವು ಮತ್ತು ತಮ್ಮ ಮಂತ್ರಿಗಳು ಮಾಡಿದ ಭ್ರಷ್ಟಾಚಾರಗಳಿಂದ ತಪ್ಪಿಸಿಕೊಳ್ಳಲು ಲೋಕಾಯುಕ್ತವನ್ನು ಮುಚ್ಚಿ, ಎಸಿಬಿ ರಚನೆ ಮಾಡಿಕೊಂಡರು. ಸಿದ್ದರಾಮಯ್ಯ ಮಾಡಿದ ಈ ಕುತಂತ್ರಕ್ಕೆ ನ್ಯಾಯಾಲಯ ಸರಿಯಾಗಿ ಬುದ್ಧಿ ಕಲಿಸಿದೆ, ತಾವು ಎಸಗಿರುವ ಭ್ರಷ್ಟಾಚಾರಗಳನ್ನು ಮುಚ್ಚಿ ಹಾಕಲು ಒಂದಲ್ಲಾ ಒಂದು ಪ್ರಯತ್ನ ಮಾಡುತ್ತಿದ್ದಾರೆ.



ತಮ್ಮ ವಿರುದ್ಧ ಬಂದಿರುವ ಆರೋಪಗಳನ್ನು ಜನರ ಮನಸ್ಸಿನಿಂದ ಮರೆಮಾಚಲು ಒಂದಲ್ಲಾ ಒಂದು ವಿಷಯವನ್ನು ತರುತ್ತಿದ್ದಾರೆ. ಇದೀಗ ಕೋವಿಡ್ ಸಮಯದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ತನಿಖೆಗೆ ಆದೇಶಿಸಿದ್ದಾರೆ, ತಮ್ಮ ವಿರೋಧಿಗಳನ್ನು ಕಟ್ಟಿಹಾಕಲು ತಮಗೆ ಬೇಕಾದಂತೆ ಆಯೋಗಗಳನ್ನು ಮತ್ತು ತನಿಖಾ ಸಂಸ್ಥೆಗಳನ್ನು ರಚಿಸುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಿಸ್ಸೀಮರು. ಅವರು ಅಧಿಕಾರಕ್ಕೆ ಬಂದಾಗಲೆಲ್ಲಾ ಇಂತಹ ಆಯೋಗಗಳನ್ನು ರಚಿಸುವುದೇ ಒಂದು ಚಾಳಿಯಾಗಿದೆ, ಇವರ ಗೊಡ್ಡು ಬೆದರಿಕೆಗಳಿಗೆ ಬಿ.ಎಸ್.ಯಡಿಯೂರಪ್ಪ ಆಗಲಿ, ಬಿಜೆಪಿಯಾಗಲಿ ಹೆದರುವುದಿಲ್ಲ. ಉಪಚುನಾವಣೆ ಮುಗಿಯುತ್ತಿದ್ದಂತೆ ಅಧಿಕಾರದಿಂದ ಕೆಳಗಿಳಿಯುತ್ತಾರೆ, ಅದು ಅವರಿಗೂ ತಿಳಿದಿದೆ, ತಮ್ಮ ನಾಯಕರು ಪೂರ್ಣಾವಧಿ ಅಧಿಕಾರ ಮುಗಿಸುತ್ತಾರೆ ಎನ್ನುವವರೂ ಬೆನ್ನ ಹಿಂದೆ ಕುರ್ಚಿಗಾಗಿ ಹೋರಾಟ ಆರಂಭಿಸಿದ್ದಾರೆ. ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣಗಳು ಒಂದೆಡೆಯಾದರೆ, ಮತ್ತೊಂದೆಡೆ ರಾಜ್ಯದ ಮೂರೂ ಕ್ಷೇತ್ರಗಳ ಉಪ ಚುನಾವಣೆಯಲ್ಲೂ ಸೋಲು ಕಾಣಲಿದ್ದಾರೆ.

ಮುಖ್ಯಮಂತ್ರಿ ಅವರಿಗೆ ಇದರ ಮನವರಿಕೆ ಆಗಿದೆ, ಈ ಎಲ್ಲಾ ಅಂಶಗಳನ್ನು ಜನರಿಂದ ಮರೆಮಾಚಲು ವಿರೋಧಿಗಳ ಮೇಲೆ ಇಲ್ಲಸಲ್ಲದ ತನಿಖಾಸ್ತ್ರಗಳನ್ನು ಪ್ರಯೋಗ ಮಾಡುತ್ತಿದ್ದಾರೆ ಎಂದು ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಡಾ.ಬಾಲಗಂಗಾಧರನಾಥ ಶ್ರೀಗಳ ಪುಣ್ಯಸ್ಮರಣೆ, ಕುವೆಂಪು ಜಯಂತ್ಯೋತ್ಸವ

● ವಿಜ್ಞಾನಿಯಾಗ ಹೊರಟವರು ಸನ್ಯಾಸಿಯಾದರು; ಸನ್ಯಾಸಿಯಾಗಲು ಹೊರಟವರು ಸಾಹಿತಿಯಾದರು...!

● ಮಹಾನ್ ಚೇತನಗಳ ಕುರಿತು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಬಣ್ಣನೆ

ಮೈಸೂರು, ನ.9(ಎಸ್‌ಬಿಡಿ)– ಒಬ್ಬರು ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ಹೊರಟವರು ಸನ್ಯಾಸಿಯಾದರು, ಮತ್ತೊಬ್ಬರು ಸನ್ಯಾಸಿಯಾಗಲು ಹೋಗಿ ಶ್ರೇಷ್ಠ ಸಾಹಿತಿಯಾದರು ಎಂದು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ರಾಷ್ಟ್ರಕವಿ ಕುವೆಂಪು ಅವರನ್ನು ಆದಿಚುಂಚನಗಿರಿ ಮಹಾಸಂಸ್ಥಾನದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸ್ಮರಿಸಿಕೊಂಡರು.

ಮೈಸೂರಿನ ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಶನಿವಾರ ಆಯೋಜಿಸಿದ್ದ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಜಯಂತ್ಯೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಪದವಿಗೆ ಸೇರಿ, ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಗುರಿ ಹೊಂದಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರನ್ನು ಅಂತರಂಗದ ಕರೆ ಆದಿಚುಂಚನಗಿರಿ ಸಂಸ್ಥಾನಕ್ಕೆ ಕರೆತಂದು ಕಟ್ಟಿಹಾಕಿತು. ಹಾಗೆಯೇ ವಿದ್ಯಾರ್ಥಿ ದೆಸೆ ಹಾಗೂ ನಂತರದಲ್ಲೂ ಶ್ರೀ ರಾಮಕೃಷ್ಣ ಆಶ್ರಮದೊಂದಿಗೆ ಒಡನಾಟವಿದ್ದ ಕುವೆಂಪು ಅವರು ಸನ್ಯಾಸಿಯಾಗಲು ಹೊರಟು ನಂತರ ದಾರ್ಶನಿಕ ಸಾಹಿತಿಯಾದರು. ಜಢವಾದ ಕಾಲಕ್ಕೆ ಚೈತನ್ಯ, ಮಹತ್ವ ಹಾಗೂ ಹಿರಿಮೆ ತಂದುಕೊಟ್ಟವರನ್ನು ಹೆಸರಿನಲ್ಲೇ ಆ ಕಾಲವನ್ನು ಗುರುತಿಸಲಾಗುತ್ತದೆ. ಅಂತಹ ಇಬ್ಬರು ಮಹನೀಯರ ಸ್ಮರಿಸುತ್ತಿರುವುದರಿಂದ ಇದೊಂದು ಪವಿತ್ರ ದಿನ ಎಂದು ನುಡಿದರು.

ಶ್ರೀಗಳಿಂದ ಶಕ್ತಿ: ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ ಮಾತನಾಡಿ, ಚದುರಿ ಹೋಗಿದ್ದ ಸಮುದಾಯ ವಿಶ್ವದಲ್ಲಿ ಒಂದು ಶಕ್ತಿಯಾಗಲು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳೇ ಪ್ರಮುಖ ಕಾರಣ. ಜನಾಂಗಕ್ಕೆ ಶಕ್ತಿ ತುಂಬಿ ಎಲ್ಲಾ ರೀತಿಯಲ್ಲೂ ಉತ್ತೇಜನ ನೀಡುವ ಮೂಲಕ ಉತ್ತಮ ಭವಿಷ್ಯಕ್ಕೆ ಕಾರಣರಾದ ಶ್ರೀಗಳನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಆದರೂ ಜನಸಂಖ್ಯೆಗೆ ಹೋಲಿಸಿದರೆ ಸಮುದಾಯದ ಆರ್ಥಿಕ ಅಭಿವೃದ್ಧಿ ಇನ್ನೂ ಆಗಬೇಕಿದೆ. ಇದು ಎಲ್ಲರೂ ಒಟ್ಟಾಗಿ ಮುನ್ನಡೆದಾಗ ಮಾತ್ರ ಸಾಧ್ಯ ಎಂದರು.

ನೊಬೆಲ್ ಪುರಸ್ಕಾರ ದಕ್ಕಬೇಕು: ರಾಷ್ಟ್ರಕವಿ ಕುವೆಂಪು ಅವರು ಶೈಕ್ಷಣಿಕ ಹಾಗೂ ಸಾಹಿತಿಕವಾಗಿ ಅದ್ವಿತೀಯ ಕೊಡುಗೆ ನೀಡಿದ್ದಾರೆ. ಸಮಾಜಕ್ಕೆ ವಾಸ್ತವವನ್ನು ಮನವರಿಕೆ ಮಾಡಿ, ತಿಳಿವಳಿಕೆ ನೀಡಿದ್ದಾರೆ. ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಕುವೆಂಪು ಜನಾಂಗದ ಎರಡು ಕಣ್ಣುಗಳು. ಕುವೆಂಪು ಅವರ ಸಾಹಿತ್ಯಕ್ಕೆ ನೊಬೆಲ್ ಪುರಸ್ಕಾರ ದಕ್ಕಬೇಕು. ಈ ನಿಟ್ಟಿನಲ್ಲಿ ನಾವೆಲ್ಲಾ ಪ್ರಯತ್ನ ಮುಂದುವರೆಸೋಣ ಎಂದು ಅಶ್ವಥ್ ನಾರಾಯಣ ಹೇಳಿದರು.

ಸೇವೆಯಿಂದ ಸ್ಮರಣೆ: ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಮಾತನಾಡಿ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಸಮರ್ಪಣಾ ಮನೋಭಾವದೊಂದಿಗೆ ಸೇವೆ ನೀಡಿದ ದಾರ್ಶನಿಕರು. ಅನ್ನ, ಅಕ್ಷರ, ಆರೋಗ್ಯ, ಉದ್ಯೋಗ ಸೇವೆ, ಸಮಾಜ ಸುಧಾರಣೆ ಮಾಡಿದರು. ಸೇವೆ ಮೂಲಕವೇ ಅವರು ಜನಮಾನಸದಲ್ಲಿ ಉಳಿದಿದ್ದಾರೆ. ಅವರ ಕೈಂಕರ್ಯವನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮುಂದುವರೆಸಿದ್ದಾರೆ. ಕುವೆಂಪು ಕನ್ನಡ ಸಾಹಿತ್ಯ ಲೋಕದ ಮಹಾ ಪ್ರತಿಭೆ. ಈ ರಸ ಋಷಿ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ವಿಶ್ವಮಾನವನಾಗು ಎಂಬ ವೈಚಾರಿಕಾ ಸಂವೇದನೆ. ಏಕೀಕರಣದ ಬಳಿಕವೂ ಕನ್ನಡಿಗರಲ್ಲಿ ಒಗ್ಗಟ್ಟು ಕಾಣದಿದ್ದಾಗ 'ಭಾರಿಸು ಕನ್ನಡ ಡಿಂಡಿಮವ...' ಎಂದು ಜಾಗೃತಿ ಮೂಡಿಸಿದ ನಾಡು–ನುಡಿಯ ಚಿಂತನೆ, ಮೈಸೂರು ವಿವಿ ಕುಲಪತಿಯಾಗಿದ್ದಾಗ ಬೋಧನಾಂಗ, ಸಂಶೋಧನಾಂಗ, ಪ್ರಸಾರಂಗ ವಿಭಾಗದ ಮೂಲಕ ಕನ್ನಡದ ಬೆಳವಣಿಗೆಗೆ ಸಹಕರಿಸಿದ್ದು ಸ್ಮರಣೀಯ ಎಂದು ಬಣ್ಣಿಸಿದರು.

ಮೊಬೈಲ್ ದಾಸರಾಗಬೇಡಿ: ಯುವ ಜನರಲ್ಲಿ ಬಹುತೇಕರು ಮೊಬೈಲ್‌ನಲ್ಲಿ ಮುಳುಗಿದ್ದೀರಿ. ಮೊಬೈಲ್ ಬಳಕೆ ಜ್ಞಾನ ವೃದ್ಧಿಗೆ ಸೀಮಿತವಾಗಿರಬೇಕೇ ಹೊರತು ಅದಕ್ಕೆ ದಾಸರಾಗಬಾರದು. ಮೊಬೈಲ್‌ನಿಂದ ಯುವ ಜನಾಂಗದ ಜೀವನವೇ ವ್ಯರ್ಥವಾಗುತ್ತಿದೆ. ಇದನ್ನು ನೋವಿನಿಂದ ಹೇಳುತ್ತಿದ್ದೇನೆ. ನಿಮಗೆ ಜ್ಞಾನದ ದಾಹ ಇರಬೇಕು. ಯಾವ ರೀತಿ ಜೀವನ ರೂಪಿಸಿಕೊಳ್ಳಬೇಕು ಎಂಬ ಅರಿವಿರಬೇಕು. ಸರಸ್ವತಿ ಇರುವ ಕಡೆ ಲಕ್ಷ್ಮೀ ಬಂದೇ ಬರುತ್ತದೆ. ಶಿಸ್ತು, ಶ್ರಮ, ಸಮಯಪ್ರಜ್ಞೆ, ಆತ್ಮವಿಶ್ವಾಸ, ನಿರ್ಭಯತೆ ಈ ಐದು ಮೌಲ್ಯಗಳನ್ನು ರೂಢಿಸಿಕೊಂಡು ಈ ದೇಶದ ಆಸ್ತಿಯಾಗಬೇಕು ಎಂದು ನ್ಯಾಯಮೂರ್ತಿಗಳು ಕಿವಿಮಾತು ಹೇಳಿದರು.

ಅಭಿನಂದನೆ: ಕಾರ್ಯಕ್ರಮದಲ್ಲಿ ಕುವೆಂಪು ಅವರ ಪುತ್ರಿ ಶ್ರೀಮತಿ ತಾರಿಣಿ ಹಾಗೂ ಅಳಿಯ ಡಾ.ಚಿದಾನಂದ ಗೌಡ ದಂಪತಿಯನ್ನು ಅಭಿನಂದಿಸಲಾಯಿತು. ಇದೇ ವೇಳೆ ಮಧ್ಯಪ್ರದೇಶ ಕೆಡರ್‌ನ ಐಎಎಸ್ ಅಧಿಕಾರಿ ಡಾ.ನಾಗಾರ್ಜುನ ಬಿ.ಗೌಡ, ಐಆರ್‌ಎಸ್ ಅಧಿಕಾರಿ ಪಿ.ವಿ.ಭೈರಪ್ಪ, ಆರ್ಮ್ಡ್ ಫೋರ್ಸ್ ಹೆಡ್ ಕ್ವಾಟ್ರರ್ಸ್ ಸೇವೆಯಲ್ಲಿರುವ ಎನ್.ಭವ್ಯಶ್ರೀ ಹಾಗೂ ಐಪಿಎಸ್ ಅಧಿಕಾರಿ ವರುಣ್ ಕೆ. ಗೌಡ ಅವರನ್ನು ಸನ್ಮಾನಿಸಲಾಯಿತು. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಅಂಗವಾಗಿ ಅವಾಂಟ್ ಬಿಕೆಜಿ ಆಸ್ಪತ್ರೆಯ ಡಾ.ಟಿ.ಎನ್.ಬಾಲಕೃಷ್ಣ ಗೌಡ ಅವರ ಸಹಕಾರದೊಂದಿಗೆ ಹಮ್ಮಿಕೊಂಡಿರುವ 50 ಉಚಿತ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆ ಕಾರ್ಯ ಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕಾವೇರಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಚಂದ್ರಶೇಖರ್, ಸಿಬ್ಬಂದಿ ನೇಮಕಾತಿ ಆಯೋಗದ ದಕ್ಷಿಣ ಪ್ರಾಂತ್ಯ ಪ್ರಾದೇಶಿಕ ನಿರ್ದೇಶಕ ಕೆ.ನಾಗರಾಜ್, ಆಂತರಿಕ ಭದ್ರತಾ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಡಾ.ಎ.ಎನ್.ಪ್ರಕಾಶ್‌ಗೌಡ, ಪತ್ರಕರ್ತ ಎಂ.ಆರ್.ಸತ್ಯನಾರಾಯಣ, ಒಕ್ಕಲಿಗ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ಮತ್ತಿತರರು ಉಪಸ್ಥಿತರಿದ್ದರು.



ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಆಯೋಜಿಸಿದ್ದ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಐಪಿಎಸ್ ಅಧಿಕಾರಿ ವರುಣ್ ಕೆ. ಗೌಡ, ಆರ್ಮ್ಡ್ ಫೋರ್ಸ್ ಹೆಡ್ ಕ್ವಾಟ್ರರ್ಸ್ ಸೇವೆಯಲ್ಲಿರುವ ಎನ್.ಭವ್ಯಶ್ರೀ, ಮಧ್ಯಪ್ರದೇಶ ಕೆಡರ್‌ನ ಐಎಎಸ್ ಅಧಿಕಾರಿ ಡಾ.ನಾಗಾರ್ಜುನ ಬಿ.ಗೌಡ ಹಾಗೂ ಐಆರ್‌ಎಸ್ ಅಧಿಕಾರಿ ಪಿ.ವಿ.ಭೈರಪ್ಪ ಅವರನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಗಣ್ಯರು ಸನ್ಮಾನಿಸಿದರು.

ಒಕ್ಕಲಿಗ ಮೂಲದ ಗಂಗರ ಕೊಡುಗೆ ಸ್ಮರಣೀಯ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗುಣಗಾನ

ಮೈಸೂರು: ಒಕ್ಕಲಿಗ ಸಮುದಾಯದ ಗಂಗರು ಮೈಸೂರು ಸಂಸ್ಥಾನ ಹಾಗೂ ಇಂದಿನ ಕರ್ನಾಟಕಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ ಎಂದು ಮೈಸೂರು ರಾಜವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ಆಯೋಜಿಸಿದ್ದ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಜಯಂತ್ಯೋತ್ಸವ ಸಮಾರಂಭದಲ್ಲಿ ಮಾತನಾಡಿ, ಈ ಭಾಗದ ಬಹುತೇಕ ಎಲ್ಲಾ ದೇವಾಲಯಗಳ ನಿರ್ಮಾಣ ಗಂಗರ ನಾಯಕರ ಕಾಲದಲ್ಲೇ ಆಗಿರುವುದು. ಅನೇಕ ಋಷಿಮುನಿಗಳು ತಪಸ್ಸು ಕೈಗೊಂಡು ವಿಗ್ರಹ ಸ್ಥಾಪನೆ ಮಾಡಿ ಹೋದ ನಂತರ ಮೊದಲಿಗೆ ದೇವಾಲಯಗಳ ಅಭಿವೃದ್ಧಿಯಾಗಿದ್ದು ಗಂಗರಸರಿಂದ. ಸುಮಾರು 400 ವರ್ಷ ಆಳ್ವಿಕೆ ಮಾಡಿದ ಒಕ್ಕಲಿಗ ಸಮುದಾಯದ ಗಂಗರ ಕೊಡುಗೆ ಅವಿಸ್ಮರಣೀಯ ಎಂದು ತಿಳಿಸಿದರು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಪಾಳೆಗಾರರಾಗಿದ್ದ ಕೆಂಪೇಗೌಡರು, ದೊಡ್ಡ ಕಾಡಾಗಿದ್ದ ಜಾಗದಲ್ಲಿ ಬೆಂಗಳೂರು ನಗರ ನಿರ್ಮಿಸಲು ಅಡಿ ಇಟ್ಟರು. ಇಮ್ಮಡಿ ಕೆಂಪೇಗೌಡರು ಕಟ್ಟಿದ ಕೋಟೆಯಲ್ಲೇ ಮರಾಠರ ಕಾಲದಲ್ಲಿ ಛತ್ರಪತಿ ಶಿವಾಜಿ ಅವರು ಹುಟ್ಟಿದ್ದು. ಬಾಲ್ಯದಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಿಂದ ಅವರು ಪ್ರೇರಣೆಗೊಂಡವರು. ಚಿಕ್ಕ ದೇವರಾಜ ಒಡೆಯರ್ ಆ ಮಣ್ಣಿನ ಕೋಟೆ ಪಕ್ಕದಲ್ಲಿ ಮತ್ತೊಂದು ಕೋಟೆ ನಿರ್ಮಿಸಿದರು. ನಂತರದಲ್ಲಿ ಬೆಂಗಳೂರು ಅಭಿವೃದ್ಧಿ ಆಗಿದ್ದು ಇತಿಹಾಸ ಎಂದರು. ಕನ್ನಡಿಗರ ಪರಂಪರೆ, ಧರ್ಮದ ರಕ್ಷಣೆ ಜೊತೆಗೆ ಶಿಕ್ಷಣ, ಆರೋಗ್ಯ ಸೇವೆಯ ಮೂಲಕ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಸ್ಮರಣೀಯರಾಗಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಸಂದರ್ಭದಲ್ಲೇ ಮಾನಸಗಂಗೋತ್ರಿಯ ಈ ಜಾಗವನ್ನು ದಾನ ನೀಡಲಾಯಿತು. ಕುವೆಂಪು ಅವರೇ ಭೂಮಿ ಸ್ವೀಕರಿಸಿ, ಮಾನಸಗಂಗೋತ್ರಿಯಾಗಿ ಅಭಿವೃದ್ಧಿ ಪಡಿಸಿದರು. ಅವರ ಸಾಹಿತ್ಯ, ಶಿಕ್ಷಣ ಹಾಗೂ ಸಾಮಾಜಿಕ ಸೇವೆ ಅವಿಸ್ಮರಣೀಯ. ಯುವ ಶಕ್ತಿ ಇಂತಹ ಮಹನೀಯರ ಸ್ಮರಣೆಯೊಂದಿಗೆ ಸರಿಯಾದ ಮಾರ್ಗದಲ್ಲಿ ನಡೆದರೆ ದೇಶಕ್ಕೆ ಬಹುದೊಡ್ಡ ಲಾಭವಾಗಲಿದೆ ಎಂದು ಆಶಿಸಿದರು.

ಸಂವಹನದಿಂದ ಉತ್ತಮ ವಕೀಲರಾಗಬಹುದು:ಹೈಕೋರ್ಟ್ ನ್ಯಾಯಮೂರ್ತಿ ಇಂದ್ರೇಶ್



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಸ್ತುತ ಶೈಕ್ಷಣಿಕ ಸಾಲಿನ ಕಾರ್ಯ ಚಟುವಟಿಕೆ ಪ್ರಾರಂಭೋತ್ಸವಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್ ಚಾಲನೆ ನೀಡಿದರು.

ಮೈಸೂರು, ನ.9(ಜಿಎ)–ಕಾನೂನು ವಿದ್ಯಾರ್ಥಿಗಳು ಮುಂದೆ ಉತ್ತಮ ವಕೀಲರಾಗಬೇಕಾದರೆ, ಕಾನೂನು ಸಲಹೆಗಾರರಾಗಬೇಕಾದರೇ ಕಿರಿಯರಿಂದ ಹಿರಿಯರವರೆಗೆ ಸಂವಹನ ನಡೆಸಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್ ಸಲಹೆ ನೀಡಿದರು.

ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಪ್ರಸ್ತುತ ಶೈಕ್ಷಣಿಕ ಸಾಲಿನ ಕಾರ್ಯ ಚಟುವಟಿಕೆ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಸುಭದ್ರ ಬುನಾದಿ ಹಾಕಿಕೊಂಡರೆ ಮುಂದಿನ ಜೀವನ ಉತ್ತಮವಾಗಿರುತ್ತದೆ. ನಾರಿಮನ್ ಸೇರಿದಂತೆ ಹಿರಿಯ ವಕೀಲರನ್ನು ಆದರ್ಶವಾಗಿಟ್ಟುಕೊಳ್ಳಬೇಕು ಎಂದರು.

ಭಾರತದ ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರು ಹೇಳಿದಂತೆ ಪ್ರತಿಯೊಬ್ಬರಿಗೂ ದೂರದೃಷ್ಟಿತ್ವ, ಕನಸು ಇರಬೇಕು. ಕಾನೂನು ವಿದ್ಯಾರ್ಥಿಗಳು ಕೂಡ ನ್ಯಾಯಾಂಗ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ, ಹಿಂದೆ ನಿರ್ವಹಿಸಿರುವಂತಹ ಮಹನೀಯರನ್ನು ಆದರ್ಶವಾಗಿ ಇಟ್ಟುಕೊಂಡು, ಅವರ ವೃತ್ತಿ ಕೌಶಲತೆಯನ್ನು ಸ್ಫೂರ್ತಿಯಾಗಿಸಿಕೊಂಡರೆ ವೃತ್ತಿಯಲ್ಲಿ ಪ್ರವರ್ಧಮಾನಕ್ಕೆ ಬರಬಹುದು ಎಂದರು.

ವಕೀಲರು ಎಲ್ಲಾ ಕ್ಷೇತ್ರಗಳ ವಿದ್ಯಮಾನಗಳ ಬಗ್ಗೆ ತಿಳಿದುಕೊಂಡು, ಎಲ್ಲರೊಂದಿಗೆ ಬೆರೆಯುವುದು ಬಹಳ ಮುಖ್ಯ. ಇದರೊಂದಿಗೆ ಮಾತುಗಾರಿಕೆಯೂ ಅಗತ್ಯ. ಈ ಗುಣಗಳನ್ನು ವಿದ್ಯಾರ್ಥಿ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಹಿರಿಯ ನ್ಯಾಯಾಧೀಶರುಗಳೇ ಕೆಲವೊಮ್ಮೆ ತಮ್ಮ ಸಹವರ್ತಿಗಳ ಬಳಿ ಕೆಲವೊಂದು ವಿಷಯಗಳನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಏಕೆಂದರೆ ಜ್ಞಾನ ಎನ್ನುವುದರ ವ್ಯಾಪ್ತಿ ದೊಡ್ಡದು. ಆದ್ದರಿಂದ ಒಬ್ಬರಿಗೊಬ್ಬರು ವಿಷಯಗಳನ್ನು ಕೇಳಿ ತಿಳಿದುಕೊಳ್ಳಬೇಕು. ಇದಲ್ಲದೇ ಸಮಯ ಸಿಕ್ಕಾಗ ಸುಪ್ರೀಂ ಹೈಕೋರ್ಟ್‌ಗೆ ಭೇಟಿ ನೀಡಿ, ಅಲ್ಲಿ ಹಿರಿಯ ವಕೀಲರ ವಾದ, ಪ್ರತಿವಾದವನ್ನು ಆಲಿಸಿ, ಇದರಿಂದ ನಿಮಗೂ ಜ್ಞಾನ ಹೆಚ್ಚುತ್ತದೆ. ಇದು ವೃತ್ತಿ ಜೀವನಕ್ಕೆ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಪ್ರಾಂಶುಪಾಲೆ ಡಾ.ಪಿ.ದೀಪು, ಶಿಕ್ಷಕರು, ವಿದ್ಯಾರ್ಥಿಗಳು, ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

ಮತಗಟ್ಟೆಗಳಲ್ಲಿ ಉತ್ತಮ ಪ್ರತಿಕ್ರಿಯೆ, ಖುದ್ದಾಗಿ ಮತಗಟ್ಟೆಗೆ ಬಂದು ಪರಿಷ್ಕರಣೆಯಲ್ಲಿ ಪಾಲ್ಗೊಂಡ ಸಾರ್ವಜನಿಕರು

ಮೈಸೂರು, ನ.9(ಜಿಎ)–ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಗಾಗಿ ನಡೆಸುತ್ತಿರುವ ವಿಶೇಷ ಆಂದೋಲನಕ್ಕೆ ಮೈಸೂರಿನ ಮತಗಟ್ಟೆಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮತದಾರರ ಅಂತಿಮ ಪಟ್ಟಿಯನ್ನು 06.01.2025ರಂದು ಪ್ರಕಟಣೆ ಮಾಡಲು ಚುನಾವಣಾ ಆಯೋಗವು ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಅಕ್ಟೋಬರ್ 29ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಿದೆ. ಅದರಂತೆ ನ.28ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ನ. 9, 10, 23 ಮತ್ತು 24ರಂದು ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ವಿಶೇಷ ಆಂದೋಲನ ನಿಗದಿಪಡಿಸಿದ್ದು, ಡಿಸೆಂಬರ್ 24 ರೊಳಗಾಗಿ ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ಮಾಡಲಾಗುವುದು. 01.01.2025ರೊಳಗೆ ಅಂತಿಮ ಮತದಾರರ ಪಟ್ಟಿಯ ಗುಣಮಟ್ಟ ಪರಿಶೀಲನೆ ಪ್ರಕಟಣೆಗೊಳ್ಳಲಿದೆ.

ವಾರಾಂತ್ಯ ದಿನಗಳಿಂದ ಇಂದಿನಿಂದ ಆರಂಭವಾದ ವಿಶೇಷ ಪರಿಷ್ಕರಣೆಗೆ ಮೈಸೂರಿನ ಎಲ್ಲಾ ಮತಗಟ್ಟೆಗೆ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಆಗಮಿಸಿ, ತಮ್ಮ ಹೆಸರು, ವಿಳಾಸ ಸೇರಿದಂತೆ ಇನ್ನಿತರ ಮಾಹಿತಿಗಳ ಬಗ್ಗೆ ಮತಗಟ್ಟೆ ಮಟ್ಟದ ಅಧಿಕಾರಿಗಳ ಬಳಿ ಪರಿಶೀಲಿಸಿ, ತಿದ್ದುಪಡಿ ಮಾಡಿಕೊಂಡರು. ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳುವುದು. ಒಂದು ಪಕ್ಷ ಅವರ ಹೆಸರುಗಳು ಕೈಬಿಟ್ಟು ಹೋಗಿದ್ದಲ್ಲಿ ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಗಮನಕ್ಕೆ ತಂದು ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯಲ್ಲಿ ಹೆಸರುಗಳ ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಯಿತು.

ನಮೂನೆ–6ರಲ್ಲಿ ಸೇರ್ಪಡೆ ಮಾಡಬಹುದು. ನಮೂನೆ–6ಎ ಮೂಲಕ ಅನಿವಾಸಿ ಭಾರತೀಯರು ಅವರ ಹೆಸರನ್ನು ನೋಂದಾಯಿಸಿಕೊಳ್ಳಬಹುದು, ನಮೂನೆ–6ಬಿನಲ್ಲಿ ಮತದಾರರ ಪಟ್ಟಿಯೊಂದಿಗೆ ಆಧಾರ್ ಜೋಡಣೆ ಮಾಡಿಕೊಳ್ಳಬಹುದು, ನಮೂನೆ–7ರಲ್ಲಿ ತೆಗೆದು ಹಾಕುವುದು (ಮರಣ, ಸ್ಥಳಾಂತರ, ಪುನರಾವರ್ತನೆ) ಹಾಗೂ ನಮೂನೆ–8ರಲ್ಲಿ ಮತದಾರರ ಹೆಸರು, ವಿಳಾಸ ಮತ್ತು ಭಾವಚಿತ್ರಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ, ಒಂದು ವಿಧಾನಸಭಾ ಕ್ಷೇತ್ರದಿಂದ ಬೇರೆ ವಿಧಾನಸಭಾ ಕ್ಷೇತ್ರಕ್ಕೆ ವರ್ಗಾವಣೆ, ಒಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ವರ್ಗಾವಣೆ, ಬದಲಿ ಎಪಿಕ್‌ಗಾಗಿ ಮನವಿ ಮತ್ತು ಅಂಗವೈಕಲ್ಯ ಹೊಂದಿರುವ ಮತದಾರರ ಅಂಗವೈಕಲ್ಯವನ್ನು ದಾಖಲಿಸಬಹುದು. ಸೇರ್ಪಡೆ, ತಿದ್ದುಪಡಿ ಮಾಡುವ ವಿವರಗಳ ಮತದಾರರ ಗುರುತಿನ ಚೀಟಿಯನ್ನು ಸ್ಪೀಡ್‌ಪೋಸ್ಟ್ ಮುಖಾಂತರ ಮತದಾರರಿಗೆ ವಿತರಣೆ ಮಾಡಲಾಗುವುದು.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನೇಮಕವಾಗಿರುವ ಅಧಿಸೂಚಿತ ಮತದಾರರ ನೋಂದಣಾಧಿಕಾರಿಗಳು/ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ನಿಗದಿತ ನಮೂನೆಗಳಲ್ಲಿ ಆನ್‌ಲೈನ್ ಮೂಲಕವೇ ಅವಶ್ಯಕತೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಲು ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಸಾರ್ವಜನಿಕರು ಹಕ್ಕು ಮತ್ತು ಆಕ್ಷೇಪಣೆಯ ಅವಧಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ (voters.eci.gov.in website, VHA mobile App, BLO ಗಳ ಮೂಲಕ BLO App ನಲ್ಲಿ) ಸಲ್ಲಿಸುವ ಕುರಿತು ಜಾಗೃತಿ ಮೂಡಿಸಲಾಯಿತು.

ಮೈಸೂರು ಜಿಲ್ಲೆಯಲ್ಲಿ ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 2,915 ಮತಗಟ್ಟೆಗಳಿದ್ದು, ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ 235, ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 252, ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ 274, ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರದಲ್ಲಿ 282, ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ 246, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ 341, ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ 265, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 248, ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ 283, ವರುಣಾ ವಿಧಾನಸಭಾ ಕ್ಷೇತ್ರದಲ್ಲಿ 261 ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ 228 ಮತಗಟ್ಟೆಗಳಿವೆ.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಪಡುವಾರಹಳ್ಳಿಯಲ್ಲಿರುವ ಸರ್ಕಾರಿ ಪಿಯು ಕಾಲೇಜಿನ ಮತಗಟ್ಟೆಯಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಆರಂಭವಾಗಿದೆ.

ಜಾಮೀನಿಗೆ ಸುಪ್ರೀಂ ಕೋರ್ಟ್ ಮೊರೆ ಹೋದ ಪ್ರಜ್ವಲ್: ನಾಳೆ ವಿಚಾರಣೆ

ನವದೆಹಲಿ, ನ.9– ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ತನಗೆ ಜಾಮೀನು ನೀಡಲು ನಿರಾಕರಿಸಿದ ಕರ್ನಾಟಕ ಹೈಕೋರ್ಟ್ ಆದೇಶದ ವಿರುದ್ಧ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



2024ರ ಲೋಕ ಸಭಾ ಚುನಾವಣೆಗೆ ಮುಂಚಿತವಾಗಿ ವಿಡಿಯೋಗಳು ಸೋರಿಕೆಯಾದ ನಂತರ ಪ್ರಕರಣಗಳು ಬೆಳಕಿಗೆ ಬಂದಿದ್ದವು. ಈ ಪ್ರಕರಣದಲ್ಲಿ ತಮಗೆ ಜಾಮೀನು ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಅವರು, ವಕೀಲ ಬಾಲಾಜಿ ಶ್ರೀನಿವಾಸನ್ ಮೂಲಕ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಪ್ರಕರಣವು ನ್ಯಾಯ ಮೂರ್ತಿಗಳಾದ ಬೇಲಾ ಎಂ ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರ ನ್ನೊಳಗೊಂಡ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬರಲಿದೆ. ಪ್ರಕರಣದಲ್ಲಿ ಪ್ರಜ್ವಲ್ ಅವರ ತಂದೆ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಲಾಗಿತ್ತು. ಆದರೆ, ನಂತರ ಅವರಿಗೆ ಜಾಮೀನು ನೀಡಲಾಯಿತು. ದೂರಿನಲ್ಲಿ ಆರೋಪಿ ಎಂದು ಹೆಸರಿಸಲಾದ ಅವರ ತಾಯಿ ಭವಾನಿ ರೇವಣ್ಣ ಅವರು ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಅಕ್ಟೋಬರ್ 21ರಂದು ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ವಿಶೇಷ ರಜೆ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಮೇಲ್ನೋಟಕ್ಕೆ ಅರ್ಜಿದಾರರ ಕೃತ್ಯ ಇಂದ್ರಿಯಗಳ ಮೇಲೆ ನಿಯಂತ್ರಣ ಕಳೆದುಕೊಂಡಿರುವುದು ಮತ್ತು ಸ್ವಾಸ್ಥ್ಯ ಸಮಾಜದ ಬೆನ್ನುಹುರಿಗೆ ಚಳಿ ಹುಟ್ಟಿಸುವುದನ್ನು ಚಿತ್ರಿಸುತ್ತಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅಭಿಪ್ರಾಯಪಟ್ಟಿದ್ದರು. ಮೇ ತಿಂಗಳಲ್ಲಿ ಪ್ರಜ್ವಲ್ ಜರ್ಮನಿಯಿಂದ ಹಿಂದಿರುಗಿದ ನಂತರ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಎಸ್‌ಐಟಿ ಅವರನ್ನು ಬಂಧಿಸಿತ್ತು.

'ವೃದ್ಧಿ' ಯಶಸ್ವಿ ಸಂಭ್ರಮಾಚರಣೆ



ಮೈಸೂರಿನ ನೆಸ್ಲೆ ಇಂಡಿಯಾ ಮತ್ತು ಎಸ್‌ಎಂ ಸೆಹಗಲ್ ಫೌಂಡೇಶನ್, ಪ್ರಾಜೆಕ್ಟ್ 'ವೃದ್ಧಿ' ಐದು ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ನಡೆಸಲಾಯಿತು. ಈ ವೇಳೆ ನೆಸ್ಲೆ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾರಾಯಣನ್, ಎಸ್‌ಎಂ ಸೆಹಗಲ್ ಫೌಂಡೇಶನ್‌ನ ಟ್ರಸ್ಟಿ ಮತ್ತು ಸಿಇಓ ಶ್ರೀಮತಿ ಅಂಜಲಿ ಮಖಿಜಾ ಮತ್ತಿತರರು ಉಪಸ್ಥಿತರಿದ್ದರು.

ಕೆಎಎಸ್ ಪರೀಕ್ಷಾ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ನ.9– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'ದ ವತಿಯಿಂದ ಕರ್ನಾಟಕ ಲೋಕ ಸೇವಾ ಆಯೋಗದವರು ಡಿಸೆಂಬರ್ 29ರಂದು ನಡೆಸಲಿರುವ ಕೆಎಎಸ್ ಪರೀಕ್ಷೆಗೆ 30 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲಾಗುತ್ತಿದೆ. ಆಸಕ್ತರು ನವೆಂಬರ್ 16ರೊಳಗಾಗಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಚೇರಿಯಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2515944 ಅನ್ನು ಸಂಪರ್ಕಿಸಬಹುದು.

ಮಳಲವಾಡಿ ನ್ಯಾಯಾಲಯದ ಆವರಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟನೆ



ಮೈಸೂರಿನ ಮಳಲವಾಡಿಯ ನೂತನ ನ್ಯಾಯಾಲಯದ ಆವರಣದಲ್ಲಿ ಶನಿವಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಮೈಸೂರು ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿಗಳೂ ಆದ ಎಸ್.ಜಿ.ಪಂಡಿತ್ ಉದ್ಘಾಟಿಸಿದರು. ಬಳಿಕ ಎಲ್ಲಾ ನ್ಯಾಯಾಲಯಗಳ ವಿವರಗಳನ್ನುಳ್ಳ ನಾಮಫಲಕಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಅನಾವರಣಗೊಳಿಸಿದರು. ಚಿತ್ರದಲ್ಲಿ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ, ವಕೀಲ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುಧೀರ್ ಮತ್ತು ಪದಾಧಿಕಾರಿಗಳನ್ನು ಕಾಣಬಹುದು.

ಅಥ್ಲೀಟ್‌ಗಳಿಗೆ ನಗದು ಪುರಸ್ಕಾರ

ಮೈಸೂರು,ನ.9–ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ 2022–23 ಮತ್ತು 2023–24ನೇ ಸಾಲಿನ ಶಾಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯ ಹಂತದ ಅಥ್ಲೆಟಿಕ್ಸ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ ಮೈಸೂರು ಜಿಲ್ಲಾ ಅಥ್ಲೆಟ್‌ಗಳಿಗೆ ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರವನ್ನು ಹಾಗೂ ಪಾರಿತೋಷಕವನ್ನು ನೀಡಿ ಸನ್ಮಾನಿಸಲು ತೀರ್ಮಾನಿಸಿದೆ.

ಜೊತೆಗೆ ಅತ್ಯುತ್ತಮ ಸಾಧನೆಗೈದ ಅಥ್ಲೆಟ್‌ಗೆ ವರ್ಷದ ಅತ್ಯುತ್ತಮ ಅಥ್ಲೇಟ್ ಹಾಗೂ ಅತ್ಯುತ್ತಮ ಪತ್ರಿಕಾ ಕ್ರೀಡಾ ವರದಿಗಾರ ಹಾಗೂ ಅತ್ಯುತ್ತಮ ಪತ್ರಿಕಾ ಕ್ರೀಡಾ ಛಾಯಾಗ್ರಾಹಕ ಪುರಸ್ಕಾರಗಳನ್ನು ನೀಡಲು ಸಂಸ್ಥೆಯು ನಿರ್ಧರಿಸಿದೆ.

ಏಪ್ರಿಲ್ 2022ರಿಂದ ಮಾರ್ಚ್ 2024ರವರೆಗೆ ನಡೆದ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ ಮೈಸೂರು ಜಿಲ್ಲೆಯ ಶಾಲಾ, ಪದವಿ ಪೂರ್ವ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಅಥ್ಲೆಟ್‌ಗಳು ಭಾವಚಿತ್ರವುಳ್ಳ ಸ್ವವಿವರ ಹಾಗೂ ಪ್ರತಿನಿಧಿಸಿದ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿಗಳನ್ನು ಎಂ.ಯೋಗೇಂದ್ರ, ಮೊ. 94480–46667, ಜಿ.ಆರ್.ಪ್ರಭಾಕರ್, ಮೊ. 9751971978 ಅಥವಾ ಸಿ.ಕೆ.ಮುರಳೀಧರನ್, ಮೊ. 9845231243ಗೆ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ನ.30 ಕಡೆ ದಿನ.

ಬಿಗಿ ಭದ್ರತೆಯೊಂದಿಗೆ ಮೇಲುಕೋಟೆಗೆ ರಾಜಮುಡಿ



ಮಂಡ್ಯ: ವಿಶ್ವ ವಿಖ್ಯಾತ ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಡೆಯುವ ರಾಜಮುಡಿ ಉತ್ಸವಕ್ಕೆ ಜಿಲ್ಲಾ ಖಜಾನೆಯಿಂದ ರಾಜಮುಡಿಗೆ ಶನಿವಾರ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಪೂಜೆ ಸಲ್ಲಿಸಿ ಪೊಲೀಸ್ ಬಿಗಿ ಭದ್ರತೆಯ ಜೊತೆಗೆ ಮೇಲುಕೋಟೆ ದೇವಸ್ಥಾನಕ್ಕೆ ಕಳುಹಿಸಿಕೊಡಲಾಯಿತು.

ಈ ವೇಳೆ ಜಿಲ್ಲಾಧಿಕಾರಿ ಡಾ.ಕುಮಾರ್ ಅವರು ಮಾತನಾಡಿ, ನವೆಂಬರ್ 18ರವರೆಗೆ ರಾಜಮುಡಿ ಉತ್ಸವವಿರುವುದರಿಂದ ಅಧಿಕಾರಿಗಳ ಉಪಸ್ಥಿತಿಯೊಂದಿಗೆ ಪೊಲೀಸ್ ಬಿಗಿ ಭದ್ರತೆಯಲ್ಲಿ ರಾಜಮುಡಿಯನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಕಳಿಸಿಕೊಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ತಹಶೀಲ್ದಾರ್ ತಮ್ಮೇಗೌಡ, ಪಾಂಡವಪುರ ಉಪ ವಿಭಾಗಾಧಿಕಾರಿ ಎಸ್.ಕೆ.ಶ್ರೀನಿವಾಸ್, ಶ್ರೀಚೆಲುವನಾರಾಯಣ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಏನ್.ಎಸ್. ಶೀಲಾ ಸೇರಿ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ವಸತಿ ನಿಲಯ ಉದ್ಘಾಟನೆ

ಉತ್ತಮ ಶಿಕ್ಷಣ ಪಡೆದು ಬದುಕು ಕಟ್ಟಿಕೊಳ್ಳಲು ಶ್ರೀಗಳ ಕರೆ



ಚಿನಕುರಳಿಯ ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ವಸತಿ ನಿಲಯವನ್ನು ಡಾ.ನಿರ್ಮಲಾನಂದನಾಥಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಯದುವೀರ್, ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಚಿನಕುರಳಿ,ನ.9–ಪ್ರತಿಯೊಬ್ಬ ಮನುಷ್ಯನ ಹುಟ್ಟಿಗೂ ಒಂದು ಉದ್ದೇಶವಿರುತ್ತದೆ. ಆ ಉದ್ದೇಶವನ್ನು ಅರ್ಥೈಸಿಕೊಳ್ಳದೆ ಹೋದರೆ ನಮ್ಮ ಬದುಕೆ ಕಳೆದು ಹೋಗುತ್ತದೆ ಎಂದು ಶ್ರೀಕ್ಷೇತ್ರ ಆದಿಚುಂಚನಗಿರಿಯ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥಸ್ವಾಮಿ ಹೇಳಿದರು.

ಚಿನಕುರಳಿಯ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ವಸತಿ ನಿಲಯ ಉದ್ಘಾಟನೆ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಪೋಷಕರ ದುಡಿಮೆಯಿಂದ ಓದುತ್ತಿರುವ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಬದುಕು ಕಟ್ಟಿಕೊಳ್ಳಬೇಕು. ಓದುವ ದಿನಗಳಲ್ಲಿ ವಿದ್ಯಾರ್ಥಿ ಮನಸ್ಸು ಚಂಚಲವಾಗುತ್ತದೆ. ಅಂತಹ ಸಂದರ್ಭದಲ್ಲಿ ಯಾವುದೇ ತಪ್ಪು ದಾರಿ, ಕೆಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳದೆ ಒಳ್ಳೆಯ ಮಾರ್ಗದಲ್ಲಿಯೇ ಸಾಗಬೇಕು ಎಂದು ಸಲಹೆ ನೀಡಿದರು.

ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಮಾತನಾಡಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕೆಂಬ ಉದ್ದೇಶದಿಂದ ಗ್ರಾಮೀಣ ಪ್ರದೇಶದಿಂದ ದೊಡ್ಡ ಸಂಖ್ಯೆಯಲ್ಲಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅಂತಹ ಸನ್ನಿವೇಶವನ್ನು ಅರ್ಥೈಸಿಕೊಂಡಿರುವ ಸಿ.ಎಸ್.ಪುಟ್ಟರಾಜು ಅವರು ಉತ್ತಮ ಶಿಕ್ಷಣ ಸಂಸ್ಥೆಯ ಆರಂಭಿಸಿದ್ದಾರೆ ಎಂದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 2047ಕ್ಕೆ ವಿಕಸಿತ ಭಾರತ ಸಮಗ್ರ ಅಭಿವೃದ್ಧಿಯ ಕನಸ್ಸು ಹೊತ್ತಿದ್ದಾರೆ. ಭಾರತ ಬಲಿಷ್ಠವಾಗಿ ಪ್ರಗತಿ ಸಾಧಿಸಬೇಕಾದರೆ, ಯುವ ಸಮುದಾಯ ಬಹಳ ಮುಖ್ಯವಾಗಿದೆ. ಯುವ ಸಮುದಾಯಕ್ಕೆ ಅಂತರಾಷ್ಟ್ರ ಸ್ಪರ್ಶದ ಗುಣಮಟ್ಟದ ಶಿಕ್ಷಣ ನೀಡಬೇಕಾಗಿದ್ದು ಇಂತಹ ಶಿಕ್ಷಣ ಸಂಸ್ಥೆಗಳು ಅಂತಹ ಕೆಲಸ ಮಾಡಬೇಕು. ಎಸ್‌ಟಿಜಿ ಶಿಕ್ಷಣ ಸಂಸ್ಥೆಯೂ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಾಕಷ್ಟು ನೆರವಾಗುತ್ತಿದೆ ಎಂದರು.

ಇದೇ ವೇಳೆ ನೀಟ್ ಪರೀಕ್ಷೆಯಲ್ಲಿ 672 ಅಂಕಗಳಿಸಿ ಉಚಿತ ವೈದ್ಯಕೀಯ ಸೀಟು ಪಡೆದ ಎಸ್‌ಟಿಜಿ ಕಾಲೇಜಿನ ವಿದ್ಯಾರ್ಥಿ ಮಹದೇಶ್ವರಪುರ ಗ್ರಾಮದ ತೇಜಸ್‌ಗೌಡ ಅವರಿಗೆ ಮುಂದಿನ ವೈದ್ಯಕೀಯ ಶಿಕ್ಷಣಕ್ಕೆ ತಗಲುವ ಸರಕಾರಿ ಪ್ರವೇಶಾತಿ ಶುಲ್ಕದ ಡಿಡಿಯನ್ನು ಸಂಸ್ಥೆ ಅಧ್ಯಕ್ಷ ಸಿ.ಎಸ್.ಪುಟ್ಟರಾಜು, ಸಿಇಓ ಸಿ.ಪಿ.ಶಿವರಾಜು ವಿತರಣೆ ಮಾಡಿದರು.

ಇಂದು ನಡೆಯಬೇಕಾಗಿದ್ದ ಸೀ ಪ್ಲೇನ್ ಪ್ರಾಯೋಗಿಕ ಹಾರಾಟ ಮುಂದೂಡಿಕೆ



ಮಂಡ್ಯ: ಭಾರತ ಸರ್ಕಾರ ವಿಮಾನಯಾನ ಸಚಿವಾಲಯದ ನಿರ್ದೇಶನದಂತೆ ರಾಜ್ಯ ಸರ್ಕಾರವು ಕೆಆರ್‌ಎಸ್ ಅಣೆಕಟ್ಟೆಯ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಬಳಿ ನ.10ರಂದು ಆಯೋಜಿಸಲಾಗಿದ್ದ ಸಿ ಪ್ಲೇನ್ ಪ್ರಾಯೋಗಿಕ ಹಾರಾಟವನ್ನು ತಾಂತ್ರಿಕ ಕಾರಣಾಂತರಗಳಿಂದ ಮುಂದೂಡಲಾಗಿದೆ.

ಹಲವು ಮಾರ್ಗಗಳಿಂದ ಕೆಆರ್‌ಎಸ್ ಬಳಿ ಪ್ರಾಯೋಗಿಕ ಹಾರಾಟವನ್ನು ಆಯೋಜಿಸಲಾಗುತ್ತಿತ್ತು. ಆದರೆ ಈ ಬಾರಿ ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಾಯೋಗಿಕ ಹಾರಾಟಕ್ಕೆಂದೇ ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಇತ್ತೀಚೆಗೆ ಸ್ಥಳ ಪರಿಶೀಲನೆ ನಡೆಸಿ, ಸೂಕ್ತವಾಗಿ ಕಾರ್ಯಕ್ರಮ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ ಇದೀಗ ಸೀ ಪ್ಲೇನ್ ಹಾರಾಟ ಮುಂದೂಡಿದೆ.

ಸೀ ಪ್ಲೇನ್ ಪ್ರಾಯೋಗಿಕ ಹಾರಾಟಕ್ಕೆ ಪಾಲ್ಗೊಳ್ಳಲು ಮಂಡ್ಯ ಜಿಲ್ಲೆ ಸೇರಿದಂತೆ ಅಕ್ಕಪಕ್ಕದ ಜಿಲ್ಲೆಗಳಿಂದ ಪ್ರವಾಸಿಗರು ಆಗಮಿಸುತ್ತಿದ್ದರು. ಇದೀಗ ಪ್ರವಾಸಿಗರಿಗೆ ನಿರಾಶೆಯಾಗಿದೆ.

ರಾಜ್ಯೋತ್ಸವ ಪ್ರಶಸ್ತಿ



ಮಂಜುನಾಥ್



ಶ್ರೀಕಾಂತ್ ಚಿಮ್ಮಲ್

ಕೆಆರ್.ಪೇಟೆ: ಜಿಲ್ಲೆಯ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರ ಸಂಘಟನೆಯಾದ ಪ್ರತಿಷ್ಠಿತ ಮಂಡ್ಯ ಕರ್ನಾಟಕ ಸಂಘವು ನೀಡುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಕೆ.ಆರ್.ಪೇಟೆಯ ಇಬ್ಬರು ಪ್ರತಿಭಾನ್ವಿತರು ಆಯ್ಕೆಯಾಗಿದ್ದಾರೆ.

ತೆಂಡೇಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಹಾಗೂ ಸಾಹಿತಿಗಳಾದ ಬಲ್ಲೇನಹಳ್ಳಿ ಮಂಜುನಾಥ್ ಅವರು ಈ ಬಾರಿಯ ಸಾಹಿತ್ಯ ಕ್ಷೇತ್ರದ ಪ್ರಶಸ್ತಿಗೆ ಕೊರಟೀಕೆರೆ ಲಕ್ಷ್ಮಮ್ಮ ರಾಮೇಗೌಡ ಸ್ಮಾರಕ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಇದೇ ರೀತಿ ಕಿಕ್ಕೇರಿಯ ಕೆಪಿಎಸ್ ಶಾಲೆಯ ಸಂಗೀತ ಶಿಕ್ಷಕ, ಕಲಾವಿದ ಶ್ರೀಕಾಂತ್ ಚಿಮ್ಮಲ್ ಅವರ ಸಂಗೀತ ಕ್ಷೇತ್ರದ ಸಾಧನೆ ಗುರುತಿಸಿ ಲಕ್ಷ್ಮಮ್ಮ ಶಿವನಂಜೇಗೌಡ ಸ್ಮಾರಕ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ನ.11ರಂದು ಸಂಜೆ 4ಕ್ಕೆ ಮಂಡ್ಯ ನಗರದ ಪಿಇಎಸ್ ಕಾಲೇಜಿನ ವಿವೇಕಾನಂದ ರಂಗಮಂದಿರದಲ್ಲಿ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಭಕ್ತಿ, ಶ್ರದ್ಧೆ, ಧರ್ಮ ಮಾರ್ಗದಿಂದ ಶಾಂತಿ, ನೆಮ್ಮದಿ ಸಾಧ್ಯ



ಶ್ರೀ ಮಂಚಮ್ಮ ದೇವಿ ದೇವಸ್ಥಾನ ಉದ್ಘಾಟನಾ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳು

ಮಂಡ್ಯ: ಪ್ರಾಚೀನ ಕಾಲದಿಂದಲೂ ಮನುಷ್ಯ ಶ್ರದ್ಧೆ, ಭಕ್ತಿ, ನಿಷ್ಠೆಯಿಂದ ದೇವರನ್ನು ಪೂಜಿಸಿಕೊಂಡು ಬರುತ್ತಿದ್ದಾನೆ. ಅದೇ ಮಾರ್ಗದಲ್ಲಿ ಕಲ್ಲಹಳ್ಳಿ ಗ್ರಾಮಸ್ಥರು ಸುಂದರವಾದ ಶ್ರೀ ಮಂಚಮ್ಮ ದೇವಿ ದೇವಾಲಯವನ್ನು ನೂತನವಾಗಿ ನಿರ್ಮಿಸಿದ್ದಾರೆ. ಇದು ಒಳ್ಳೆಯ ಕೆಲಸವಾಗಿದೆ ಎಂದು ಶ್ರೀ ಕ್ಷೇತ್ರ ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ತಿಳಿಸಿದರು.

ನಗರದ ಕಲ್ಲಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿದ್ದ ಶ್ರೀ ಮಂಚಮ್ಮ ದೇವಿ ದೇವಸ್ಥಾನ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದು ಮನುಷ್ಯನಲ್ಲಿ ಶಾಂತಿ ಮತ್ತು ನೆಮ್ಮದಿ ಮಾಯವಾಗಿದೆ ಭಕ್ತಿ ಶ್ರದ್ಧೆ ಹಾಗೂ ಆಸ್ಥೆಯಿಂದ ಧರ್ಮ ಮಾರ್ಗದಲ್ಲಿ ನಡೆದಾಗ ಮಾತ್ರ ಶಾಂತಿ ಮತ್ತು ನೆಮ್ಮದಿ ಲಭ್ಯವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಮನಸ್ಸಿನಲ್ಲಿ ಅಸಮಾಧಾನ ಹಾಗೂ ಕ್ಲೇಷ ಉಂಟಾದಾಗ ನೀವು ನಂಬಿರುವ ಭಗವಂತನ ಸ್ಮರಣೆಯಲ್ಲಿ ಭಾಗಿಯಾದರೆ ನೆಮ್ಮದಿ ಪ್ರಾಪ್ತವಾಗುತ್ತದೆ. ನಂಬಿಕೆ ಮತ್ತು ವಿಶ್ವಾಸದಿಂದ ಭಗವಂತನನ್ನು ಪ್ರಾರ್ಥಿಸಬೇಕು. ನಮ್ಮ ನಡೆ ಧರ್ಮ ಮಾರ್ಗದಲ್ಲಿರಬೇಕು ಎಂದು ತಿಳಿಸಿದರು.


ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನದ ಫಲವಾಗಿ ಮನುಷ್ಯ ಇಂದು ಸದೃಢನಾಗಿದ್ದಾನೆ. ಇಂತಹ ಸಂದರ್ಭದಲ್ಲಿ ಆಧ್ಯಾತ್ಮಿಕ ಭಕ್ತಿಯ ಬೇರುಗಳ ಜೊತೆ ಬದುಕುವ ಪ್ರವೃತ್ತಿ ರೂಢಿಸಿಕೊಂಡಲ್ಲಿ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಆಧುನೀಕತೆ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಮನುಷ್ಯರು ಸೃಷ್ಟಿಕರ್ತ ಹಾಗೂ ಹೆತ್ತವರನ್ನು ಮರೆಯುವ ಸ್ಥಿತಿ ನಿರ್ಮಾಣವಾಗಿದೆ. ಬದಲಾವಣೆಯ ಕಾಲಘಟ್ಟದಲ್ಲಿ ವ್ಯಕ್ತಿಗಳ ಭಾವನೆಯೂ ಬದಲಾವಣೆಯಾಗಿದೆ. ಇಂತಹ ಸಂದರ್ಭದಲ್ಲಿ ನೂತನ ದೇವಾಲಯ ನಿರ್ಮಿಸಿ ಭಗವಂತನ ಸ್ಮರಣೆ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಮಂಡ್ಯ ನಗರ ವ್ಯಾಪ್ತಿಯಲ್ಲಿ ಕಲ್ಲಹಳ್ಳಿ ಹಾಗೂ ಹೊಸಹಳ್ಳಿ ಗ್ರಾಮಗಳು ಮೇರು ಶಿಖರವಿದ್ದಂತೆ. ಈ ಗ್ರಾಮಗಳ ಅಭಿವೃದ್ಧಿಯ ಜೊತೆ ಧಾರ್ಮಿಕತೆಯ ಶ್ರೀಮಂತಿಕೆಯನ್ನೂ ಸಾಕಾರಗೊಳಿಸಲು ನೂತನ ದೇವಾಲಯ ನಿರ್ಮಾಣ ಸಮಯೋಚಿತವಾಗಿದೆ ಎಂದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಕಡಿಮೆ ಅವಧಿಯಲ್ಲಿ ಸುಂದರವಾದ ದೇವಾಲಯ ನಿರ್ಮಾಣಕ್ಕೆ ಹಾಗೂ ಲೋಕಾರ್ಪಣೆಗೆ ಗ್ರಾಮಸ್ಥರೆಲ್ಲ ಒಗ್ಗೂಡಿ ಧಾರ್ಮಿಕ ಕಾರ್ಯ ಯಶಸ್ವಿಗೊಳಿಸಿರುವುದು ಉತ್ತಮ ಕಾರ್ಯ ಎಂದು ತಿಳಿಸಿದರು. ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಇದ್ದರು.

ದೇವೇಗೌಡರ ಪ್ರತಿಮೆ ಅನಾವರಣ



ಪಾಂಡವಪುರ,ನ.9–ತಾಲೂಕಿನ ಎಲೆಕೆರೆ ಹ್ಯಾಂಡ್‌ಪೋಸ್ಟ್‌ನ ರುತ್ವಿ ಕನ್ವೆನ್ಷನ್ ಹಾಲ್‌ನ ಆವರಣದಲ್ಲಿ ಎಚ್‌ಡಿಡಿ ಅಭಿಮಾನಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಚಲುವರಾಜು, ಸಿವಿಲ್ ಎಂಜಿನಿಯರ್ ಅಕ್ಷಯ್ ಅವರು ಅಭಿಮಾನದಿಂದ ನಿರ್ಮಿಸಿರುವ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರ ಪ್ರತಿಮೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ.ನಿರ್ಮಲಾ ನಂದನಾಥ ಸ್ವಾಮೀಜಿ ಮತ್ತು ಸುತ್ತೂರು ಶ್ರೀಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅನಾವರಣಗೊಳಿಸಿದರು.

ಮಾಜಿಪ್ರಧಾನಿ ಎಚ್.ಡಿ.ದೇವೇಗೌಡ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಆಗಮಿಸಿದ ಸಂಸದ ಯದುವೀರ್ ಹಾಗೂ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅವರನ್ನು ಆತ್ಮೀಯವಾಗಿ ಕಲಾವಿದರ ಹಾಗೂ ವಿವಿಧ ಕಲಾತಂಡಗಳ ಮೂಲಕ ಭವ್ಯವಾಗಿ ಸ್ವಾಗತಿಸಲಾಯಿತು. ನಂತರ ರುತ್ವಿ ಕನ್ವೆನ್ಷನ್ ಹಾಲ್‌ನಲ್ಲಿ 4ಲಕ್ಷ ವೆಚ್ಚದಲ್ಲಿ ಫೈಬರ್‌ನಿಂದ ನಿರ್ಮಿಸಿರುವ 11 ಅಡಿ ಎತ್ತರದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಪ್ರತಿಮೆಯನ್ನು ಅನಾವರಣಗೊಳಿಸಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪಿ.ಚಲುವರಾಜು, ಸಿವಿಲ್ ಎಂಜಿನಿಯರ್ ಅಕ್ಷಯ್ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ನ.12,13 ರಂದು ನೀರು ಸರಬರಾಜು ವ್ಯತ್ಯಯ

ಮಂಡ್ಯ,ನ.9– ಕಲ್ಲಹಳ್ಳಿ ಸೋಮೇಶ್ವರ ಸಮುದಾಯ ಭವನದ ಎದುರು 600 ಮಿ.ಮೀ. ವ್ಯಾಸದ ಎಂ.ಎಸ್.ಫೀಡರ್ ಕೊಳವೆ ಮಾರ್ಗದ ದುರಸ್ಥಿ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ನ.12 ಮತ್ತು 13 ರಂದು ಮಂಡ್ಯ ನಗರದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮಂಡ್ಯ ನಿರ್ವಹಣಾ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಗಮ್ಮನ ರಮೇಶ್ ನಿಧನ

ಕೆ.ಆರ್.ಪೇಟೆ: ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಮೂಗಮ್ಮನ ರಮೇಶ್ (60) ಶನಿವಾರ ನಿಧನ ಹೊಂದಿದ್ದಾರೆ.



ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೂರನೇ ಪುಟದಿಂದ

ಕೊರೊನಾಸ್ತ್ರ ಪ್ರಯೋಗ!

ಮಾಡಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಪ್ರತ್ಯೇಕ ಸಂಸ್ಥೆಯಿಂದ ತನಿಖೆ ನಡೆಸಿ, ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿತ್ತು.

ಇದು ಮಧ್ಯಂತರ ವರದಿ, ನಮಗೆ ಪೂರ್ಣ ವರದಿ ನೀಡಲು ಸಮಯಾವಕಾಶ ಬೇಕಿದೆ. ಎಲ್ಲಾ ಜಿಲ್ಲೆಗಳಿಂದ ಪೂರ್ಣ ಮಾಹಿತಿ ದೊರೆತಿಲ್ಲ. ಆದರೆ, ಪ್ರಥಮ ಹಂತದಲ್ಲಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಹಣ ವಸೂಲಿ ಮಾಡಿ ಎಂದಿದೆ. ಆಯೋಗದ ವರದಿಯನ್ನು ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸ್ವೀಕೃತಿ ಮಾಡಿದ್ದಲ್ಲದೆ, ಶಿಫಾರಸುಗಳ ಅನುಷ್ಠಾನ ಮತ್ತು ಕ್ರಮ ಕೈಗೊಳ್ಳುವ ಸಂಬಂಧ ಸಂಪುಟ ಉಪಸಮಿತಿ ರಚನೆ ತೀರ್ಮಾನ ಮಾಡಿತ್ತು.

ಕಿಟ್‌ಗಳ ಖರೀದಿ ವೇಳೆ 7223.64 ಕೋಟಿ ರೂ. ಮೊತ್ತದ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ಅದರಲ್ಲಿ 500 ಕೋಟಿ ರೂ.ಗಳನ್ನು ತಕ್ಷಣವೇ ವಸೂಲಿ ಮಾಡುವಂತೆ ಹೇಳಿತ್ತು. ಇದೀಗ ಕಾಂಗ್ರೆಸ್ ಕುನ್ಹಾ ಅವರ ವರದಿಯ ಕೆಲವು ಭಾಗಗಳನ್ನು ದಾಖಲೆ ಸಹಿತ ಬಹಿರಂಗಪಡಿಸಿದೆ, ಈ ಎಲ್ಲಾ ಹಗರಣದ ಹಿಂದೆ ಯಡಿಯೂರಪ್ಪ ಮತ್ತು ಶ್ರೀರಾಮುಲು ಇದ್ದು, ತನಿಖೆ ನಡೆಸುವಂತೆ ಮಾಡಿರುವ ಶಿಫಾರಸನ್ನು ಬಹಿರಂಗಪಡಿಸಿದ್ದಾರೆ.

ಏಪ್ರಿಲ್ 2020ರಲ್ಲಿ ಚೀನಾದ ಎರಡು ಕಂಪನಿಗಳಿಂದ 3 ಲಕ್ಷ ಯೂನಿಟ್ ಪಿಪಿಇ ಕಿಟ್‌ಗಳನ್ನು ಅತ್ಯಂತ ದುಬಾರಿ ದರಕ್ಕೆ ಖರೀದಿಸಿರುವುದಕ್ಕೆ ಯಾವುದೇ ನಿಖರವಾದ ಕಾರಣವಿಲ್ಲ. ಚೀನಾದ ಡಿಹೆಚ್‌ಬಿ ಗ್ಲೋಬಲ್ ಹಾಂಕಾಂಗ್ ಮತ್ತು ಬಿಗ್ ಫಾರ್ಮಾಸ್ಯೂಟಿಕಲ್ಸ್‌ನಿಂದ ಪ್ರತಿ ಯೂನಿಟ್‌ಗೆ ಎರಡು ಸಾವಿರ ರೂ. ನಂತೆ ಪಿಪಿಇ ಕಿಟ್‌ಗಳನ್ನು ಖರೀದಿಸಲಾಗಿದೆ.

ಪಾರದರ್ಶಕತೆ ಕಾಯ್ದೆ ವಿನಾಯಿತಿ ಪಡೆಯದೆ ನೇರವಾಗಿ ಖರೀದಿ ಮಾಡಲಾಗಿದೆ, ಸಂಗ್ರಹಣಾ ನಿಯಮದ ಮೂಲ ಕಾರ್ಯವಿಧಾನವನ್ನು ಅನುಸರಿಸದೆ, ನೇರವಾಗಿ ಅಂದಿನ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರ ಆದೇಶದಂತೆ ಖರೀದಿ ಮಾಡಲಾಗಿದೆ.

ಇಡೀ ಪ್ರಕ್ರಿಯೆ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರ ಆಪ್ತರಾದ ಪೂರೈಕೆದಾರರಿಗೆ ಅನುಕೂಲ ಮತ್ತು ಲಾಭ ಮಾಡಿಕೊಡುವ ರೀತಿಯಲ್ಲಿ ನಡೆದಿದೆ ಎಂದು ಆಯೋಗದ ವರದಿ ತಿಳಿಸಿದೆ.

ಬಗ್ಗುವುದೂ ಇಲ್ಲ; ಜಗ್ಗುವುದೂ ಇಲ್ಲ!

ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ.

ಅವರು ಮಾಡಿರುವ ತಪ್ಪುಗಳು ನ್ಯಾಯಾಲಯ ಮತ್ತು ಜನರ ಕಣ್ಣ ಮುಂದೆ ಇವೆ. ಅದರಿಂದ ಮೊದಲು ಹೊರಬರಲಿ, ಹಳೆಯದನ್ನು ಕೆದಕಿ ವಿರೋಧಿಗಳನ್ನು ಕಟ್ಟಿಹಾಕುವ ಪ್ರಯತ್ನ ಫಲ ಕೊಡುವುದಿಲ್ಲ ಎಂದು ಕಿವಿಮಾತು ಹೇಳಿದರು. ರಾಜ್ಯದಲ್ಲಿ ನಡೆಯುತ್ತಿರುವ ಮೂರೂ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಕಂಡು ಎನ್‌ಡಿಎ ಮೈತ್ರಿಕೂಟ ಜಯ ಭೇರಿ ಬಾರಿಸಲಿದೆ. ಇದರ ಮನವರಿಕೆ ಆಗುತ್ತಿದ್ದಂತೆ ಸಿದ್ದರಾಮಯ್ಯ, ತಾವೂ ಸೇರಿದಂತೆ ತಮ್ಮ ಪಕ್ಷದ ಶಾಸಕರು, ಮುಖಂಡರನ್ನು ಚುನಾವಣೆಗೆ ನಿಯೋಜಿಸಿ ಆಡಳಿತ ಸ್ತಬ್ಧವಾಗುವಂತೆ ಮಾಡಿದ್ದಾರೆ. ಸೋಲಿನ ಭೀತಿಯಿಂದ ವಿರೋಧಿಗಳನ್ನು ಕಟ್ಟಿಹಾಕುವ ಯತ್ನ ಮಾಡುತ್ತಿದ್ದಾರೆ ಎಂದರು.

ಮಾರಾಮಾರಿ!

ಸಿಗಲಿಲ್ಲ ಎಂದು ಏರು ಧನಿಯಲ್ಲೇ ಆಕ್ಷೇಪಣೆ ವ್ಯಕ್ತಪಡಿಸಿದರಂತೆ. ಸಾರ್ವಜನಿಕವಾಗಿ ತನ್ನೊಂದಿಗೆ ಉದ್ಧಟತನದಿಂದ ಮಾತನಾಡಿದ್ದರಿಂದ ಸಿಟ್ಟಿಗೆದ್ದ ಸಚಿವರು, ತನ್ನ ಪರಿಚಯಸ್ಥನೇ ಆದ ಆ ಕಾಂಗ್ರೆಸ್ ಮುಖಂಡರ ಮೇಲೆ ಹಲ್ಲೆ ಮಾಡಿದರಂತೆ ಇದರಿಂದ ಕೆರಳಿದ ಕಾಂಗ್ರೆಸ್ ಮುಖಂಡ, ತಿರುಗಿ ಸಚಿವರಿಗೆ ಹಿಗ್ಗಾಮುಗ್ಗ ಥಳಿಸಿದರೆಂದು ಹೇಳಲಾಗಿದೆ. ಈ ವೇಳೆ ಸಚಿವರ ಬೆಂಬಲಿಗರು ಕಾಂಗ್ರೆಸ್ ಮುಖಂಡನಿಗೆ ಧರ್ಮದೇಟು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ತಕ್ಷಣವೇ ಮಧ್ಯ ಪ್ರವೇಶಿಸಿದ ಸಚಿವರ ಭದ್ರತಾ ಸಿಬ್ಬಂದಿ ಹಾಗೂ ಇತರ ರಾಜಕಾರಣಿಗಳು ಇಬ್ಬರನ್ನೂ ಸಮಾಧಾನಪಡಿಸಿ, ಕಾಂಗ್ರೆಸ್ ಮುಖಂಡನನ್ನು ಹೋಟೆಲ್‌ನಿಂದ ಹೊರ ಕಳುಹಿಸಿದ್ದಾರೆ ಎಂದು ನಂಬ ಲರ್ಹ ಮೂಲಗಳಿಂದ ತಿಳಿದುಬಂದಿದೆ. ಆದರೆ, ಈ ವಿಚಾರವಾಗಿ ಯಾವುದೇ ರೀತಿಯ ಪ್ರಕರಣ ದಾಖಲಾಗಿಲ್ಲ. ಆ ಜಿಲ್ಲೆಯ ಯಾವೊಬ್ಬ ಕಾಂಗ್ರೆಸ್ ಮುಖಂಡರು ಈ ಬಗ್ಗೆ ಮಾತನಾಡಲೂ ಹಿಂಜರಿಯುತ್ತಿದ್ದಾರೆ.

ಈ ಮಧ್ಯೆ ಚನ್ನಪಟ್ಟಣ ಉಪ ಚುನಾವಣೆ ವೇಳೆ ಈ ವಿಚಾರವನ್ನು ಪ್ರಸ್ತಾಪಿಸಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮೈಸೂರಿನಲ್ಲಿ ಸಚಿವರು ಹಾಗೂ ಇನ್ನಿತರರು ವರ್ಗಾವಣೆ ದಂಧೆ ವಿಚಾರಕ್ಕೆ ಕಿತ್ತಾಡಿಕೊಂಡಿದ್ದಾರೆ. ವರ್ಗಾವಣೆ ವ್ಯವಹಾರದಲ್ಲಿ ಹಣ ಹಂಚಿಕೆ ವಿಚಾರದಲ್ಲಿ ಹೊಡೆದಾಡಿಕೊಂಡಿದ್ದಾರೆ ಎಂಬ ಮಾಹಿತಿ ಇದೆ. ಒಬ್ಬ ಮಂತ್ರಿಯನ್ನು ಬಹಿರಂಗವಾಗಿ ಹೊಡೆಯುತ್ತಾರೆ ಎಂದರೆ ಈ ರಾಜ್ಯ ಎಲ್ಲಿಗೆ ಬಂದಿದೆ ಎಂಬುದನ್ನು ಗಮನಿಸಬೇಕು ಎಂದು ಕುಮಾರಸ್ವಾಮಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ 700 ಕೋಟಿ ವಸೂಲಿ

ಬಲದ ಮಹಾ ವಿಧಾನಸಭೆಗೆ ನವೆಂಬರ್ 20ರಂದು ಮತದಾನ ನಡೆಯಲಿದೆ. ನವೆಂಬರ್ 23ರಂದು ಫಲಿತಾಂಶ ಪ್ರಕಟವಾಗಲಿದೆ. ಬಿಜೆಪಿಯ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಅಜಿತ್ ಪವಾರ್ ಅವರ ಎನ್‌ಸಿಪಿಯೊಂದಿಗೆ ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟದಲ್ಲಿದೆ.

ಕಾಂಗ್ರೆಸ್, ಮಾಜಿ ಸಿಎಂ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ, ಶರದ್ ಪವಾರ್ ಅವರ ಎನ್‌ಸಿಪಿ ಇರುವ 'ಮಹಾ ವಿಕಾಸ ಆಘಾಡಿ' (ಎಂವಿಎ) ಕೂಟವು ಮಹಾಯುತಿಗೆ ಸವಾಲೊಡ್ಡಿದೆ ಎಂವಿಎ ವಿರುದ್ಧವೂ ವಾಗ್ದಾಳಿ ನಡೆಸಿರುವ ಪ್ರಧಾನಿ, ಇಡೀ ಮಹಾ ವಿಕಾಸ ಆಘಾಡಿಯು ಭ್ರಷ್ಟಾಚಾರ, ಬಹುಕೋಟಿ ಹಗರಣ ಮತ್ತು ಸುಲಿಗೆಯ ಮೇಲೆ ನಿಂತಿದೆ ಎಂಬುದು ಇಡೀ ರಾಷ್ಟ್ರಕ್ಕೆ ಗೊತ್ತಿದೆ ಅದು, ವರ್ಗಾವಣೆ ದಂಧೆ ಹಗರಣಗಳು ಮತ್ತು ಲೂಟಿಗೆ ಸಮಾನಾರ್ಥಕವಾಗಿದೆ ಎಂದು ಗುಡುಗಿದ್ದಾರೆ.

ಮುಡಾ ಹಗರಣ ಬಯಲು ಮಾಡಿದ್ದೇ ಡಿಕೆಶಿ!

ಸಿದ್ದರಾಮಯ್ಯ ವಿರುದ್ಧವೂ ಹರಿಹಾಯ್ದ ಜನಾರ್ಧನ ರೆಡ್ಡಿ, ಮುಡಾ ಹಗರಣ ಬಯಲಾದಾಗ ಸಿದ್ದರಾಮಯ್ಯನವರು ನಾವೇನು ಸೈಟ್ ತಗೋಬಾರ್ದ, ತಗೊಂಡಿದ್ದೀವಿ, ತಪ್ಪೇನಿದೆ? ಎಂದರು. ನಾನು ಬಹಳ ಬಡವ, ಮುಖ್ಯ ಮಂತ್ರಿ ಆಗಿದ್ದೇನೆ.

ರಾಜಕಾರಣದಲ್ಲಿ ಹಣ ಮಾಡಿಲ್ಲ, ಬಾಡಿಗೆ ಮನೆಯಲ್ಲಿದ್ದೇನೆ ಎಂದು ಹೇಳುವ ನಿಮಗೆ (ಸಿದ್ದರಾಮಯ್ಯ) 14 ಸೈಟ್ ಬೇಕಿತ್ತಾ? ಎಂದು ಪ್ರಶ್ನಿಸಿದ ಅವರು, 64 ಕೋಟಿ ಕೊಡಿ ಸೈಟ್ ವಾಪಸ್ ಕೊಡುತ್ತೇವೆ ಎಂದರು. ಆನಂತರ ಒಂದು ಪೈಸೆಯೂ ಪಡೆಯದೇ 14 ಸೈಟ್‌ಗಳನ್ನು ವಾಪಸ್ ಮಾಡುವ ಮೂಲಕ ಅವರು ಮಾಡಿದ ಹಗರಣವನ್ನು ಅವರೇ ಒಪ್ಪಿಕೊಂಡಿದ್ದಾರೆ ಎಂದ ರೆಡ್ಡಿ, ಇದು 14 ಸೈಟ್ ವಿಚಾರವಲ್ಲ, 64 ಕೋಟಿ ಹಗರಣವಲ್ಲ, 5000 ಕೋಟಿ ಹಗರಣ ಎಂದು ನಾನು ಈ ಹಿಂದೆಯೇ ಹೇಳಿದ್ದೆ. ಸಿದ್ದರಾಮಯ್ಯನವರು ತಮ್ಮ ಬೆಂಬಲಿಗರ ಹೆಸರಲ್ಲಿ ಬೇನಾಮಿಯಾಗಿ ಸೈಟ್‌ಗಳನ್ನು ಪಡೆದಿದ್ದಾರೆ. ಈಗ ಇಡಿ ಅಧಿಕಾರಿಗಳು ಮುಡಾದಲ್ಲಿ ಸೈಟ್ ಪಡೆದಿರುವವರನ್ನು ಒಬ್ಬೊಬ್ಬರನ್ನಾಗಿ ಕರೆದು ನಿಮಗೆ ಸೈಟ್ ಪಡೆಯುವ ಯೋಗ್ಯತೆ ಇದೆಯೇ ಎಂದು ಕೇಳಿದಾಗ, ಅವರು ನಮಗೆ ಸೈಟ್ ಪಡೆಯುವ ಯೋಗ್ಯತೆ ಇಲ್ಲ. ಆದರೆ, ಮುಖ್ಯಮಂತ್ರಿ ಗಳ ಮಕ್ಕಳು ಮತ್ತು ಬಾಮೈದರು ನಮ್ಮ ಬಳಿಗೆ ಬಂದು ನಿಮ್ಮ ಹೆಸರಿನಲ್ಲಿ ಸೈಟ್ ಮಾಡುತ್ತೇವೆ. ನಾವು ಕೇಳಿದಾಗ ವಾಪಸ್ ಕೊಡಬೇಕು ಎಂದು ಹೇಳಿ ನಮ್ಮ ಹೆಸರಿಗೆ ಸೈಟ್ ಮಾಡಿಕೊಟ್ಟಿದ್ದಾರೆ ಎಂದು ಇಡಿ ಅಧಿಕಾರಿಗಳ ಮುಂದೆ ಹೇಳುತ್ತಿದ್ದಾರೆ ಎಂದು ಜನಾರ್ಧನ ರೆಡ್ಡಿ ತಮ್ಮ ಸಂದರ್ಶನದಲ್ಲಿ ಹೇಳಿದ್ದಾರೆ.

ನೋಟಿಸ್ ವಾಪಸ್; ಯಾವುದೇ ಕ್ರಮವೂ ಇಲ್ಲ

ಸಂಬಂಧಿಸಿದಂತೆ ಮ್ಯುಟೇಷನ್ ಮಾಡಲು ಯಾವುದೇ ಕಚೇರಿ ಅಥವಾ ಯಾವುದೇ ಪ್ರಾಧಿಕಾರದಿಂದ (ವಕ್ಫ್) ನೀಡಲಾದ ನಿರ್ದೇಶನಗಳನ್ನು ತಕ್ಷಣದಿಂದಲೇ ಹಿಂಪಡೆಯುವುದು ಹಾಗೂ ಮ್ಯುಟೇಷನ್ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸುವುದು. ಈ ಕುರಿತು ನೀಡಲಾದ ಎಲ್ಲ ನೋಟಿಸ್‌ಗಳನ್ನು ಹಿಂಪಡೆಯುವುದು. ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿರುದ್ಧ ಯಾವುದೇ ಕ್ರಮಗಳನ್ನು ಜರುಗಿಸತಕ್ಕದ್ದಲ್ಲ. ಮುಖ್ಯಮಂತ್ರಿಗಳ ಸೂಚನೆ ಅನ್ವಯ ಏಪ್ರಿಲ್ 15, ಏ.23 ಹಾಗೂ ನವೆಂಬರ್ 7ರ ನೆನಪೋಲೆ 2ನ್ನು ತಕ್ಷಣದಿಂದಲೇ ಹಿಂಪಡೆಯಲಾಗಿದೆ ಎಂದು ತಮ್ಮ ಸೂಚನೆಯಲ್ಲಿ ತಿಳಿಸಿರುವ ಕಂದಾಯ ಇಲಾಖೆ (ಭೂ ಮಂಜೂರಾತಿ ಭೂ ಸುಧಾರಣೆ ಮತ್ತು ಭೂ ಕಂದಾಯ) ಅಪರ ಕಾರ್ಯದರ್ಶಿ ಡಾ. ಉದಯ ಕುಮಾರ್ ಶೆಟ್ಟಿ, ಮುಖ್ಯಮಂತ್ರಿಗಳ ಆದೇಶ ಇದ್ದಾಗ್ಯೂ ಮೇಲಾಧಿಕಾರಿಗಳ ಅನುಮತಿ ಅಥವಾ ಅನುಮೋದನೆ ಇಲ್ಲದೇ ನವೆಂಬರ್ 7ರ ನೆನಪೋಲೆ 2ನ್ನು ಹೊರಡಿಸಿದ ಅಧಿಕಾರಿ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮಾಲೀಕನ ಮನೆಯಲ್ಲಿ 15 ಕೋಟಿ ರೂ. ಚಿನ್ನ, 40 ಲಕ್ಷ ರೂ. ನಗದು ಕದ್ದ ಸೆಕ್ಯೂರಿಟಿ ಗಾರ್ಡ್

ಬೆಂಗಳೂರು, ನ.9–ಸೆಕ್ಯೂರಿಟಿ ಗಾರ್ಡ್, ತನ್ನ ಮಾಲೀಕನ ಮನೆಯಲ್ಲಿದ್ದ 15 ಕೋಟಿ ರೂ. ಮೌಲ್ಯದ ಚಿನ್ನ ಹಾಗೂ 40 ಲಕ್ಷ ರೂ. ನಗದು ಕಳ್ಳತನ ಮಾಡಿ ಪರಾರಿಯಾಗಿರುವ ಘಟನೆ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ಚಿನ್ನದ ವ್ಯಾಪಾರಿ ಸುರೇಂದ್ರ ಕುಮಾರ್ ಜೈನ್ ಅವರ ಜ್ಯುವೆಲರಿ ಶಾಪ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ನೇಪಾಳ ಮೂಲದ ನವ್ರಾಜ್, ತನ್ನ ಮಾಲೀಕನ ಮನೆಯಲ್ಲಿದ್ದ ಬರೋಬ್ಬರಿ 15.15 ಕೋಟಿ ರೂ. ಮೌಲ್ಯದ 18.4 ಕೆ.ಜಿಯ ಚಿನ್ನಾಭರಣ ಮತ್ತು 40 ಲಕ್ಷ ರೂ. ನಗದು ಕಳ್ಳತನ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ಚಿನ್ನದ ವ್ಯಾಪಾರಿ ಸುರೇಂದ್ರ ಕುಮಾರ್ ಅವರು ನವೆಂಬರ್ 7ರಂದು ಊರಿನಿಂದ ವಾಪಸ್ಸಾದಾಗ ಈ ಕಳ್ಳತನ ಬೆಳಕಿಗೆ ಬಂದಿದೆ. ಈ ಸಂಬಂಧ ಅವರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ನೇಪಾಳ ಮೂಲದ ನವ್ರಾಜ್ ಕಳ್ಳತನ ಮಾಡಿದ್ದಾನೆಂದು ಆರೋಪಿಸಿದ್ದಾರೆ. ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಿನ್ನದ ವ್ಯಾಪಾರಿ ಮನೆಯಲ್ಲಿ ಕಳುವಾಗಿದ್ದು 18.4ಕೆಜಿ ಚಿನ್ನ. ಆ ಪೈಕಿ ಸುರೇಂದ್ರ ಕುಮಾರ್ ಜೈನ್ ಕುಟುಂಬಕ್ಕೆ 2.8 ಕೆಜಿ ಚಿನ್ನ ಸೇರಿದ್ದು, ಅವರ 5 ಸಹೋದರಿಯರ ಒಟ್ಟು 2.7 ಕೆಜಿ ಚಿನ್ನ ಹಾಗೂ ವ್ಯಾಪಾರದ 12.8 ಕೆಜಿ ಚಿನ್ನ ಕಳುವು ಮಾಡಲಾಗಿದೆ. ಜೊತೆಗೆ ಮನೆಯಲ್ಲಿದ್ದ ವ್ಯಾಪಾರದ 37.8 ಲಕ್ಷ, ವೈಯಕ್ತಿಕ 3 ಲಕ್ಷ ರೂ. ಹಣ ಸಹ ಕಳುವಾಗಿದ್ದು, ಒಟ್ಟಾರೆ 18 ಕೆಜಿ 437 ಗ್ರಾಂ ಚಿನ್ನ, 40.80 ಲಕ್ಷ ನಗದು ಸೇರಿ ಅಂದಾಜು ಮೌಲ್ಯ 15.15 ಕೋಟಿ ರೂ. ಆಗಿದೆ.

ನವ್ರಾಜ್ ನೇಪಾಳ ಮೂಲದವನಾಗಿದ್ದು, ಜ್ಯುವೆಲರಿ ಶಾಪ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ. ಆತನಿಗೆ ಮನೆಯಿಲ್ಲದ ಕಾರಣ ತಮ್ಮ ನಿವಾಸದ ಬಳಿ ಪಾರ್ಕಿಂಗ್‌ನಲ್ಲಿ ಸೆಕ್ಯೂರಿಟಿಗೆ ಮನೆ ನೀಡಿದ್ದೆ. ಕಳೆದ ಆರು ತಿಂಗಳಿಂದ ಪತ್ನಿ ಜೊತೆ ಸೆಕ್ಯೂರಿಟಿ ರೂಂನಲ್ಲಿ ನವ್ರಾಜ್ ವಾಸವಿದ್ದ. ಈ ನಡುವೆ ಜ್ಯುವೆಲರಿ ಶಾಪ್‌ನ ಸೆಕ್ಯೂರಿಟಿ ಕೆಲಸದ ಜೊತೆ ತಮ್ಮ ಮನೆಯಲ್ಲೂ ಕೆಲಸ ಮಾಡುತ್ತಿದ್ದ. ಗಿಡಗಳಿಗೆ ನೀರು ಹಾಕುವುದು ಸೇರಿದಂತೆ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ ಎಂದು ಮಾಲೀಕ ಪೊಲೀಸರಿಗೆ ತಿಳಿಸಿದ್ದಾರೆ.

ನವೆಂಬರ್ 1ರಂದು ಸಂಜೆ 5 ಗಂಟೆಗೆ ಕುಟುಂಬ ಸಮೇತ ಗುಜರಾತ್‌ಗೆ ತೆರಳಿದ್ದ ಚಿನ್ನದ ವ್ಯಾಪಾರಿ ಸುರೇಂದ್ರ ಕುಮಾರ್ ಅವರು ನವೆಂಬರ್ 7ರಂದು ಊರಿನಿಂದ ವಾಪಸ್ಸಾದಾಗ ಮನೆ ಕಳ್ಳತನವಾಗಿರುವುದು ತಿಳಿದು ನವ್ರಾಜ್‌ಗೆ ಕರೆ ಮಾಡಿದ್ದಾರೆ. ಆದರೆ ಆತನ ನಂಬರ್ ಸ್ವಿಚ್ ಆಫ್ ಬಂದಿದೆ. ಹೀಗಾಗಿ ಆತನೇ ಕಳ್ಳತನ ಮಾಡಿರಬಹುದು ದೂರು ನೀಡಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡು ವಿಜಯನಗರ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಗ್ರಾಹಕರ ಸಂರಕ್ಷಣಾ ಕಾಯ್ದೆ' ಕುರಿತು ಎಂಜಿಪಿ ಸದಸ್ಯರೊಂದಿಗೆ ಡಿಡಿಪಿಐ ಇಂದು ಸಂವಾದ

ಮೈಸೂರು, ನ.8(ಎಸ್‌ಪಿಎನ್)– ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಹಾಗೂ 1983ರ ಗ್ರಾಹಕರ ಸಂರಕ್ಷಣಾ ಕಾಯ್ದೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಡಿಡಿಪಿಐ ಜವರೇಗೌಡ ಅವರೊಂದಿಗೆ ನ.10ರಂದು ಸಂಜೆ 4 ಗಂಟೆಗೆ ಸಂವಾದ ಏರ್ಪಡಿಸಲಾಗಿದೆ.

ಮೈಸೂರಿನ ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಸಂವಾದ ನಡೆಯಲಿದೆ. ದೇಶದಲ್ಲಿ ಗ್ರಾಹಕರ ಚಳುವಳಿಯನ್ನು ಉತ್ತೇಜಿಸಲು ಕೇಂದ್ರ ಸರ್ಕಾರ ರಾಷ್ಟ್ರೀಯ ಗ್ರಾಹಕರ ಸಂರಕ್ಷಣಾ ಕಾಯ್ದೆಯನ್ನು 1983ರಲ್ಲಿ ಪರಿಚಯಿಸಿದೆ. ಹಾಗಾಗಿ ಡಿ.24 ರಂದು ದೇಶಾದ್ಯಂತ ರಾಷ್ಟ್ರೀಯ ಗ್ರಾಹಕರ ದಿನ ಆಚರಿಸಲಿದೆ. ಈ ಕುರಿತು ಮೈಸೂರಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿರುವ ಗ್ರಾಹಕರ ಕ್ಲಬ್ ಮೂಲಕ ಸಾರ್ವಜನಿಕರಿಗೆ ಗ್ರಾಹಕ ಕಾಯ್ದೆಯ ಮಹತ್ವ ತಿಳಿಸಲು ತೀರ್ಮಾನಿಸಲಾಗಿದೆ ಎಂದು ಎಂಜಿಪಿ ಪ್ರಕಟಣೆಯಲ್ಲಿ ತಿಳಿಸಿದೆ. ಪ್ರಗತಿ ಪರ ಗ್ರಾಹಕರ ಸಂರಕ್ಷಣಾ ಕಾಯ್ದೆ ಬಳಕೆ ಬಗ್ಗೆ ಆರಂಭಿಕ ದಿನಗಳಲ್ಲಿ ಜನರಲ್ಲಿ ಉತ್ಸಾಹವಿತ್ತು. ಆದರೆ ಗ್ರಾಹಕ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳ ತೀರ್ಮಾನ ಮಂದಗತಿಯಲ್ಲಿ ಆಗುತ್ತಿರುವ ಪರಿಣಾಮ ಗ್ರಾಹಕರ ನ್ಯಾಯಾಲಯಗಳು ಪ್ರಸ್ತುತ ಸಿವಿಲ್ ನ್ಯಾಯಾಲಯಗಳಂತೆ ಕಾರ್ಯನಿರ್ವಹಿಸುತ್ತಿರುವುದು ಬೇಸರ ಸಂಗತಿ ಎಂದು ಎಂಜಿಪಿ ತಿಳಿಸಿದೆ.

ಅಲ್ಲದೆ, ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬದಲಾದಂತೆ ಆನ್‌ಲೈನ್ ಶಾಪಿಂಗ್ ಭರಾಟೆ ಹೆಚ್ಚಾಗಿದ್ದು, ಇದನ್ನು ಮನಗಂಡ ಕೇಂದ್ರ ಸರ್ಕಾರ 2019ರಲ್ಲಿ ಗ್ರಾಹಕ ಕಾಯ್ದೆಗೆ ತಿದ್ದುಪಡಿ ತಂದು ಮತ್ತಷ್ಟು ಗ್ರಾಹಕ ಸ್ನೇಹಿಯಾಗಿಸಿದೆ. ಹಾಗಾಗಿ ತಿದ್ದುಪಡಿ ಕಾಯ್ದೆಯನ್ನು ಶಾಲಾ–ಕಾಲೇಜು ಹಂತದಲ್ಲಿನ ಗ್ರಾಹಕರ್ ಕ್ಲಬ್ ಮೂಲಕ ಗ್ರಾಹಕರ ಹಕ್ಕುಗಳಲ್ಲಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಸಂವಾದ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ದೂ.ಸಂ: 0821–251510 ಸಂಪರ್ಕಿಸಬಹುದು.

ಚನ್ನಪಟ್ಟಣ ಉಪ ಚುನಾವಣೆ: 8 ಅರೆ ಸೇನಾಪಡೆ ಆಗಮನ; 197 ಮತಗಟ್ಟೆಗಳಿಗೆ ನಿಯೋಜನೆ

ಬೆಂಗಳೂರು, ನ.9– ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಾದ ಚನ್ನಪಟ್ಟಣ, ಸಂಡೂರು ಮತ್ತು ಶಿಗ್ಗಾಂವ್ ಕ್ಷೇತ್ರಗಳ ಉಪ ಚುನಾವಣೆ ಕಾವು ಏರತೊಡಗಿದೆ. ನವೆಂಬರ್ 13ರಂದು ಮತದಾನ ನಡೆಯಲಿದ್ದು, ನವೆಂಬರ್ 23ರಂದು ಫಲಿತಾಂಶ ಪ್ರಕಟವಾಗಲಿದೆ.

ಇವುಗಳ ಪೈಕಿ ಚನ್ನಪಟ್ಟಣ ಕ್ಷೇತ್ರವಂತೂ ಭಾರೀ ಕುತೂಹಲ ಮೂಡಿಸಿದೆ. ಈ ಉಪ ಚುನಾವಣೆಯಲ್ಲಿ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಷ್ಠೆ ಅಡಗಿದೆ. ಚನ್ನಪಟ್ಟಣದಲ್ಲಿ ಯಾರಿಗೆ ಗೆಲುವು ಎಂದು ಚರ್ಚೆಗಳು ಸಾಗಿವೆ. ಜನರು ತಮ್ಮ ತೀರ್ಪು ನೀಡುವುದು ಬಾಕಿ ಇದೆ. ಲೋಕಸಭೆ ಚುನಾವಣೆಯಲ್ಲಿ ಗೆದ್ದ ಬಳಿಕ ಚನ್ನಪಟ್ಟಣದ ಶಾಸಕ ಸ್ಥಾನಕ್ಕೆ ಹೆಚ್.ಡಿ.ಕುಮಾರಸ್ವಾಮಿ ರಾಜೀನಾಮೆ ನೀಡಿದರು. ಆದ್ದರಿಂದ ಉಪ ಚುನಾವಣೆ ಎದುರಾಗಿದೆ. ಬಿಜೆಪಿ–ಜೆಡಿಎಸ್‌ನಿಂದ ಹೆಚ್. ಡಿ. ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಅಭ್ಯರ್ಥಿ. ಪುತ್ರನನ್ನ ಗೆಲ್ಲಿಸಬೇಕು ಎಂದು ಕುಮಾರಸ್ವಾಮಿ ಮತ್ತು ಮೊಮ್ಮಗನ ಸಲುವಾಗಿ ಹೆಚ್‌ಡಿ ದೇವೇಗೌಡರೇ ಅಖಾಡಕ್ಕಿಳಿದು ಪಣತೊಟ್ಟು ಹಳ್ಳಿಹಳ್ಳಿಗಳಲ್ಲಿ ಪ್ರಚಾರವನ್ನು ಕೈಗೊಂಡಿದ್ದಾರೆ. ಬಿಜೆಪಿ ನಾಯಕರಾಗಿದ್ದ ಸಿ.ಪಿ. ಯೋಗೇಶ್ವರ ಉಪ ಚುನಾವಣೆ ಘೋಷಣೆಯಾದ ಬಳಿಕ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿ ಅಭ್ಯರ್ಥಿಯಾಗಿದ್ದಾರೆ. ತವರು ಜಿಲ್ಲೆಯಲ್ಲಿ ಸಿ.ಪಿ. ಯೋಗೇಶ್ವರ ಗೆಲ್ಲಿಸಬೇಕು ಎಂದು ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಅಬ್ಬರದ ಪ್ರಚಾರವನ್ನು ನಡೆಸುತ್ತಿದ್ದಾರೆ.

ಸೂಕ್ಷ್ಮ ಕೇಂದ್ರ: ರಾಜಕೀಯವಾಗಿ ಭಾರೀ ಪೈಪೋಟಿ ಇರುವುದರಿಂದ ಸೂಕ್ಷ್ಮ ಕ್ಷೇತ್ರವಾಗಿರುವ ಚನ್ನಪಟ್ಟಣದಲ್ಲಿ ಇಂದಿನಿಂದ ಭದ್ರತೆ ಹೆಚ್ಚಿಸಲಾಗಿದೆ. ಇಂದು ಪಟ್ಟಣಕ್ಕೆ ಅರೆಸೇನಾಪಡೆ ಆಗಮಿಸಿದ್ದು ಸೂಕ್ತ ಭದ್ರತೆ ಒದಗಿಸಲಾಗಿದೆ. ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಮಾಹಿತಿ ನೀಡಿ, ಪಾರಾ ಮಿಲಿಟರಿ ಪಡೆಯ 8 ತುಕಡಿಗಳು ಆಗಮಿಸಿದ್ದು, ಅವುಗಳಲ್ಲಿ 7 ತುಕಡಿಗಳನ್ನು 197 ಮತಗಟ್ಟೆಗಳಿಗೆ ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು. ರಾಮನಗರ ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್ ಮಾಹಿತಿ ನೀಡಿ, ಕ್ಷೇತ್ರದ ಬಹಿರಂಗ ಪ್ರಚಾರ ಕಾರ್ಯ ಬುಧವಾರ ಸಂಜೆ 5 ಗಂಟೆಗೆ ಮುಕ್ತಾಯವಾಗಲಿದೆ ಎಂದರು.

ಎರಡನೇ ಶನಿವಾರವೂ ಮೈಸೂರು ಲೋಕಾಯುಕ್ತ ಕಚೇರಿ ಕಾರ್ಯನಿರ್ವಹಣೆ!



ಮೈಸೂರು, ನ.9(ಬಿಎಲ್‌ಯು)– ಎರಡನೇ ಶನಿವಾರವಾದ ಇಂದು ರಜೆ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳು ಬಂದ್ ಆಗಿದ್ದರೆ, ಮುಡಾ ಹಗರಣದ ಬಗ್ಗೆ ತನಿಖೆ ನಡೆಸುತ್ತಿರುವ ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ಮಾತ್ರ ಇಂದು ಅಧಿಕಾರಿಗಳು ಹಾಗೂ ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು.

ಕರ್ತವ್ಯದ ದಿನವೂ ಕೆಲವು ಸರ್ಕಾರಿ ಕಚೇರಿಗಳಲ್ಲಿ ಬಾಗಿಲು ತೆರೆಯಲ್ಲ. ಕಚೇರಿ ತೆರೆದಿದ್ದರೂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೇ ಇರಲ್ಲ. ಇನ್ನು ರಜೆ ಇದ್ದರೆ, ಎಂತಹ ತುರ್ತು ಸಂದರ್ಭವಾದರೂ ಬಾಗಿಲು ತೆರೆಯಲ್ಲ.

ಎರಡನೇ ಶನಿವಾರವಾದ ಇಂದು ಮೈಸೂರಿನ ಎಲ್ಲಾ ಸರ್ಕಾರಿ ಕಚೇರಿಗಳು ಬಂದ್ ಆಗಿದ್ದರೆ ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿ ಮಾತ್ರ ಬಾಗಿಲು ತೆರೆದಿತ್ತು ಇಂದು ಬೆಳಿಗ್ಗೆ 10 ಗಂಟೆಗೆ ಕಚೇರಿ ತೆರೆದ ಅಧಿಕಾರಿ ಹಾಗೂ ಸಿಬ್ಬಂದಿ ಕರ್ತವ್ಯದಲ್ಲಿ ನಿರತರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ನವೆಂಬರ್ 25ರೊಳಗೆ ಹೈಕೋರ್ಟ್‌ಗೆ ವರದಿ ನೀಡಬೇಕಿರುವ ಹಿನ್ನೆಲೆಯಲ್ಲಿ ಕಾರ್ಯ ಒತ್ತಡದಲ್ಲಿರುವ ಲೋಕಾಯುಕ್ತ ಅಧಿಕಾರಿಗಳು ಹಾಗೂ ಸಿಬ್ಬಂದಿ ದಾಖಲಾತಿಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈ ಹಿನ್ನೆಲೆ ಲೋಕಾಯುಕ್ತ ಇನ್ಸ್‌ಪೆಕ್ಟರ್, ಡಿವೈಎಸ್ಪಿ ಸೇರಿದಂತೆ ಎಲ್ಲಾ ಸಿಬ್ಬಂದಿ ಇಂದು ಕೆಲಸದಲ್ಲಿ ನಿರತರಾಗಿದ್ದರು.

ಮುಡಾ ಪ್ರಕರಣದಲ್ಲಿ ಎ1 ಆರೋಪಿ ಸಿಎಂ ಸಿದ್ದರಾಮಯ್ಯ, ಎ2 ಆರೋಪಿ ಪಾರ್ವತಿ, ಎ3 ಆರೋಪಿ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಎ4 ಆರೋಪಿ ದೇವರಾಜು, ಮುಡಾ ಅದಿಕಾರಿಗಳು, ನಿವೃತ್ತ ಐಎಎಸ್ ಅಧಿಕಾರಿಗಳು ಸೇರಿದಂತೆ ಮಾಜಿ ಸಚಿವರನ್ನು ಈಗಾಗಲೇ ಲೋಕಾಯುಕ್ತರು ತನಿಖೆ ನಡೆಸಿದ್ದಾರೆ. ಮುಡಾ ಹಿಂದಿನ ಆಯುಕ್ತರಾದ ಡಾ.ನಟೇಶ್ ಹಾಗೂ ದಿನೇಶ್‌ಕುಮಾರ್ ಇನ್ನು ವಿಚಾರಣೆ ಮಾಡಬೇಕಿದ್ದು, ಸೋಮವಾರದ ನಂತರ ಅವರಿಗೂ ಸಮನ್ಸ್ ನೀಡಿ ವಿಚಾರಣೆ ಮಾಡುವ ಸಾಧ್ಯತೆ ಇದೆ.

ಹಂಚ್ಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ಮೈಸೂರು ತಾಲೂಕು ಹಂಚ್ಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೋಗಿ ಸಿದ್ದಯ್ಯ, ಉಪಾಧ್ಯಕ್ಷರಾಗಿ ಕಾಳಿಸಿದ್ದನಹುಂಡಿ ಮಹದೇವ ಅವಿರೋಧವಾಗಿ ಆಯ್ಕೆಯಾದರು. ನಂಜಪ್ಪ, ಕುಮಾರ್, ಎಚ್.ಎಸ್.ಸ್ವಾಮಿ, ಶಂಕರಪ್ಪ, ಮಹದೇವು, ಲಕ್ಷ್ಮೀನಾರಾಯಣಾಚಾರ್, ಹಾಲಯ್ಯ, ಗೌರಮ್ಮ, ಕಮಲಮ್ಮ ಮತ್ತಿತರರಿದ್ದರು.

ವಕ್ಫ್ ಬೋರ್ಡ್ ಮಸೂದೆ ವಾಪಸ್ಸಿಗೆ ಕರ್ನಾಟಕ ಪ್ರಜಾಪಾರ್ಟಿ ಆಗ್ರಹ



ಡಾ.ಬಿ.ಶಿವಣ್ಣ

ಮೈಸೂರು,ನ.9(ಎಂಟಿವೈ)– ರಾಜ್ಯದ ವಿವಿಧೆಡೆ ದಶಕಗಳ ಕಾಲ ವ್ಯವಸಾಯ ಮಾಡಿಕೊಂಡಿದ್ದ ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಸುತ್ತಿರುವ ವಕ್ಫ್ ಬೋರ್ಡ್ ಮಸೂದೆಯನ್ನು ಹಿಂಪಡೆಯುವಂತೆ ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವದ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ರಾಜ್ಯಾದ್ಯಂತ ಹಲವೆಡೆ ಏಳೆಂಟು ದಶಕಗಳಿಂದ ರೈತರು ವ್ಯವಸಾಯ ಮಾಡುತ್ತಿದ್ದಾರೆ. ಆದರೆ, ವಕ್ಫ್ ಬೋರ್ಡ್ ಮಸೂದೆಯಲ್ಲಿ ರೈತಾಪಿ ವರ್ಗದ ಮೇಲೆ ದಾಳಿ ಮಾಡಿ ಒಕ್ಕಲೆಬ್ಬಿಸಲು ಸಂಚು ನಡೆಸಲಾಗುತ್ತಿದೆ. ಆ ಮೂಲಕ ರೈತರಿಗೆ ಜಮೀನು ಕಿತ್ತುಕೊಳ್ಳಲು ವಕ್ಫ್ ಬೋರ್ಡ್ ಮುಂದಾಗಿದೆ. ಇದಕ್ಕೆ ನಮ್ಮ ವಿರೋಧವಿದ್ದು, ರೈತರ ಪರವಾಗಿ ಹೋರಾಟ ಮಾಡುವುದಾಗಿ ಡಾ.ಶಿವಣ್ಣ ಎಚ್ಚರಿಸಿದರು.

ವಂಶಪಾರಂಪರ್ಯದ ಮೂಲಕ ವ್ಯವಸಾಯ ಮಾಡಿಕೊಂಡು ಬರುತ್ತಿರುವ ರೈತರ ಹೆಸರನ್ನು ಆರ್‌ಟಿಸಿಯಲ್ಲಿ ಕೈ ಬಿಟ್ಟು ವಕ್ಫ್ ಬೋರ್ಡ್ ಹೆಸರನ್ನು ನಮೂದಿಸಿರುವುದನ್ನು ಕೂಡಲೇ ರದ್ದು ಮಾಡಬೇಕು. ಇದೇ ವಿಚಾರವಾಗಿ ರೈತರು ಪ್ರತಿಭಟಿಸಲು ಮುಂದಾದಾಗ ಮುಖ್ಯಮಂತ್ರಿಗಳು ಮೌಖಿಕ ಆದೇಶ ನೀಡಿ, ಒಕ್ಕಲೆಬ್ಬಿಸದಂತೆ ನಿರ್ದೇಶನ ನೀಡಿರುವುದಾಗಿ ಹೇಳಿದ್ದಾರೆ. ಆದರೆ ಇದಕ್ಕೆ ಕಾನೂನಿನ ಮಾನ್ಯತೆ ಇಲ್ಲ. ಹೀಗಾಗಿ ವಿಶೇಷ ಸಂಪುಟ ಸಭೆ ಕರೆದು ರಾಜ್ಯ ಗೆಜೆಟ್ ಮೂಲಕ ಈ ಕುರಿತ ಅಧಿಸೂಚನೆ ಹೊರಡಿಸಬೇಕು. ಇದಲ್ಲದಿದ್ದರೆ ರೈತರಿಗೆ ಎದುರಾಗಿರುವ ಸಮಸ್ಯೆ ತಪ್ಪುವುದಿಲ್ಲ. ಈ ರೀತಿಯ ಕ್ರಮ ಕೈಗೊಳ್ಳದಿದ್ದಲ್ಲಿ ತಮ್ಮ ಪಕ್ಷ ರಾಜ್ಯಾದ್ಯಂತ ರೈತರ ಬಚಾವೋ, ವಕ್ಫ್ ಬೋರ್ಡ್ ಹಠಾವೋ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲ ಕರ್ನಾಟಕ ಪ್ರಜಾ ಪಾರ್ಟಿ ರೈತಪರ್ವದ ಪದಾಧಿಕಾರಿಗಳಾದ ಶ್ರೀನಿವಾಸ್, ಪ್ರವೀಣ್ ಕುಮಾರ್, ಆರ್.ಡಿ.ಕುಮಾರ್, ಭಾಗ್ಯಮ್ಮ ಹಾಗೂ ಕುಮಾರಸ್ವಾಮಿ ಇದ್ದರು.

ಕೆ.ಆರ್.ಬ್ಯಾಂಕ್ ನಿರ್ದೇಶಕರಿಗೆ ಅಭಿನಂದನೆ



ಮೈಸೂರಿನ ಕೃಷ್ಣರಾಜೇಂದ್ರ ಬ್ಯಾಂಕ್ ನೂತನ ನಿರ್ದೇಶಕರಾಗಿ ಆಯ್ಕೆಯಾದ ಶಿವಪ್ರಕಾಶ್ ಅವರನ್ನು ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್ ಅಭಿನಂದಿಸಿದರು. 40ನೇ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಮೋಹನ್, ಅರುಣಾ ಶುಭಂ ಇನ್ನಿತರರು ಉಪಸ್ಥಿತರಿದ್ದರು.

ಅಂಗವೈಕಲ್ಯವುಳ್ಳ ಮಕ್ಕಳಿಗೆ ಅವಕಾಶ ಸಿಕ್ಕರೆ ಸಮಾಜದಲ್ಲಿ ಬೆಳಗಲಿವೆ

ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರಿಂದ ಸಾಧನಾ ಸಲಕರಣೆಗಳ ವಿತರಣೆ





ಮೈಸೂರಿನ ಹೂಟಗಳ್ಳಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಆರೋಗ್ಯ ತಪಾಸಣೆ ಹಾಗೂ ಸಾಧನಾ ಸಲಕರಣೆಗಳ ವಿತರಣಾ ಸಮಾರಂಭವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಡಿಡಿಪಿಐ ಜವರೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ಹೂಟಗಳ್ಳಿ ಮುಖಂಡರಾದ ಸುರೇಶ್, ಲೋಕೇಶ್, ಮಹದೇವು, ಮಹೇಶ್, ಸಿದ್ದರಾಜು ಮತ್ತಿತರರು ಹಾಜರಿದ್ದರು.

ಮೈಸೂರು, ನ.9– ಅಂಗವೈಕಲ್ಯತೆಯಿಂದ ಬಳಲುವ ಮಕ್ಕಳನ್ನು ತಾತ್ಸಾರ ಮನೋಭಾವದಿಂದ ನೋಡದೆ ಸರಿಸಮಾನವಾಗಿ ಕಂಡು ಅವಕಾಶ ಒದಗಿಸಿದರೆ ಖಂಡಿತ ಎಲ್ಲರಂತೆ ಸಮಾಜದಲ್ಲಿ ಬದುಕಬಲ್ಲರು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಹೂಟಗಳ್ಳಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಆರೋಗ್ಯ ತಪಾಸಣಾ ಹಾಗೂ ಸಾಧನಾ ಸಲಕರಣೆಗಳ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಆರು ವರ್ಷ ಮೇಲ್ಪಟ್ಟ 15 ವರ್ಷದೊಳಗಿನ ಅಂಗವಿಕಲತೆಯುಳ್ಳ ಮಕ್ಕಳಿಗೆ ವೈದ್ಯಕೀಯ ತಪಾಸಣಾ ಶಿಬಿರವನ್ನು ಅಲೀಂ ಸಂಸ್ಥೆ ವತಿಯಿಂದ ಆಯೋಜಿಸಲಾಗಿದೆ. ಕಣ್ಣು, ಕಿವಿ, ಕಾಲು ವೊದಲಾದ ಸಮಸ್ಯೆಗಳಿಂದ ಬಳಲುತ್ತಿರುವ ಮಕ್ಕಳನ್ನು ವೈದ್ಯರು ತಪಾಸಣೆ ನಡೆಸಲಿದ್ದಾರೆ. ಹೂಟಗಳ್ಳಿ ಶಾಲೆಯಲ್ಲಿ ಆರಂಭವಾಗಿರುವ ಈ ಶಿಬಿರವನ್ನು ಡಿಸೆಂಬರ್ 31ರವರೆಗೆ ನಡೆಸಲು ತೀರ್ಮಾನ ಮಾಡಿದ್ದಾರೆ. ಶಿಕ್ಷಕರು, ಪೋಷಕರು ಇದರ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.

ಶಿಕ್ಷಕರು ತಂತಮ್ಮ ಶಾಲೆಯ ಮಕ್ಕಳಿಗೆ ತಿಳಿವಳಿಕೆ ಮೂಡಿಸಬೇಕು. ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಲ್ಲಿ ಅನೇಕರಿಗೆ ಕಿವಿ,ಕಣ್ಣಿನ ಸಮಸ್ಯೆ ಇರುತ್ತದೆ. ಆದರೆ, ಅದನ್ನು ಗುರುತಿಸಲು ಸಾಧ್ಯವಾಗಿರಲ್ಲ. ಆಸ್ಪತ್ರೆಗೆ ತೋರಿಸಲು ಹಣವಿಲ್ಲವೆಂದು ಕೈ ಚೆಲ್ಲಿ ಕೂರುವ ಪೋಷಕರು ಯಾವುದೇ ಆತುರ ಮಾಡಿಕೊಳ್ಳದೆ ವೈದ್ಯರಲ್ಲಿ ಪರೀಕ್ಷೆ ಮಾಡಿಸಬೇಕು ಎಂದು ಸಲಹೆ ನೀಡಿದರು.

ವಿಶೇಷಚೇತನರ ಮಕ್ಕಳ ಸೇವೆ ಮಾಡುವುದು ದೇವರ ಸೇವೆ ಮಾಡಿದಂತೆ. ಸಾಮಾನ್ಯ ಮಕ್ಕಳಂತೆ ಈ ಮಕ್ಕಳನ್ನು ಸರಿಸಮಾನವಾಗಿ ಕಂಡು ಪ್ರೋತ್ಸಾಹ ನೀಡಬೇಕು. ಹುಟ್ಟು–ಸಾವು ಯಾವ ರೀತಿ ಇರುತ್ತದೋ ಅದೇ ರೀತಿ ಕೆಲವು ಮಕ್ಕಳಿಗೆ ಹುಟ್ಟಿನಿಂದ ಬರುವ ಸಮಸ್ಯೆಗೆ ದೂಷಣೆ ಮಾಡದೆ ದೇವರು ಕೊಟ್ಟ ಮಗು ಎನ್ನುವಂತೆ ನೋಡಿ ಬೆಳೆಸಬೇಕು. ನಾವು ಅವರನ್ನು ನಿರ್ಲಕ್ಷ್ಯ ಮಾಡುವ ಬದಲಿಗೆ ಅವಕಾಶ ಕೊಡಬೇಕು ಎಂದರು.

ದೃಷ್ಟಿಹೀನತೆ, ಬಲಹೀನತೆ ಮಕ್ಕಳೆಂದು ನೋಡದೆ ಪುಣ್ಯದ ಕೆಲಸವಾಗಿ ಕಾಣಬೇಕು. ಈ ವಿಚಾರದಲ್ಲಿ ಅಲೀಂ ಸಂಸ್ಥೆಯ ಮುಖ್ಯಸ್ಥರು ಹಾಗೂ ಪದಾಧಿಕಾರಿಗಳು ಸಾಧನಾ ಸಲಕರಣೆಗಳನ್ನು ವಿತರಿಸುತ್ತಿದ್ದಾರೆ. ಪ್ರತಿ ಮಗುವಿಗೆ ಅಗತ್ಯವಿರುವ ಸಲಕರಣೆ ನೀಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಕಾರ್ಯಕ್ರಮದಲ್ಲಿ ಡಿಡಿಪಿಐ ಜವರೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ಹೂಟಗಳ್ಳಿ ಮುಖಂಡರಾದ ಸುರೇಶ್, ಲೋಕೇಶ್, ಮಹದೇವು, ಮಹೇಶ್, ಸಿದ್ದರಾಜು ಮತ್ತಿತರರು ಹಾಜರಿದ್ದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರಿಗೆ ಅಭಿನಂದನೆ...



ಕಾಂಗ್ರೆಸ್ ಯುವ ಮುಖಂಡರಾದ ಅಶೋಕಪುರಂ ಮದನ್ ಅವರ ಎಂಎಂ ಅಸೋಸಿಯೇಟ್ಸ್ ಕಚೇರಿಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪನವರು ಉದ್ಘಾಟಿಸಿದ ವೇಳೆ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶಾಸಕರಾದ ಹರೀಶ್‌ಗೌಡರು, ತಿಮ್ಮಯ್ಯನವರು, ಕೆ.ಆರ್.ನಗರ ಶಾಸಕ ರವಿಶಂಕರ್, ತೊಣಚಿಕೊಪ್ಪಲು ಹರೀಶ್, ಶರತ್ ಇತರರು ಉಪಸ್ಥಿತರಿದ್ದರು.

ಆಗ್ರಾ–ಲಖನೌ ಎಕ್ಸ್‌ಪ್ರೆಸ್‌ವೇನಲ್ಲಿ ಭೀಕರ ಅಪಘಾತ: ಐವರ ದುರ್ಮರಣ

ಫಿರೋಜಾಬಾದ್: ನಿದ್ರೆಯ ಮಂಪರಿ ನಲ್ಲಿದ್ದ ಟೆಂಪೋ ಚಾಲಕನೊಬ್ಬ ನಿಂತಿದ್ದ ಕ್ಯಾಂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಐವರು ಸ್ಥಳದಲ್ಲೇ ಸಾವನ್ನಪ್ಪಿ, 24 ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಆಗ್ರಾ–ಲಖನೌ ಎಕ್ಸ್‌ಪ್ರೆಸ್‌ವೇನಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದೆ. ನಾಸಿರ್‌ಪುರ ಪೊಲೀಸ್ ಠಾಣಾ ವ್ಯಾಪ್ತಿ ಯಲ್ಲಿ ಘಟನೆ ನಡೆದಿದ್ದು, ಮಥುರಾ ದಿಂದ ಲಖನೌಗೆ ತೆರಳುತ್ತಿದ್ದ ಟೆಂಪೋ ಟ್ರಾವೆಲರ್‌ನಲ್ಲಿ 30 ಮಂದಿ ಪ್ರಯಾಣಿ ಕರಿದ್ದರು. ಆಗ್ರಾ–ಲಖನೌ ಎಕ್ಸ್‌ಪ್ರೆಸ್‌ವೇ ನಲ್ಲಿ ಥಾನಾ ನಾಸಿರ್‌ಪುರ ಬಳಿ ನಿಂತಿದ್ದ ವಾಹನಕ್ಕೆ ಟೆಂಪೋ ಡಿಕ್ಕಿ ಹೊಡೆದಿದೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಪೊಲೀಸರು ಆಗಮಿಸಿದ್ದು, ಗಾಯಾಳುಗಳನ್ನು ರಕ್ಷಣೆ ಮಾಡಿ, ಕೂಲೆ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ತನಿಖೆ ವೇಳೆ ಚಾಲಕ ನಿದ್ರೆಗೆ ಜಾರಿದ್ದು, ಈ ವೇಳೆ ಟೆಂಪೋ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ನಿಂತಿದ್ದ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದೆ ಎಂದು ತಿಳಿದುಬಂದಿದೆ. ಮೃತರನ್ನು ನೀತು (42), ಇವರ ಮಗಳು ಮಗಳು ಲುವಶಿಖಾ (13), ಪುತ್ರರಾದ ನೈತಿಕ್ (15) ಮತ್ತು ಸಜ್ಜನ್ ಹಾಗೂ ಮತ್ತಿಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಡಿ.1, ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ

ಮೈಸೂರು,ನ.9(ಎಂಟಿವೈ)– ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರಿನ ಪುರಭವನದಲ್ಲಿ ಡಿ.1ರಂದು 'ಮಿಸ್ಟರ್ ಕರುನಾಡ ಸೇವಾ ಸೇನೆ ಪ್ರಶಸ್ತಿ 2024' ಮೈಸೂರು ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸಂಸ್ಥೆ ಸಂಸ್ಥೆಯ ಜಂಟಿ ಕಾರ್ಯದರ್ಶಿ ಎಂ.ಮಂಜುನಾಥ್ ತಿಳಿಸಿದ್ದಾರೆ..

ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರುನಾಡ ಸೇವಾ ಸೇನೆ ಮತ್ತು ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಲಾಗಿದ್ದು, ನಾಲ್ಕು ವಿಭಾಗಗಳಲ್ಲಿ ನಡೆಯಲಿದೆ. ಮೈಸೂರು ನಗರ, ಹುಣಸೂರು, ಹೆಚ್.ಡಿ.ಕೋಟೆ, ನಂಜನಗೂಡು, ತಿ.ನರಸೀಪುರ, ಪಿರಿಯಾಪಟ್ಟಣ, ಕೆ.ಆರ್.ನಗರ ತಾಲೂಕುನವರಿಗೆ ಮಾತ್ರ ಪ್ರವೇಶವಿದೆ. 'ಮಿಸ್ಟರ್ ಕರುನಾಡ ಸೇವಾ ಸೇನೆ ಪ್ರಶಸ್ತಿಗೆ' 30 ಸಾವಿರ ನಗದು, ಮೋಸ್ಟ್ ಮಸ್ಕ್ಯೂಲರ್ ಪುರಸ್ಕೃತರಿಗೆ 20 ಸಾವಿರ ರೂ., ಬೆಸ್ಟ್ ಪೋಜರ್ ಪುರಸ್ಕೃತರಿಗೆ 15 ಸಾವಿರ, ಗ್ರೂಪ್‌ನ ವಿಜೇತರಿಗೆ 1ನೇ ಸ್ಥಾನ 5 ಸಾವಿರ, 2ನೇ ಸ್ಥಾನ 4 ಸಾವಿರ, 3ನೇ ಸ್ಥಾನ ರೂ. 3 ಸಾವಿರ, 4ನೇ ಸ್ಥಾನ 2 ಸಾವಿರ, 5ನೇ ಸ್ಥಾನ ರೂ 1 ಸಾವಿರ ರೂ. ನಗದು, ಟ್ರೋಫಿ, ಪ್ರಮಾಣ ಪತ್ರ ನೀಡಲಾಗುತ್ತದೆ ಎಂದರು.

ಸಂಸ್ಥೆಯ ಖಜಾಂಚಿ ಎನ್.ಅವಿನಾಶ್ ಮಾತನಾಡಿ, ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರನ್ನು ನ. 29ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಡ್ರೀಮ್ ವರ್ಲ್ಡ್ ಫಿಟ್ನೆಸ್ ಸೆಂಟರ್‌ನಲ್ಲಿ ಎತ್ತರ ಪರಿಶೀಲನೆ ಮಾಡಲಾಗುತ್ತದೆ. ಸ್ಪರ್ಧೆ ದಿನ ಅಸಭ್ಯ ವರ್ತನೆ ತೋರಿದರೆ 3 ವರ್ಷ ನಿಷೇಧಿಸಲಾಗುವುದು. 10 ಸಾವಿರ ರೂ. ದಂಡ ವಿಧಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಮೊಹಮ್ಮದ್ ಅಸ್ಲಾಂ, ಉಪಾಧ್ಯಕ್ಷರಾದ ನಾಗಭೂಷಣ್, ದಿಲೀಪ್, ನಿರ್ದೇಶಕರಾದ ಯೋಗೇಶ್, ಕರುನಾಡ ಸೇವಾ ಸೇನೆ ಹೇಮಂತ್ ಇದ್ದರು.

ಬ್ಯಾಂಕ್ ನೇಮಕಾತಿ: ಮೌಖಿಕ ಸಂದರ್ಶನಕ್ಕೆ ಉಚಿತ ತರಬೇತಿ

ಮೈಸೂರು, ನ. 9–ಬೆಂಗಳೂರಿನ ಕೋಡಿಹಳ್ಳಿ ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ ನ. 12ರಂದು ಬೆಳಗ್ಗೆ 11 ಗಂಟೆಗೆ ಬ್ಯಾಂಕ್ ನೇಮಕಾತಿಗೆ ಮೌಖಿಕ ಸಂದರ್ಶನಕ್ಕೆ ಉಚಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8296031570, 7892845218 ಸಂಪರ್ಕಿಸಬಹುದು.

ಯಾವುದೇ ಕ್ಷೇತ್ರವಾದರೂ ಸಮಾಜಕ್ಕೆ ಕೊಡುಗೆ ನೀಡಿ

ಕಲೆ ಮತ್ತು ಮನಸ್ಸು ಉತ್ಸವ 2ಕೆ24ರ ಸಮಾರೋಪ ಸಮಾರಂಭದಲ್ಲಿ ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ್ ಸಲಹೆ



ಕರ್ನಾಟಕ ರಾಜ್ಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ನಡೆದ ಕಲೆ ಮತ್ತು ಮನಸ್ಸು ಉತ್ಸವ 2ಕೆ24 ಉತ್ಸವದ ಸಮಾರೋಪದಲ್ಲಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಪರೀಕ್ಷಾಂಗ ಕುಲಸಚಿವ ಡಾ.ಎಚ್.ವಿಶ್ವನಾಥ್, ಅಧ್ಯಯನ ಕೇಂದ್ರಗಳ ಡೀನ್ ಡಾ.ಎಂ.ರಾಮರತನ್ ನಾಯ್ಡು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಶೈಲೇಶ್‌ರಾಜ ಅರಸ್, ಎನ್‌ಎಡಿಬಿಯ ಶ್ರೀನಾಥಶೆಟ್ಟಿ, ಪ್ರವೀಣ್‌ಕುಮಾರ್, ಗೋವಿಂದರಾಜು ಶೆಟ್ಟಿ ಭಾಗವಹಿಸಿದ್ದರು.

ಮೈಸೂರು,ನ.9–ಯಾವುದೇ ಕ್ಷೇತ್ರ ಆಯ್ಕೆ ಮಾಡಿಕೊಂಡರೂ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮುಕ್ತ ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ರಾಷ್ಟ್ರೀಯ ನಕಲು ತಡೆ ಬ್ಯುರೋ ಸಹಯೋಗದಲ್ಲಿ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಲೆ ಮತ್ತು ಮನಸ್ಸು ಉತ್ಸವ 2ಕೆ24 ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪೋಷಕರು ತಮ್ಮ ಮಕ್ಕಳು ಎಂಜಿನಿಯರ್, ಡಾಕ್ಟರ್ ಆಗಬೇಕು ಎಂದು ಒತ್ತಡ ಹೇರುತ್ತಾರೆ. ಆದರೆ ಇದರ ಬದಲು ನಿಮಗೆ ಆಸಕ್ತಿ ಇರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಅಲ್ಲಿ ಸಾಧನೆ ಮಾಡಿ, ಸಮಾಜಕ್ಕೆ ಕೊಡುಗೆ ನೀಡಿ, ಆ ಮೂಲಕ ತಂದೆ–ತಾಯಿ, ನೀವು ಓದಿದ ಶಾಲಾ–ಕಾಲೇಜುಗಳಿಗೆ ಕೀರ್ತಿ ತನ್ನಿ ಎಂದರು.

ಅಧ್ಯಯನ ಕೇಂದ್ರಗಳ ಡೀನ್ ಡಾ.ಎಂ. ರಾಮರತನ್ ನಾಯ್ಡು ಮಾತನಾಡಿ, ಸ್ಪರ್ಧೆಗಳಲ್ಲಿ ಗೆದ್ದರೆ ಮಂದಹಾಸ, ಸೋತು ಗೆದ್ದರೆ ಇತಿಹಾಸ. ಆದ್ದರಿಂದ ಜ್ಞಾನ ಸಂಪಾದನೆ ದೃಷ್ಟಿಯಿಂದ ಗುರಿ ಇಟ್ಟುಕೊಂಡು ಓದಿರಿ. ಪತ್ರಿಕೆಗಳನ್ನು ಓದುವುದರಿಂದ ಸಾಮಾನ್ಯ ಜ್ಞಾನ ವೃದ್ಧಿಯಾಗುತ್ತದೆ ಎಂದರು.

ಪರೀಕ್ಷಾಂಗ ಕುಲಸಚಿವ ಡಾ.ಎಚ್. ವಿಶ್ವನಾಥ್ ಮಾತನಾಡಿ, ಎಲ್ಲರಿಗೂ ಜೀವನೋತ್ಸವ ಮುಖ್ಯ. ಅದಿದ್ದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಕ್ಯಾನ್ಸರ್‌ಪೀಡಿತ ವಿದ್ಯಾರ್ಥಿನಿಯೊಬ್ಬಳ ವ್ಯಾಸಂಗ ಹಾಗೂ ವಿಚಾರವಾದಿ ಪ್ರೊ.ಎಚ್.ನರಸಿಂಹಯ್ಯ ನಿದರ್ಶನಗಳ ಮೂಲಕ ವಿವರಿಸಿದರು.

ರಾಜ್ಯ ಮಾನವ ಹಕ್ಕುಗಳ ಹಾಗೂ ಭ್ರಷ್ಟಾಚಾರ ನಿಗ್ರಹ ವೇದಿಕೆಯ ಉಪಾಧ್ಯಕ್ಷ ಆರ್.ಪಿ.ಪ್ರವೀಣ್‌ಕುಮಾರ್ ಮಾತನಾಡಿ, ನಿಮ್ಮನ್ನು ನೀವು ಅರಿಯುವುದೇ ನಿಜವಾದ ಯಶಸ್ಸು ಎಂದರು.

ಬೆಂಗಳೂರಿನ ಇಂಟರ್‌ನ್ಯಾಷನಲ್ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಮತ್ತು ಎಂಟರ್‌ಪ್ರೀನರ್‌ಶಿಪ್ ನಿರ್ದೇಶಕ ಗೋವಿಂದರಾಜ್ ಶೆಟ್ಟಿ ಮಾತನಾಡಿದರು. ಎನ್‌ಎಡಿಬಿ ರಾಷ್ಟ್ರೀಯ ಉಪಾಧ್ಯಕ್ಷ ಸಿ.ವಿ. ಶ್ರೀನಾಥಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಮಾರೋಪ ಭಾಷಣ ಮಾಡಿದರು. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಜಿ.ಬಿ.ಶೈಲೇಶ್‌ರಾಜ್ ಅರಸ್ ಸ್ವಾಗತಿಸಿದರು. ಪ್ರೌಢಶಾಲೆ, ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಪ್ರಬಂಧ, ಭಾಷಣ, ರಸಪ್ರಶ್ನೆ, ಚರ್ಚಾ ಸ್ಪರ್ಧೆ, ಮೈಮ್ ಅಭಿನಯ, ಪದ ಉಚ್ಚಾರಣೆ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. 13 ಸ್ಪರ್ಧೆಗಳಿಗೆ 26 ಮಂದಿ ತೀರ್ಪುಗಾರರಿದ್ದರು. ವಿವಿಧ ಶಾಲಾ–ಕಾಲೇಜುಗಳ 400 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದೇಶ – ವಿದೇಶ

ಪಾಕಿಸ್ತಾನದ ರೈಲು ನಿಲ್ದಾಣದಲ್ಲಿ ಸ್ಫೋಟ, 21 ಮಂದಿ ಸಾವು



ಪೇಶಾವರ: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಜನನಿಬಿಡ ಕ್ವೆಟ್ಟಾ ರೈಲು ನಿಲ್ದಾಣದಲ್ಲಿ ಶನಿವಾರ ಸಂಭವಿಸಿದ ಪ್ರಬಲ ಬಾಂಬ್ ಸ್ಫೋಟದಲ್ಲಿ ಕನಿಷ್ಠ 21 ಜನರು ಸಾವನ್ನಪ್ಪಿದ್ದು, 46 ಮಂದಿ ಗಾಯಗೊಂಡಿದ್ದಾರೆ. ಪ್ರಾಥಮಿಕ ಮಾಹಿತಿಗಳು ಆತ್ಮಹತ್ಯಾ ಬಾಂಬ್ ದಾಳಿ ಸೂಚಿಸುತ್ತಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಕ್ವೆಟ್ಟಾ ಹಿರಿಯ ಪೊಲೀಸ್ ಅಧೀಕ್ಷಕ ಮುಹಮ್ಮದ್ ಬಲೂಚ್ ತಿಳಿಸಿದ್ದಾರೆ. ಈ ಮಧ್ಯೆ ಬಲೂಚ್ ಲಿಬರೇಶನ್ ಆರ್ಮಿ ದಾಳಿಯ ಹೊಣೆ ಹೊತ್ತುಕೊಂಡಿದೆ. ಪ್ರಾಥಮಿಕ ವರದಿ ಪ್ರಕಾರ ರೈಲು ನಿಲ್ದಾಣದ ಬುಕ್ಕಿಂಗ್ ಕಚೇರಿಯಲ್ಲಿ ಸ್ಫೋಟ ಸಂಭವಿಸಿದೆ. ತಕ್ಷಣವೇ ರಕ್ಷಣಾ ಮತ್ತು ಪೊಲೀಸ್ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿದ್ದು, ಮೃತಪಟ್ಟವರು ಮತ್ತು ಗಾಯಾಳುಗಳನ್ನು ಕ್ವೆಟ್ಟಾದ ನಾಗರಿಕ ಆಸ್ಪತ್ರೆಗೆ ಸಾಗಿಸಿದ್ದಾರೆ.

ಆಸ್ಪತ್ರೆಯಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿತ್ತು. ಗಾಯಾಳುಗಳನ್ನು ನಿಭಾಯಿಸಲು ಹೆಚ್ಚುವರಿ ವೈದ್ಯಕೀಯ ಸಿಬ್ಬಂದಿಯನ್ನು ಕರೆಸಲಾಯಿತು. ಇಲ್ಲಿಯವರೆಗೆ 46 ಗಾಯಾಳುಗಳನ್ನು ಸ್ಥಳಾಂತರಿಸಲಾಗಿದೆ. ಜಾಫರ್ ಎಕ್ಸ್‌ಪ್ರೆಸ್ ಬೆಳಗ್ಗೆ 9 ಗಂಟೆಗೆ ಪೇಶಾವರಕ್ಕೆ ಹೊರಡಬೇಕಿತ್ತು.

ರಾಸಾಯನಿಕ ಸೋರಿಕೆಯಿಂದ ಮೂವರು ಸಜೀವ ದಹನ



ನವಸಾರಿ: ಗುಜರಾತ್‌ನ ನವಸಾರಿ ಜಿಲ್ಲೆಯ ಗೋಡೌನ್‌ನಲ್ಲಿ ಶನಿವಾರ ಬೆಳಗ್ಗೆ ರಾಸಾಯನಿಕ ಸೋರಿಕೆಯಿಂದ ಉಂಟಾದ ಅಗ್ನಿ ಅವಘಡದಲ್ಲಿ ಮೂವರು ಕಾರ್ಮಿಕರು ಸಜೀವ ದಹನವಾಗಿದ್ದಾರೆ ಮತ್ತು ಮೂವರು ಗಾಯಗೊಂಡಿದ್ದಾರೆ. ಇಂದು ಬೆಳಗ್ಗೆ 9 ಗಂಟೆ ಸುಮಾರಿಗೆ ಬಿಲ್ಲಿಮೋರಿಯಾ ತಾಲೂಕಿನ ದೇವ್‌ಸರ್ ಗ್ರಾಮದ ಗೋಡೌನ್‌ನಲ್ಲಿ ಕಾರ್ಮಿಕರು ಟ್ರಕ್‌ನಿಂದ ರಾಸಾಯನಿಕ ಬ್ಯಾರೆಲ್‌ಗಳನ್ನು ಇಳಿಸುತ್ತಿದ್ದಾಗ ಬೆಂಕಿ ಹೊತ್ತಿಕೊಂಡಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಬಿವಿ ಗೋಹಿಲ್ ಹೇಳಿದ್ದಾರೆ. ಸಮೀಪದ ತಾಲೂಕುಗಳಿಂದ ಐದು ಅಗ್ನಿಶಾಮಕ ವಾಹನಗಳು ಆಗಮಿಸಿದ್ದು, ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ ಎಂದು ಗೋಹಿಲ್ ಹೇಳಿದ್ದಾರೆ. ಟ್ರಕ್‌ನಲ್ಲಿದ್ದ ಬ್ಯಾರೆಲ್‌ವೊಂದರಿಂದ ರಾಸಾಯನಿಕ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದೆ ಎಂದು ಮಮ್ಲತಾರ್ ಜಗದೀಶ್ ಚೌಧರಿ ತಿಳಿಸಿದ್ದಾರೆ. ಟ್ರಕ್‌ಗೆ ಮೊದಲು ಬೆಂಕಿ ಹೊತ್ತಿಕೊಂಡಿತು ಮತ್ತು ನಂತರ ಬೆಂಕಿಯು ತೀವ್ರತೆಯೂ ಗೋಡೌನ್‌ಗೆ ವ್ಯಾಪಿಸಿ ಮೂವರು ಸಾವನ್ನಪ್ಪಿದ್ದಾರೆ. ಮೂವರು ಕಾರ್ಮಿಕರಿಗೆ ತೀವ್ರ ಸುಟ್ಟ ಗಾಯಗಳಾಗಿದ್ದು, ಇನ್ನೂ ಒಬ್ಬ ಕಾರ್ಮಿಕ ಕಾಣೆಯಾಗಿದ್ದಾರೆ ಎಂದು ಹೇಳಿದ್ದಾರೆ.

ಸ್ವಿಟ್ಜರ್ಲ್ಯಾಂಡ್‌ನಲ್ಲಿ ಬುರ್ಖಾ ನಿಷೇಧ



ಸ್ವಿಟ್ಜರ್ಲ್ಯಾಂಡ್: ಸಾರ್ವಜನಿಕ ಸ್ಥಳಗಳಲ್ಲಿ ಬುರ್ಖಾ ಧರಿಸಿ ಓಡಾಡುವಂತಿಲ್ಲ ಎಂಬ ಕಠಿಣ ಕಾನೂನನ್ನು ಸ್ವಿಟ್ಜರ್ಲ್ಯಾಂಡ್ ಸರ್ಕಾರ ಜಾರಿಗೊಳಿಸಿದೆ. ಸ್ವಿಟ್ಜರ್ಲ್ಯಾಂಡ್‌ನ ಬಲಪಂಥೀಯ ಆಡಳಿತದ ಪೀಪಲ್ಸ್ ಪಾರ್ಟಿ ಬುರ್ಖಾ ಬ್ಯಾನ್ ಮಾಡಲು ಸ್ವಿಸ್ ಸಂಸತ್ ಮೇಲ್ಮನೆಯಲ್ಲಿ ಅಂಗೀಕಾರ ಪಡೆದಿತ್ತು. ಅಲ್ಲದೆ 2021ರ ಜನಾಭಿಪ್ರಾಯ ಸಂಗ್ರಹಣೆಯಲ್ಲಿಯೂ ಬಹು ಸಂಖ್ಯೆಯ ಜನರು ಬುರ್ಖಾ ನಿಷೇಧದ ಪರವಾಗಿ ಓಟ್ ಹಾಕಿದ್ದರು. ಸ್ವಿಟ್ಜರ್ಲ್ಯಾಂಡ್ ಸರ್ಕಾರದ ಈ ನಿರ್ಧಾರಕ್ಕೆ ಭಾರಿ ಆಕ್ರೋಶವೂ ವ್ಯಕ್ತವಾಗಿತ್ತು. ಈ ಎಲ್ಲದರ ನಡುವೆಯೂ ಇದೀಗ ಇಲ್ಲಿನ ಸರ್ಕಾರ ಅಧಿಕೃತವಾಗಿ ಬುರ್ಖಾ ನಿಷೇಧದ ಕಾನೂನನ್ನು ಜಾರಿಗೊಳಿಸಿದೆ.

ಜನವರಿ 1, 2025ರಿಂದ ಈ ಕಠಿಣ ನಿಯಮ ಜಾರಿಯಾಗಲಿದ್ದು, ನಿಯಮವನ್ನು ಉಲ್ಲಂಘಿಸಿದವರಿಗೆ 1,000 ಸ್ವಿಸ್ ಫ್ರಾಂಕ್ ಅಂದರೆ ಅಂದಾಜು 96,280 ರೂ. ದಂಡವನ್ನು ವಿಧಿಸಲಾಗುವುದು ಎಂಬ ಕಾನೂನನ್ನು ಸ್ವಿಟ್ಜರ್ಲ್ಯಾಂಡ್ ಸರ್ಕಾರ ಜಾರಿಗೊಳಿಸಿದೆ ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ತಿಳಿಸಿದೆ. ಆದರೆ, ವಿಮಾನ, ರಾಜತಾಂತ್ರಿಕ ಸ್ಥಳಗಳು, ಪವಿತ್ರ ಸ್ಥಳಗಳು, ಪೂಜಾ ಆವರಣಗಳಲ್ಲಿ ಬುರ್ಖಾಗಳನ್ನು ಧರಿಸಬಹುದು. ವೈದ್ಯಕೀಯ ಕಾರಣಗಳು ಹಾಗೂ ವಿಪರೀತ ಚಳಿಯ ಸಂದರ್ಭದಲ್ಲಿ ಮುಖ ಮುಚ್ಚುವಂತೆ ಹೊದಿಕೆಗಳನ್ನು ಧರಿಸಬಹುದು.

ಖಲಿಸ್ತಾನಿ ಪ್ರತ್ಯೇಕತಾವಾದಿಗಳು ಕೆನಡಾದಲ್ಲಿ ಸಿಖ್ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ



ಕೆನಡಾ: ಖಲಿಸ್ತಾನಿ ಪ್ರತ್ಯೇಕತಾವಾದಿಗಳು ಕೆನಡಾದಲ್ಲಿ ಸಿಖ್ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ. ದೀಪಾವಳಿ ಮತ್ತು ಬಂಡಿ ಛೋರ್ ದಿವಸ್ ಆಚರಿಸಲು ಒಟ್ಟಾವಾದ ಪಾರ್ಲಿಮೆಂಟ್ ಹಿಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಟ್ರುಡೊ, ಕೆನಡಾದಲ್ಲಿ ಖಲಿಸ್ತಾನ್‌ಗೆ ಅನೇಕ ಬೆಂಬಲಿಗರಿದ್ದಾರೆ. ಆದರೆ, ಅವರು ಒಟ್ಟಾರೆಯಾಗಿ ಸಿಖ್ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ ಎಂದು ಹೇಳಿದ್ದಾರೆ. ಬ್ರಾಂಪ್ಟನ್‌ನಲ್ಲಿರುವ ಹಿಂದೂ ಸಭಾ ಮಂದಿರವು ಖಲಿಸ್ತಾನ್–ಪರ ಅಂಶಗಳ ಹಿಂಸಾತ್ಮಕ ದಾಳಿಗೆ ಸಾಕ್ಷಿಯಾದ ಒಂದು ದಿನದ ನಂತರ ಅವರ ಹೇಳಿಕೆ ಬಂದಿದೆ. ಇದು ಉಗ್ರವಾದ ಇಂಡೋ–ಕೆನಡಿಯನ್ ಸಮುದಾಯವು ಪ್ರತ್ಯೇಕತಾವಾದಿಗಳಿಗೆ ಸವಾಲು ಹಾಕಿದ್ದರಿಂದ ಉದ್ವಿಗ್ನತೆಗೆ ಕಾರಣವಾಯಿತು.

ಹಿಂಸಾಚಾರ, ಅಸಹಿಷ್ಣುತೆ, ಬೆದರಿಕೆ ಅಥವಾ ವಿಭಜನೆಗೆ ಅವಕಾಶವಿಲ್ಲ. ಜನರು ತಮ್ಮ ಸಂಸ್ಕೃತಿಗಳು ಮತ್ತು ಅವರ ಸಮುದಾಯಗಳನ್ನು ಹಿಡಿದಿಟ್ಟುಕೊಳ್ಳಲು ನಾವು ಪ್ರೋತ್ಸಾಹಿಸುತ್ತೇವೆ ಎಂದು ಟ್ರುಡೊ ಹೇಳಿದ್ದಾರೆ.

ಜಾಮೀನು ಅರ್ಜಿ ವಿಳಂಬ ನಾಗರಿಕರ ಮೂಲಭೂತ ಹಕ್ಕಿನ ಮೇಲೆ ಉಲ್ಲಂಘನೆ

ನವದೆಹಲಿ: ನ್ಯಾಯಾಲಯಗಳು ಜಾಮೀನು ಅರ್ಜಿಗಳನ್ನು ವರ್ಷಗಟ್ಟಲೆ ಬಾಕಿ ಇರಿಸುವ ಅಭ್ಯಾಸಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಇಂತಹ ವಿಷಯಗಳನ್ನು ನಿರ್ಧರಿಸುವಲ್ಲಿ ಒಂದು ದಿನ ವಿಳಂಬವಾದರೂ ಅದು ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಹೇಳಿದೆ.

ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರನ್ನೊಳಗೊಂಡ ನ್ಯಾಯಪೀಠ ಶುಕ್ರವಾರ ನೀಡಿದ ಆದೇಶದಲ್ಲಿ ವೈಯಕ್ತಿಕ ಸ್ವಾತಂತ್ರ್ಯದ ಮಹತ್ವವನ್ನು ಪದೇ ಪದೇ ಒತ್ತಿ ಹೇಳಿದೆ. ಜಾಮೀನು ಅರ್ಜಿಯನ್ನು ವರ್ಷಗಟ್ಟಲೆ ಬಾಕಿ ಉಳಿಸುವ ಅಭ್ಯಾಸ ಒಳ್ಳೆಯದಲ್ಲ ಎಂದು ಹೇಳಿದೆ. ಕಳೆದ ವರ್ಷ ಆಗಸ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ನಲ್ಲಿ ತನ್ನ ಜಾಮೀನು ಅರ್ಜಿ ಬಾಕಿ ಉಳಿದಿದ್ದು, ಈ ವಿಷಯದಲ್ಲಿ ಯಾವುದೇ ಪ್ರಗತಿಯಾಗಿಲ್ಲ ಎಂದು ವ್ಯಕ್ತಿಯೊಬ್ಬರು ಸಲ್ಲಿಸಿದ ಅರ್ಜಿ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಈ ಆಕ್ಷೇಪ ವ್ಯಕ್ತಪಡಿಸಿದೆ. ಯಾವುದೇ ಪರಿಣಾಮಕಾರಿ ವಿಚಾರಣೆಯಿಲ್ಲದೆ ಹೈಕೋರ್ಟ್‌ನಲ್ಲಿ ವಿವಾದವನ್ನು ಪದೇ ಪದೇ ಮುಂದೂಡಲಾಗಿದೆ ಎಂದು ಅರ್ಜಿದಾರರು ಹೇಳಿದರು. ಅರ್ಜಿಯನ್ನು ಹೈಕೋರ್ಟ್ ಮುಂದೆ ಇಟ್ಟು, ಸಾಧ್ಯವಾದಷ್ಟು ತ್ವರಿತವಾಗಿ ಮತ್ತು ನ.11, 2024ರಿಂದ 2 ವಾರಗಳ ಅವಧಿಯಲ್ಲಿ ಅದನ್ನು ನಿರ್ಧರಿಸಲು ನಾವು ವಿನಂತಿಸುತ್ತೇವೆ ಎಂದು ಹೇಳಿದೆ.

ಪೊನ್ನಂಪೇಟೆಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ

ರೈತರು, ದೇವಾಲಯ, ಮಠಗಳ ವಕ್ಫ್ ಆಸ್ತಿಗೆ ಸೇರಿಸುವ ಹುನ್ನಾರದ ವಿರುದ್ಧ ಭಾರಿ ಆಕ್ರೋಶ

ಮಡಿಕೇರಿ,ನ.9– ರಾಜ್ಯದ ವಿವಿಧ ಭಾಗಗಳಲ್ಲಿ ರೈತರು, ದೇವಾಲಯ ಮತ್ತು ಮಠಗಳಿಗೆ ಸೇರಿದ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ನಮೂದಿಸಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ಮುಂದಾಗಿದೆ ಎಂದು ಆರೋಪಿಸಿ ವಿರಾಜಪೇಟೆ ಮಂಡಲ ಬಿಜೆಪಿ ವತಿಯಿಂದ ಪೊನ್ನಂಪೇಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ವಿರಾಜಪೇಟೆ ಮಂಡಲ ಬಿಜೆಪಿ ಅಧ್ಯಕ್ಷ ಸುವಿನ್ ಗಣಪತಿ ನೇತೃತ್ವದಲ್ಲಿ ಪೊನ್ನಂಪೇಟೆಯ ಬಸ್ ನಿಲ್ದಾಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹ್ಮದ್ ಅವರುಗಳ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ರಾಜ್ಯದ ಕಾಂಗ್ರೆಸ್ ಸರಕಾರ ಹಿಂದೂ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ವಿರಾಜಪೇಟೆ ಮಂಡಲ ಬಿಜೆಪಿ ಅಧ್ಯಕ್ಷ ಸುವಿನ್ ಗಣಪತಿ ನೇತೃತ್ವದಲ್ಲಿ ಕಾರ್ಯಕರ್ತರು ಪೊನ್ನಂಪೇಟೆಯ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಕೆ.ಜಿ.ಬೋಪಯ್ಯ ಇತರರು ಉಪಸ್ಥಿತರಿದ್ದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿಯನ್ನು ಹೇಗೆ ವಕ್ಫ್ ಆಸ್ತಿ ಎಂದು ಹೇಳಲಾಗುತ್ತದೆ ಎಂದು ಪ್ರಶ್ನಿಸಬೇಕಾಗಿದೆ. ಬಿಜಾಪುರದಲ್ಲೂ ಈ ಕುರಿತು ತೀವ್ರ ಹೋರಾಟ ನಡೆಯುತ್ತಿದೆ. ಟಿಪ್ಪು ಸುಲ್ತಾನ್ ಕೊಡಗಿನ ಮೇಲೆ ದಂಡೆತ್ತಿ ಬಂದಾಗಲೇ ಕೊಡಗಿನ ವೀರರು ತಮ್ಮ ಜಾಗವನ್ನು ಬಿಟ್ಟು ಕೊಡಲಿಲ್ಲ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೊಡಗಿನಲ್ಲೂ ವಕ್ಫ್ ಆಸ್ತಿ ಎಂಬುದು ಸೃಷ್ಟಿಯಾಗುತ್ತಿದೆ. ಸ್ವಯಾರ್ಜಿತ ಆಸ್ತಿಯನ್ನು ಉಳಿಸಿಕೊಳ್ಳಲು ಹೋರಾಟ ಮಾಡುವಂತಹ ಪರಿಸ್ಥಿತಿ ಎದುರಾಗಿದೆ. ಈ ಬಗ್ಗೆ ಡಿಸೆಂಬರ್‌ನಲ್ಲಿ ವಕ್ಫ್ ಮಸೂದೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿ ಬಳಿಗೆ ನಿಯೋಗ ತೆರಳಿ ಮನವರಿಕೆ ಮಾಡಲಾಗುವುದು ಎಂದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರು ಮಾತನಾಡಿ, ರಾಜ್ಯದಲ್ಲಿ ಕಳೆದ ಒಂದೂವರೆ ವರ್ಷದಿಂದ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ದಿನಬಳಕೆ ವಸ್ತುಗಳು ಹಾಗೂ ಇಂಧನ ಬೆಲೆ ಏರಿಕೆಯಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಗರಣಗಳು ಹೆಚ್ಚಾಗಿವೆ. ಕಾಂಗ್ರೆಸ್ ತನ್ನ ದುರಾಡಳಿತವನ್ನು ಬಳಸಿಕೊಂಡು ರಾಜ್ಯದ ಜನರ ಹಣವನ್ನು ಕೊಳ್ಳೆ ಹೊಡೆಯುತ್ತಿದೆ. ಕಾಂಗ್ರೆಸ್ ಸರ್ಕಾರದ ದುರಾಡಳಿತವನ್ನು ತೊಲಗಿಸುವಲ್ಲಿ ಜನತೆ ಎಚ್ಚೆತ್ತುಕೊಳ್ಳಬೇಕು ಎಂದರು.

ಮಾಜಿ ಶಾಸಕ ಕೆ.ಜಿ ಬೋಪಯ್ಯ ಮಾತನಾಡಿ, ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ರೈತರು ಬೀದಿಗೆ ಬಂದು ಹೋರಾಟ ಮಾಡುವಂತಹ ಪರಿಸ್ಥಿತಿ ಎದುರಾಗಿದೆ. ರಾಜ್ಯ ಸರಕಾರ ಅಲ್ಪಸಂಖ್ಯಾತರ ಓಲೈಕೆಯೊಂದಿಗೆ ಓಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಉಚಿತ ಭಾಗ್ಯಗಳಿಗೆ ಹಣವಿಲ್ಲದೇ, ಜನಸಾಮಾನ್ಯರ ಮೇಲೆ ಒತ್ತಡ ಹೇರುತ್ತಿದೆ. ಬಡ ಜನರು ಕೃಷಿ ಮಾಡುತ್ತಿದ್ದ ಭೂಮಿಯನ್ನು ವಕ್ಫ್ ಭೂಮಿ ಎಂದು ಘೋಷಿಸಿ ಜನರಿಂದ ಕಸಿದುಕೊಳ್ಳುತ್ತಿದೆ. ಕೊಡಗಿನ ಯಾವುದೇ ಜಾಗಕ್ಕೆ ಕೈ ಹಾಕುವ ಸಾಹಸವನ್ನು ಮಾಡಿದ್ದಲ್ಲಿ ತೀವ್ರ ಪ್ರತಿಭಟನೆ ಎದುರಿಸಬೇಕಾದಿತು ಎಂದು ಎಚ್ಚರಿಸಿದರು. ಬಳಿಕ ಪೊನ್ನಂಪೇಟೆ ತಾಲೂಕು ತಹಶೀಲ್ದಾರ್ ಮೋಹನ್ ಕುಮಾರ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಮಾಚಿಮಾಡ ರವೀಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನೆಲ್ಲಿರ ಚಲನ್, ಜಿಲ್ಲಾ ಉಪಾಧ್ಯಕ್ಷ ಕಿಲನ್ ಗಣಪತಿ, ಅರುಣ್ ಭೀಮಯ್ಯ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮಂಜು ಗಣಪತಿ, ಅಜಿತ್ ಕರುಂಬಯ್ಯ, ಪಕ್ಷದ ಪ್ರಮುಖರಾದ ವಾಟೆರೀರ ಬೋಪಣ್ಣ, ಮನು ಮುತ್ತಪ್ಪ ಸೇರಿದಂತೆ ಪಕ್ಷ ಕಾರ್ಯಕರ್ತರು ಪಾಲ್ಗೊಂಡಿದ್ದರು.

ವಕ್ಫ್ ಬೋರ್ಡ್ ಬರ್ಕಾಸ್ತಿಗೆ ಪಣ: ಪ್ರತಾಪ್ ಸಿಂಹ

ಗೋಣಿಕೊಪ್ಪ: ವಕ್ಫ್ ಬೋರ್ಡ್ ಬರ್ಕಾಸ್ತು ಮಾಡಲು ಪಣ ತೊಡಲಾಗಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದರು.

ಪೊನ್ನಂಪೇಟೆ ಬಸವೇಶ್ವರ ದೇವಸ್ಥಾನ ಎದುರು ವಕ್ಫ್ ಬೋರ್ಡ್ ವಿರುದ್ಧ ವಿರಾಜಪೇಟೆ ಬಿಜೆಪಿ ಮಂಡಲ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.



ಪೊನ್ನಂಪೇಟೆಯಲ್ಲಿ ಬಿಜೆಪಿ ಪ್ರತಿಭಟನೆ.

ಕೇಂದ್ರದಲ್ಲಿ ಜಾಯಿಂಟ್ ಪಾರ್ಲಿಮೆಂಟ್ ಎದುರು ವಕ್ಫ್ ಬೋರ್ಡ್ ನಿಯಮ ರದ್ದು ಮಾಡುವ ಬಗ್ಗೆ ಚರ್ಚೆಯಾಗುತ್ತಿದ್ದು, ನಂತರ ಪಾರ್ಲಿಮೆಂಟ್‌ನಲ್ಲಿ ನಿರ್ಧಾರ ತೆಗೆದುಕೊಂಡು ವಕ್ಫ್ ಬೋರ್ಡ್ ಅನ್ನು ಸಂಪೂರ್ಣವಾಗಿ ರದ್ದು ಮಾಡುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಠ, ಸ್ವಾಮೀಜಿಗಳು ಇಂದು ವಕ್ಫ್ ವಿರುದ್ಧ ಹೋರಾಟಕ್ಕೆ ಇಳಿಯುತ್ತಿಲ್ಲ. ಹಿಂದುಗಳು ಜೀವಂತವಾಗಿದ್ದರೆ ಮಾತ್ರ ಮಠ ಇರುತ್ತದೆ ಎಂಬ ಕಲ್ಪನೆ ಕೂಡ ಸ್ವಾಮೀಜಿಗಳಲ್ಲಿ ಕಾಣುತ್ತಿಲ್ಲ. ಹಸಿರು ಶಾಲು ತೊಟ್ಟು ಹೋರಾಟ ಮಾಡುವ ರೈತಪರ ಸಂಘಗಳು ಕೂಡ ರೈತರ ಕೃಷಿ ಭೂಮಿ ವಕ್ಫ್ ಪಾಲಾಗುತ್ತಿದ್ದರೂ, ಪ್ರತಿಭಟನೆಗೆ ಮುಂದಾಗಿಲ್ಲ. ಇದರ ಹಿಂದಿನ ಮರ್ಮ ಏನು ಎಂಬ ಅರಿವು ಮುಖ್ಯ ಎಂದರು.

ಹಿಂದೂಗಳು ಒಂದಾಗಿ ಶಿವ, ಕೃಷ್ಣ, ರಾಮನ ಭೂಮಿಯನ್ನು ಉಳಿಸಿಕೊಳ್ಳಲು ಬೆಂಬಲ ನೀಡಬೇಕಿದೆ. ಭೂಮಿ ವಕ್ಫ್ ಬೋರ್ಡ್ ಪಾಲಾಗದಂತೆ ಹೋರಾಟ ನಡೆಸಬೇಕಿದೆ. ವಕ್ಫ್ ಬೋರ್ಡ್‌ಗೆ ಸೇರಿದ ಆಸ್ತಿಯನ್ನು ಮತ್ತೆ ಬದಲಿಸುವ ಕಾನೂನು ಇಲ್ಲದಂತೆ ಹಿಂದೆಯೇ ನಿಯಮ ರೂಪಿಸಲಾಗಿದೆ. ಇದೇ ನಿಯಮ ಹಿಂದೂಗಳು, ಕ್ರಿಶ್ಚಿಯನ್ನರಿಗೆ ಯಾಕೆ ರೂಪಿಸಿಲ್ಲ ಎಂದು ನಾವು ಅರ್ಥೈಸಿಕೊಳ್ಳಬೇಕು ಎಂದರು.

ಸಲಹೆಗಾರರಿಂದಲೇ ಮುಖ್ಯಮಂತ್ರಿಗೆ ದುಸ್ಥಿತಿ : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾ ಹಗರಣದಲ್ಲಿ ದುಸ್ಥಿತಿಗೆ ಬರಲು ಕಾನೂನು ಸಲಹೆಗಾರ ಪೊನ್ನಣ್ಣ ಕಾರಣ ಎಂದರು. ಅವರಿಗೆ ಮುಂಚೆಯೇ ಈ ಬಗ್ಗೆ ಸಲಹೆ ನೀಡಬಹುದಿತ್ತು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದರು. ಅಕ್ರಮ ಸೈಟ್ ವಿಚಾರದಿಂದ ಮುಖ್ಯಮಂತ್ರಿ ಒಳಗಡೆ ಹೋಗುತ್ತಾರೆ ಎಂದು ಎಚ್ಚರಿಸುವ ಕಾರ್ಯ ಮಾಡಬೇಕಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಯಾವ ಅಭಿವೃದ್ಧಿ ಆಗುತ್ತಿಲ್ಲ. ಮಡಿಕೇರಿ ಭಾಗದ ಶಾಸಕ ಕೂಡ ಜಲಜೀವನ್ ಮಿಷನ್ ಕಾರ್ಯಕ್ರಮಗಳ ಬಗ್ಗೆ ಹೇಳಿಕೆ ಕೊಡಿಸುವ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ ಎಂದು ಕಿಡಿಕಾರಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇರವಾಗಿ ಅಲ್ಪಸಂಖ್ಯಾತರಿಗೆ ಮೀಸಲಾಗಿದ್ದಾರೆ ಎಂದರು.

ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ ಮಾತನಾಡಿ, ಅಲ್ಪಸಂಖ್ಯಾತರನ್ನು ಓಲೈಸುವ ಕಾರ್ಯ ನಿಲ್ಲಬೇಕಿದೆ. ಅತಿಯಾದ ಗೌರವ ನೀಡುವುದರಿಂದ ಹಿಂದುತ್ವಕ್ಕೆ ಪೆಟ್ಟಾಗಲಿದೆ ಎಂಬ ಜ್ಞಾನ ಮುಖ್ಯ ಎಂದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಕಾಂಗ್ರೆಸ್ ಸರ್ಕಾರದ ಇಧನೆ ದರ ಹೆಚ್ಚಳ, ಹಾಲಿನ ದರ, ಮುಡಾ ಹಗರಣದ ಬಗ್ಗೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ವಕ್ಫ್ ಬೋರ್ಡ್ ಹೆಸರಿನಲ್ಲಿರುವ ಜಾಗವನ್ನು ಬಿಡುಗಡೆಗೊಳಿಸಬೇಕು ಎಂದು ಪೊನ್ನಂಪೇಟೆ ತಹಸೀಲ್ದಾರ್ ಮೋಹನ್‌ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಡಿ.19ರಿಂದ ಐನ್‌ಮನೆ ಕೊಡವ ಕುಟುಂಬಗಳ ಹಾಕಿ, ಹಗ್ಗ ಜಗ್ಗಾಟ ಪಂದ್ಯಾವಳಿ

ಮಡಿಕೇರಿ,ನ.9– ಕಂಡಂಗಲ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾ ಸಮಿತಿ ವತಿಯಿಂದ ಡಿ.19ರಿಂದ 25ರವರೆಗೆ ಶಾಲಾ ಮೈದಾನದಲ್ಲಿ ಮೂರು ನಾಡಿಗೆ ಸೀಮಿತವಾಗಿ ಐನ್‌ಮನೆ ಇರುವ ಕೊಡವ ಕುಟುಂಬಗಳ ನಡುವೆ ಹಾಕಿ ಮತ್ತು ಹಗ್ಗ ಜಗ್ಗಾಟ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಕಾರ್ಯದರ್ಶಿ ಮುಲ್ಲೇಂಗಡ ಸುರೇಶ್ ತಿಮ್ಮಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಬೊಟ್ಟತ್‌ನಾಡ್, ಕುತ್ತ್‌ನಾಡ್ ಮತ್ತು ಬೇರಳಿನಾಡ್‌ಗೆ ಸಂಬಂಧಿಸಿದ ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯ್ತಿ ಹಾಗೂ ಬಿಟ್ಟಂಗಾಲ, ಹಾತೂರು ಮತ್ತು ಪೊನ್ನಂಪೇಟೆ ಗ್ರಾಮ ಪಂಚಾಯಿತಿಯ ಭಾಗಶಃ ಭಾಗಗಳಲ್ಲಿನ ಕೊಡವ ಐನ್ ಮನೆಗಳನ್ನು ಹೊಂದಿದ ಕೊಡವ ಕುಟುಂಬಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಬಹುದು ಎಂದು ಮಾಹಿತಿ ನೀಡಿದರು.

ಕಳೆದ ಸಾಲಿನ ಹಾಕಿ ಪಂದ್ಯಾವಳಿಯಲ್ಲಿ 21 ತಂಡಗಳು ಪಾಲ್ಗೊಂಡಿದ್ದು, ಈ ಬಾರಿ 30 ತಂಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಪ್ರತಿ ತಂಡದಲ್ಲಿ ಕೊಡವೇತರ ಯಾವುದೇ ಸಮುದಾಯಕ್ಕೆ ಸೇರಿದ ಐವರು ಅತಿಥಿ ಆಟಗಾರರನ್ನು ಆಡಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಕಳೆದ ಸಾಲಿನ ಪಂದ್ಯಾವಳಿಯಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅತಿಥಿ ಆಟಗಾರರು ಭಾಗವಹಿಸಿದ್ದರು. ಈ ಬಾರಿಯೂ ಉತ್ತಮ ಆಟಗಾರರು ಪಾಲ್ಗೊಳ್ಳುವ ನಿರೀಕ್ಷೆಗಳಿವೆ ಎಂದರು.



ಸುದ್ದಿಗೋಷ್ಠಿಯಲ್ಲಿ ಸಮಿತಿಯ ಕಾರ್ಯದರ್ಶಿ ಮುಲ್ಲೇಂಗಡ ಸುರೇಶ್ ತಿಮ್ಮಯ್ಯ ಮಾತನಾಡಿದರು.

ಹಾಕಿ ಪಂದ್ಯಾವಳಿಯಲ್ಲಿ ವಿಶೇಷ ವಾಗಿ ಕಂಡಂಗಾಲ ಗ್ರಾಮದ ಮಂದಮಾಡ ಕೊಡವ ಮುಸ್ಲಿಂ ಸಮುದಾಯದ ತಂಡವು ಪಾಲ್ಗೊಳ್ಳುವುದು ವಿಶೇಷ ಎಂದು ಹೇಳಿದರು.

ಹಗ್ಗ ಜಗ್ಗಾಟ ಪಂದ್ಯಾವಳಿ: ಕ್ರೀಡಾ ಸಮಿತಿ ಅಧ್ಯಕ್ಷ ಬಲ್ಲಡಿಚಂಡ ರವಿ ಸೋಮಯ್ಯ ಮಾತನಾಡಿ, ಮೂರು ನಾಡಿನ ಐನ್‌ಮನೆಗಳಿರುವ ಕೊಡವ ಕುಟುಂಬಗಳ ಮಹಿಳೆಯರಿಗೆ 'ಹಗ್ಗ ಜಗ್ಗಾಟ' ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಪಂದ್ಯಾವಳಿಯಲ್ಲಿ ಮೂರ್‌ನಾಡಿಗೆ ಸೇರಿದ, ವಿವಾಹವಾಗಿ ಹೋದ ಮಹಿಳೆಯರು ತಮ್ಮ ತವರು ಮನೆಯ ತಂಡದಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಹಾಕಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ತಂಡಗಳಿಗೆ 2 ಸಾವಿರ ಪ್ರವೇಶ ಶುಲ್ಕ ಮತ್ತು ಹಗ್ಗಜಗ್ಗಾಟದಲ್ಲಿ ಪಾಲ್ಗೊಳ್ಳುವ ತಂಡಗಳಿಗೆ 1 ಸಾವಿರ ಪ್ರವೇಶ ಶುಲ್ಕ ನಿಗದಿಪಡಿಸಲಾಗಿದ್ದು, ಡಿ.10ರ ಒಳಗಾಗಿ ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಬಹುಮಾನ: ಹಾಕಿ ಪಂದ್ಯಾವಳಿ ವಿಜೇತ ತಂಡಕ್ಕೆ 50 ಸಾವಿರ ನಗದು ಮತ್ತು ಟ್ರೋಫಿ, ದ್ವಿತೀಯ 30 ಸಾವಿರ ನಗದು ಮತ್ತು ಟ್ರೋಫಿ, ತೃತೀಯ 20 ಸಾವಿರ ನಗದು ಮತ್ತು ಟ್ರೋಫಿ ಹಾಗೂ 4ನೇ ಸ್ಥಾನ ಪಡೆಯುವ ತಂಡಕ್ಕೆ 10 ಸಾವಿರ ನಗದು ಬಹುಮಾನವನ್ನು ನೀಡಲಾಗುತ್ತದೆ. ಹಗ್ಗಜಗ್ಗಾಟ ಪಂದ್ಯಾವಳಿ ವಿಜೇತ ತಂಡಕ್ಕೆ 10 ಸಾವಿರ ನಗದು ಮತ್ತು ಟ್ರೋಫಿ, ದ್ವಿತೀಯ 7 ಸಾವಿರ ನಗದು ಮತ್ತು ಟ್ರೋಫಿ ನೀಡಲಾಗುತ್ತದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ನಿರ್ದೇಶಕ ಮೂಕಚಂಡ ಚುಮ್ಮಿ ದೇವಯ್ಯ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಕ್ರೀಡಾ ಶೂ ಕೊಡುಗೆ

ಪೊನ್ನಂಪೇಟೆ, ನ.9– ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆಗೊಂಡಿರುವ ತಿತಿಮತಿಯ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಕ್ರೀಡಾ ಶೂಗಳನ್ನು ನೀಡಲಾಗಿದೆ.

ಕೋಲಾರದಲ್ಲಿ ಜರುಗಲಿರುವ ಪ್ರೌಢ ಶಾಲಾ ವಿಭಾಗದ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಕೊಡಗು ಜಿಲ್ಲೆಯನ್ನು ಅಥ್ಲೆಟಿಕ್ಸ್ ವಿಭಾಗದಲ್ಲಿ ಪ್ರತಿನಿಧಿಸಲಿರುವ ತಂಡದಲ್ಲಿ ಸ್ಥಾನ ಪಡೆದಿರುವ ತಿತಿಮತಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸ್ಥಳೀಯ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ ವತಿಯಿಂದ ಈ ಕ್ರೀಡಾ ಶೂಗಳನ್ನು ವಿತರಿಸಲಾಗಿದೆ.

ಕಾನೂನು ಬಲಿಷ್ಠವಾದರೂ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ

ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ವಿಷಾದ



ಅಂತಾರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಉದ್ಘಾಟಿಸಿದರು.

ಚಾಮರಾಜನಗರ: ಕಾನೂನುಗಳು ಬಲಿಷ್ಠಗೊಂಡರೂ ಅಪರಾಧಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಈ ನಿಟ್ಟಿನಲ್ಲಿ ಅಪರಾಧ ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಪ್ರತಿಯೊಬ್ಬರೂ ಕಾನೂನಿನ ಜ್ಞಾನ ಹೊಂದಬೇಕು ಎಂದು ಜಿಲ್ಲಾ ವಕೀಲರ ಸಂಘದ ನಿಕಟಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಮಾನಸಿಕ ಕಿರುಕುಳ, ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ. ಸಂವಿಧಾನದಲ್ಲಿರುವ ಹಕ್ಕುಗಳನ್ನು ಪಡೆದುಕೊಂಡು ಜೀವನ ಮಟ್ಟವನ್ನು ಸುಧಾರಿಸಲು ಹಾಗೂ ಭಯ ಹೋಗಲಾಡಿಸಲು ಮಹಿಳೆಯರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಹಲವಾರು ಕಾನೂನುಗಳಿದ್ದು ಇವುಗಳ ಸದುಪಯೋಗ ಪಡೆದುಕೊಳ್ಳುವಂತೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಆಗಬೇಕಿದೆ ಎಂದರು.

ಇಂದಿನ ವಿದ್ಯಾರ್ಥಿಗಳು ಅತಿಯಾಗಿ ಮೊಬೈಲ್ ಬಳಕೆಯಿಂದಾಗಿ ತಪ್ಪುದಾರಿ ಹಿಡಿಯುತ್ತಿದ್ದು, ಪೋಷಕರು ಎಚ್ಚರ ವಹಿಸಬೇಕು. ಅವಶ್ಯಕತೆಗಿಂತ ಹೆಚ್ಚಾಗಿ ಮೊಬೈಲ್ ಬಳಕೆ ಮಾಡಬಾರದು ಎಂದು ಸಲಹೆ ನೀಡಿದರು.

ಜಿಲ್ಲಾ ಸರ್ಕಾರಿ ವಕೀಲ ಆರ್. ಅರುಣ್ ಕುಮಾರ್ ಮಾತನಾಡಿ, ಭಾರತ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ನೀಡಲಾಗಿದೆ. ಹಕ್ಕುಗಳು ಮತ್ತು ಕರ್ತವ್ಯಗಳು ಎರಡು ಕಣ್ಣುಗಳು ಇದ್ದ ಹಾಗೆ, ಮೂಲ ಕರ್ತವ್ಯಗಳನ್ನು ಪಾಲಿಸಿದರೆ ಹಕ್ಕುಗಳು ತಾನಾಗಿಯೇ ಲಭಿಸುತ್ತವೆ. ಸಮಾಜದ ಪ್ರತಿಯೊಬ್ಬರೂ ಸಂವಿಧಾನವನ್ನು ಪಠಣ ಮಾಡಿದರೆ ಕಾನೂನಿನ ಜ್ಞಾನ ಹೆಚ್ಚುತ್ತದೆ ಎಂದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಎ.ಆರ್.ಸುಷ್ಮಾ ಮಾತನಾಡಿ, ಕಾನೂನು ಸೇವಾ ದಿನಾಚರಣೆಯ ಮಹತ್ವ ತಿಳಿಸಿದರು. ಕಾಲೇಜಿನ ಪ್ರಭಾರ ಪ್ರಾಂಶುಪಾಲ ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕೃತಿಕಾ, ಸಿಂಧು, ನಿಹಾರಿಕಾ ಇದ್ದರು.

ಉತ್ತಮ ನಾಗರಿಕರಾಗಲು ಕಾನೂನು ಅರಿವು ಅಗತ್ಯ

ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅಭಿಮತ

ಚಾಮರಾಜನಗರ, ನ.9– ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕಲು ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಅತ್ಯಗತ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಎಸ್. ಭಾರತಿ ಅವರು ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಆಸರೆ ಚಾರಿಟಬಲ್ ಟ್ರಸ್ಟ್ ಇವರ ಸಹಯೋಗದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಕಾನೂನು ಅರಿವು ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಉದ್ಘಾಟಿಸಿದರು.

ಮಹಿಳೆಯರು, ಮಕ್ಕಳು, ವಿಶೇಷಚೇತನರು ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯಲು ಕಾನೂನು ಅರಿವು ಹೊಂದಬೇಕು. ನಾಗರಿಕರ ರಕ್ಷಣೆಗಾಗಿ ರೂಪಿಸಿರುವ ಕಾನೂನುಗಳನ್ನು ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು. ಆದರೆ ಎಷ್ಟೋ ಕಡೆ ಕಾನೂನಿನ ದುರ್ಬಳಕೆಯಾಗುತ್ತಿವೆ. ಇದು ಶಾಶ್ವತವಲ್ಲ. ಪ್ರತಿಯೊಬ್ಬರು ಕಾನೂನು ಅರಿವು ಹೊಂದಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದು ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ ಮಾತನಾಡಿ, ಕಾನೂನುಗಳ ಬಗ್ಗೆ ಅರಿವು ಮೂಡಿಸಲು ಪ್ರತಿವರ್ಷ ನ.9ರಂದು ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಆಚರಿಸಲಾಗುತ್ತಿದೆ ಕಾನೂನಿನಡಿ ಎಲ್ಲರೂ ಸಮಾನರು. ಯಾವುದೇ ತಾರತಮ್ಯವಿಲ್ಲದೇ ನ್ಯಾಯ ದೊರಕಿಸಲು ರಾಷ್ಟ್ರೀಯ, ರಾಜ್ಯ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆ ಹಿರಿಯರನ್ನು ಗೌರವಿಸಿ ಅವರ ಅನುಭವದ ಮಾತುಗಳನ್ನು ಕೇಳಬೇಕು. ವಿದ್ಯೆ ಯಾರೂ ಕದಿಯಲಾಗದ ಸಂಪತ್ತಾಗಿರುವುದರಿಂದ ಎಲ್ಲರೂ ಶಿಕ್ಷಣ ಪಡೆಯಬೇಕು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಸ್. ನಂಜಯ್ಯ ಮಾತನಾಡಿ, ಈಗಿನ ಮಕ್ಕಳನ್ನು ನಾಳಿನ ಉತ್ತಮ ಪ್ರಜೆಗಳಾಗಿ ರೂಪಿಸಲು ಕಾನೂನು ಸೇವಾ ದಿನಾಚರಣೆಯನ್ನು ಶಾಲಾ–ಕಾಲೇಜುಗಳಲ್ಲಿ ಹಮ್ಮಿಕೊಳ್ಳುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ನಾವೆಲ್ಲರೂ ಸಮಾಜಜೀವಿಗಳು. ಸಮಾಜದಲ್ಲಿ ಗೌರವಯುತವಾಗಿ ಜೀವಿಸಲು ಕಾನೂನು ಜ್ಞಾನ ಹೊಂದುವುದು ಅವಶ್ಯವಾಗಿದೆ ಎಂದು ತಿಳಿಸಿದರು.

ಆಸರೆ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಟಿ.ಜೆ. ಸುರೇಶ್ ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕಾನೂನು ತಲುಪಿದರೆ ಕಾನೂನು ಸೇವಾ ದಿನ ಸಾರ್ಥಕತೆ ಕಾಣಲಿದೆ. ಪ್ರತಿಯೊಬ್ಬರು ನಿತ್ಯಜೀವನದಲ್ಲಿ ಕಾನೂನು ಅಳವಡಿಸಿಕೊಳ್ಳಬೇಕು. ಇಂದಿನ ವಿದ್ಯಾರ್ಥಿಗಳು ಹೆಚ್ಚಾಗಿ ಸೋಶಿಯಲ್ ಮೀಡಿಯಾಗೆ ಅವಲಂಬಿತರಾಗುತ್ತಿರುವುದು ವಿಷಾದನೀಯ ಸಂಗತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ. ಪಿ.ಎಸ್.ಗುರುಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳಿಗೆ ಕಾನೂನು ಅರಿವು ಹೊಂದಲು ಇದು ಸದಾವಕಾಶವಾಗಿದೆ. ಮಾಡುವ ಕೆಲಸಗಳು ತಪ್ಪು ಎಂದು ತಿಳಿದಿದ್ದರೂ ಮತ್ತದೇ ತಪ್ಪು ಮರುಕಳಿಸಬಾರದು. ಇದರಿಂದ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ. ಸೋಶಿಯಲ್ ಮೀಡಿಯಾಗಳನ್ನು ಉತ್ತಮ ಕೆಲಸಗಳಿಗೆ ಬಳಸಿಕೊಳ್ಳುವಂತೆ ಕಾಲೇಜಿನ ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.

ಇದೇ ವೇಳೆ ಹಾಸನ ಜಿಲ್ಲೆಯ ಹಾಸನಾಂಬ ಜಾತ್ರಾ ಸಮಯದಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ ಕಾಲೇಜಿನ ವಿದ್ಯಾರ್ಥಿಗಳಿಗೆ ಗಣ್ಯರು ಪ್ರಮಾಣಪತ್ರ ವಿತರಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿಸ್ಟರಿ ಅಸೋಸಿಯೇಟ್ ಪ್ರೊ. ನೀಲಕಂಠಸ್ವಾಮಿ, ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಮಲ್ಲೇಶ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

ವೈ.ಕೆ. ಅಂಕಮೂರ್ತಿಗೆ ಪಿಹೆಚ್.ಡಿ



ಮೈಸೂರು, ನ.9 – ಡಾ. ಎಂ. ಚಂದ್ರಶೇಖರ ಅವರ ಮಾರ್ಗದರ್ಶನದಲ್ಲಿ ವೈ.ಕೆ. ಅಂಕಮೂರ್ತಿ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೇಲೂರು ಕೆರೆಯಲ್ಲಿ ಮಹಿಳೆ, ಬಾಲಕನ ಶವ ಪತ್ತೆ

ಚಾಮರಾಜನಗರ, ನ.9– ತಾಲೂಕಿನ ಯಾನಗಹಳ್ಳಿ ಬಳಿಯ ಮೇಲೂರು ಕೆರೆಯಲ್ಲಿ ಅಪರಿಚಿತ ಮಹಿಳೆ ಹಾಗೂ ಬಾಲಕನ ಶವ ಶನಿವಾರ ಪತ್ತೆಯಾಗಿದೆ.

ಸುಮಾರು 30 ರಿಂದ 35 ವರ್ಷ ವಯಸ್ಸಿನ ಮಹಿಳೆ ಹಾಗೂ 5ರಿಂದ 7 ವರ್ಷ ವಯಸ್ಸಿನ ಬಾಲಕನ ಶವಗಳು ಕೆರೆಯಲ್ಲಿ ಪತ್ತೆಯಾಗಿದ್ದು, ಶನಿವಾರ ಬೆಳಗ್ಗೆ ಕೆರೆಯಲ್ಲಿ ಶವಗಳು ತೇಲಾಡುತ್ತಿರುವುದನ್ನು ಗಮನಿಸಿದ ಸ್ಥಳೀಯರು ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ.

ಕೂಡಲೇ ಸ್ಥಳಕ್ಕಾಗಮಿಸಿದ ಗ್ರಾಮಾಂತರ ಠಾಣೆಯ ಪೊಲೀಸರು ಶವಗಳನ್ನು ಹೊರ ತೆಗೆದು ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ. ಮೃತರು ಹೆಸರು, ವಿಳಾಸ ಪತ್ತೆಯಾಗಿಲ್ಲ. ವಾರಸುದಾರರು ಗ್ರಾಮಾಂತರ ಠಾಣೆಯ ಪೊಲೀಸರನ್ನು ಸಂಪರ್ಕಿಸಲು ಕೋರಲಾಗಿದೆ.

ಸರ್ಕಾರಿ ಸೇವೆಯಲ್ಲಿ ವಯೋನಿವೃತ್ತಿ ಸರ್ವೇ ಸಾಮಾನ್ಯ

ಡಿಡಿಪಿಯು ಸಿ.ಮಂಜುನಾಥ್ ಪ್ರಸನ್ನ

ಚಾಮರಾಜನಗರ: ಸರ್ಕಾರಿ ಸೇವೆಯಲ್ಲಿ ವರ್ಗಾವಣೆ, ನಿವೃತ್ತಿ ಸರ್ವೇಸಾಮಾನ್ಯವಾದದ್ದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಮಂಜುನಾಥ್ ಪ್ರಸನ್ನ ತಿಳಿಸಿದರು. ನಗರದ ಸರ್ಕಾರಿ ಪದವಿಪೂರ್ವ ಬಾಲಕರ ಕಾಲೇಜಿನಲ್ಲಿ ಪ್ರಾಂಶುಪಾಲರ ಸಂಘದ ವತಿಯಿಂದ ನಿವೃತ್ತ ಪ್ರಾಂಶುಪಾಲರಿಗೆ ಆಯೋಜಿಸಿದ ಬೀಳ್ಕೊಡುಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಂಶುಪಾಲರು ವಿದ್ಯಾರ್ಥಿಗಳ ನಡುವೆ ಕೆಲಸ ಮಾಡುತ್ತಾರೆ. ವಿದ್ಯಾರ್ಥಿಗಳ ಫಲಿತಾಂಶ, ಶೈಕ್ಷಣಿಕ ವಾತಾವರಣ ಸುಧಾರಣೆ ಮಾಡುವುದರ ಜೊತೆಗೆ ಉಪನ್ಯಾಸಕರನ್ನು ಒಂದು ಕಡೆ ಸೇರಿಸಿಕೊಂಡು ಉತ್ತಮವಾದ ಫಲಿತಾಂಶ ರೂಪಿಸುವ ದಿಕ್ಕಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಜೊತೆಗೆ ಆಡಳಿತಾತ್ಮಕ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ ಎಂದರು.

ಒಂದು ಕಡೆ ಶೈಕ್ಷಣಿಕ ಅಭಿವೃದ್ಧಿ ಮಾಡುತ್ತ ಹೋದರೆ ಮತ್ತೊಂದು ಕಡೆ ವಿದ್ಯಾರ್ಥಿಗಳ ಅನುಕೂಲಕ್ಕೆ ಮೂಲ ಸೌಕರ್ಯಗಳನ್ನು ಕಲ್ಪಿಸುವ ವ್ಯವಸ್ಥೆ ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಎಲ್ಲ ಪ್ರಾಂಶುಪಾಲರು ಉತ್ತಮ ಕೆಲಸ ಮಾಡಿದ್ದಾರೆ. ನಿವೃತ್ತಿ ಹೊಂದಿರುವ ಪ್ರಾಂಶುಪಾಲರ ಜೀವನ ಸುಖಕರವಾಗಿರಲೆಂದು ಆಶಿಸಿದರು.



ನಿವೃತ್ತ ಪ್ರಾಂಶುಪಾಲರಾದ ಎಸ್.ಪ್ರಮೋದ್, ಸ್ವಾಮಿ, ಎಸ್.ನಾಗೇಶ್, ಎಂ.ಜಯಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ನಿವೃತ್ತ ಪ್ರಾಂಶುಪಾಲ ಪ್ರಮೋದ್ ಮಾತನಾಡಿ, ಸರ್ಕಾರಿ ಕೆಲಸ ಸಿಗುವುದೇ ಕಷ್ಟವಾಗಿರುವ ಕಾಲದಲ್ಲಿ ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವುದು ತುಂಬಾ ಖುಷಿಯಾಗಿದೆ. ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಲು ಅವಕಾಶ ನೀಡಿದ್ದ ಡಿಡಿಪಿಯು ಮಂಜುನಾಥ್ ಪ್ರಸನ್ನ ಹಾಗೂ ಇತರರಿಗೆ ಅಭಾರಿಯಾಗಿರುತ್ತೇನೆ ಎಂದರು.

ನಿವೃತ್ತ ಪ್ರಾಂಶುಪಾಲರಿಗೆ ಸನ್ಮಾನ: ನಿವೃತ್ತ ಪ್ರಾಂಶುಪಾಲರಾದ ಎಸ್.ಪ್ರಮೋದ್, ಸ್ವಾಮಿ, ಎಸ್.ನಾಗೇಶ್, ಎಂ.ಜಯಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಪ್ರಾಂಶುಪಾಲರ ಸಂಘದ ಅಧ್ಯಕ್ಷ ಸೋಮಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರ ಸಂಘದ ಕಾರ್ಯದರ್ಶಿ ಬಸವರಾಜು, ಖಜಾಂಚಿ ಬಸವರಾಜಪ್ಪ ಹಾಗೂ ಪ್ರಾಂಶುಪಾಲರು, ಉಪನ್ಯಾಸಕಿ ಅಫ್ರೀನ್ ತಾಜ್ ಪ್ರಾರ್ಥಿಸಿದರು. ಉಪನ್ಯಾಸಕಿ ಜಿ.ಪಿ.ಶೀಲಾ ಸ್ವಾಗತಿಸಿದರು.

ಕಾರಿಗೆ ಲಾರಿ ಡಿಕ್ಕಿ; ಇಬ್ಬರಿಗೆ ಗಾಯ

ಚಾಮರಾಜನಗರ: ಕಾರಿಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹರದನಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ.

ತಮಿಳುನಾಡಿನ ಮಣಿಕಂಠನ್, ರಾಜಕುಮಾರ್ ಗಾಯಗೊಂಡವರು. ಇವರು ಶುಕ್ರವಾರ ರಾತ್ರಿ 11 ಗಂಟೆ ಸಮಯದಲ್ಲಿ ಕಾರಿನಲ್ಲಿ ತಮಿಳುನಾಡು ಕಡೆಗೆ ತೆರಳುತ್ತಿದ್ದಾಗ ಎದುರಿನಿಂದ ಬಂದ ಲಾರಿ ಇವರ ಕಾರಿಗೆ ಡಿಕ್ಕಿ ಹೊಡೆದಿದೆ.

ಪರಿಣಾಮ ಕಾರಿನಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚಾಮರಾಜನಗರ ಸಂಚಾರ ಠಾಣೆಯ ಪೊಲೀಸರು ಗಾಯಾಳುಗಳನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಈ ಸಂಬಂಧ ನಗರದ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

“ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಪರ್ಯಾಯವಾಗಿ ಮುಕ್ತ ಕಲಿಕಾ ವ್ಯವಸ್ಥೆ ಮೂಲಕ ಪದವಿಪೂರ್ವ (12ನೇ ತರಗತಿ) ಹಂತದವರೆಗೆ ಸಮಾಜದಲ್ಲಿ ಹೆಚ್ಚಿನ ಸಮಾನತೆ ಮತ್ತು ಕಲಿಕಾ ಸಮಾಜದ ವಿಕಾಸಕ್ಕೆ ಶಿಕ್ಷಣ ಸಾರ್ವತ್ರೀಕರಣದ ಉದ್ದೇಶ ಈಡೇರಿಸುವ ಜವಾಬ್ದಾರಿಯನ್ನು ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಹೊಂದಿದೆ. ಪ್ರಾದೇಶಿಕ ಭಾಷೆಯಲ್ಲಿ ಬೋಧನಾ ಮಾಧ್ಯಮ ಒಳಗೊಂಡಿರುವುದರಿಂದ ಮಧ್ಯಂತರದಲ್ಲಿ ಶಾಲೆ ಬಿಟ್ಟಿರುವ ಅದರಲ್ಲೂ ಗ್ರಾಮೀಣ ಪ್ರದೇಶದ ಕಲಿಕಾರ್ಥಿಗಳು ಶಿಕ್ಷಣವನ್ನು ಕರ್ನಾಟಕ ಮುಕ್ತ ವಿದ್ಯಾಲಯ ಮೂಲಕ ಮುಂದುವರೆಸಲು ವರದಾನವಾಗಿದೆ.ಮುಕ್ತ ವಿದ್ಯಾಲಯದ ಗುರಿ, ಗುಣಮಟ್ಟದ ಶಾಲಾ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಗೆ ಸಾರ್ವತ್ರಿಕ ಮತ್ತು ಹೊಂದಿಕೊಳ್ಳುವ ಪ್ರವೇಶದೊಂದಿಗೆ ಅಂತರ್ಗತ ಕಲಿಕೆಗೆ ಒತ್ತುಕೊಡುವುದಾಗಿದೆ.





ಜೆಎಸ್‌ಎಸ್ ಕೆಓಎಸ್‌ಗೆ ರಜತ ಸಂಭ್ರಮ

■ ಸಿ.ಎಸ್.ಶಿವಸ್ವಾಮಿ
ಮೊ. 9449820714

ಶಾಲಾ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ “ಮುಕ್ತ ಶಿಕ್ಷಣ” ದ ಪರಿಕಲ್ಪನೆಯಲ್ಲಿ ಶಾಲೆಯನ್ನೇ ಮಕ್ಕಳ ಮನೆ ಬಾಗಿಲಿಗೆ ಕೊಂಡೊಯ್ಯುವ ಸದುದ್ದೇಶದಿಂದ **ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ** (ಜೆಎಸ್‌ಎಸ್ ಕೆಓಎಸ್) ಸಂಸ್ಥೆಯನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠ ಮೈಸೂರಿನಲ್ಲಿ ಆರಂಭಿಸಲಾಯಿತು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (NIOS) ಅನ್ನು ಹಿಂದೆ ನ್ಯಾಷನಲ್ ಓಪನ್ ಸ್ಕೂಲ್(NOS) ಎಂದು ಕರೆಯಲಾಗುತ್ತಿತ್ತು. ಮುಕ್ತ ಶಾಲೆಯನ್ನು ಮೂಲತಃ 1979ರಿಂದ ಸಿಬಿಎಸ್‌ಇ ಯೋಜನೆಯಾಗಿ ಪ್ರಯೋಗಿಸಲಾಗಿತ್ತು. 1986ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಎನ್‌ಐಓಎಸ್ ಈಗ ರಾಷ್ಟ್ರದ ಒಂದು ಸ್ವಾಯತ್ತ ಶಿಕ್ಷಣ ಸಂಸ್ಥೆಯಾಗಿದ್ದು, ಭಾರತ ಸರ್ಕಾರದ ಮಾನವ ಅಭಿವೃದ್ಧಿ ಹಾಗೂ ಶಿಕ್ಷಣ ಮಂತ್ರಾಲಯ ಇಲಾಖೆ ಅಧೀನದಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ಎನ್‌ಐಓಎಸ್‌ನಿಂದ ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಮಟ್ಟದಲ್ಲಿ ಸಾಮಾನ್ಯ ಮತ್ತು ಶೈಕ್ಷಣಿಕ ಕೋರ್ಸ್‌ಗಳ ಜೊತೆಗೆ ಹಲವಾರು ವೃತ್ತಿಪರ, ಜೀವನ ಕೌಶಲ ಮತ್ತು ಸಮುದಾಯ ಆಧಾರಿತ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಕಲಿಕಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ. ಜೊತೆಗೆ ಎನ್‌ಐಓಎಸ್ ಮುಕ್ತ ಶಿಕ್ಷಣ ಕಾರ್ಯಕ್ರಮಗಳ ಮೂಲಕ ಪ್ರಾಥಮಿಕ ಹಂತದ ಕಾರ್ಯಕ್ರಮಗಳನ್ನು ಸಹ ನೀಡಲಾಗುತ್ತಿದೆ. ಎನ್‌ಐಓಎಸ್ ವಿಶ್ವದಲ್ಲೇ ಅತಿ ವಿಸ್ತಾರವಾದ ವ್ಯಾಪಕ ಜಾಲವನ್ನು ಹೊಂದಿರುವ ಭಾರತ ಸರ್ಕಾರದ ಸ್ವಾಯತ್ತ ಶೈಕ್ಷಣಿಕ ಸಂಸ್ಥೆಯಾಗಿದೆ. ಶಿಕ್ಷಣ ವಂಚಿತರನ್ನು ಶಿಕ್ಷಣದ ಚೌಕಟ್ಟಿನೊಳಗೆ ತರಲು ಎನ್‌ಐಓಎಸ್ ಕಾರ್ಯನಿರ್ವಹಿಸುತ್ತಿದೆ. ಭಾರತದ ಬಹುತೇಕ ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯ ಮುಕ್ತ ವಿದ್ಯಾಲಯವನ್ನು ಆಯಾ ರಾಜ್ಯಗಳ ಹೆಸರಿನಲ್ಲಿ ಸ್ಥಾಪಿಸಲಾಗಿದ್ದು ಅವುಗಳನ್ನು ಆಯಾ ರಾಜ್ಯ ಸರ್ಕಾರಗಳೇ ಮುನ್ನಡೆಸುತ್ತಿವೆ.

ಕರ್ನಾಟಕ ಮುಕ್ತ ವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (KSEEB) ಇಂದಿನ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ (KSEAB)10ನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ, ಅಂಕಪಟ್ಟಿಗಳನ್ನು ವಿತರಿಸುವ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. 2006ರಲ್ಲಿ ಕರ್ನಾಟಕ ಸರ್ಕಾರವು, ಕರ್ನಾಟಕ ಮುಕ್ತ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನೀಡುವ ಅಂಕಪಟ್ಟಿ ಸಾಂಪ್ರದಾಯಿಕ, ರೆಗ್ಯುಲರ್ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಗೆ ತತ್ಸಮಾನ ಸಮಾನ ಎಂದು ಆದೇಶ ಹೊರಡಿಸಿದೆ. ಸದರಿ ಆದೇಶದ ಪ್ರಕಾರ ಮುಕ್ತ ವಿದ್ಯಾಲಯದಲ್ಲಿ ಪ್ರವೇಶ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಮುಂದಿನ ತಮ್ಮ ವ್ಯಾಸಂಗವನ್ನು ಪದವಿಪೂರ್ವ, ಐಟಿಐ, ಡಿಪ್ಲೊಮಾ ಇತ್ಯಾದಿ... ಶಿಕ್ಷಣ ಸಂಸ್ಥೆಗಳಲ್ಲಿ ಮುಂದುವರಿಸಲು ಅವಕಾಶವಿರುತ್ತದೆ. ಸರ್ಕಾರ ಆದೇಶದನ್ವಯ ಕರ್ನಾಟಕ ಮುಕ್ತ ವಿದ್ಯಾಲಯದಲ್ಲಿ ಶಿಕ್ಷಣ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಮತ್ತು ನೌಕರಿ ಪಡೆಯುವ ಅರ್ಹತೆ ಹೊಂದಿರುತ್ತಾರೆ.

ಮುಕ್ತ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಕಲಿಕಾ ವೇಳೆ, ಕಲಿಯುವ ಸ್ಥಳ, ವಿಷಯಗಳ ಆಯ್ಕೆ, ಪರೀಕ್ಷೆ ತೆಗೆದುಕೊಳ್ಳುವ ಸಮಯ ಇತ್ಯಾದಿ.. ವಿಷಯಗಳಲ್ಲಿ ಮುಕ್ತ ಸ್ವಾತಂತ್ರ್ಯ ಇರುತ್ತದೆ. ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯದಲ್ಲಿ 1999-2000ನೇ ಸಾಲಿನಿಂದ ಇಂದಿನವರೆಗೆ 10ನೇ ತರಗತಿಗೆ 1,07,344 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಅವರಲ್ಲಿ 71,417 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಸರಾಸರಿ 66.53 ಫಲಿತಾಂಶ ಬಂದಿರುವುದು ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯದ ಹೆಗ್ಗಳಿಕೆ.

ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಪರ್ಯಾಯವಾಗಿ ಮುಕ್ತ ಕಲಿಕಾ ವ್ಯವಸ್ಥೆ ಮೂಲಕ ಪದವಿಪೂರ್ವ (12ನೇ ತರಗತಿ) ಹಂತದವರೆಗೆ ಸಮಾಜದಲ್ಲಿ ಹೆಚ್ಚಿನ ಸಮಾನತೆ ಮತ್ತು ಕಲಿಕಾ ಸಮಾಜದ ವಿಕಾಸಕ್ಕೆ ಶಿಕ್ಷಣ ಸಾರ್ವತ್ರೀಕರಣದ ಉದ್ದೇಶ ಈಡೇರಿಸುವ ಜವಾಬ್ದಾರಿಯನ್ನು ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಹೊಂದಿದೆ. ಪ್ರಾದೇಶಿಕ ಭಾಷೆಯಲ್ಲಿ ಬೋಧನಾ ಮಾಧ್ಯಮ ಒಳಗೊಂಡಿರುವುದರಿಂದ ಮಧ್ಯಂತರದಲ್ಲಿ ಶಾಲೆ ಬಿಟ್ಟಿರುವ ಅದರಲ್ಲೂ ಗ್ರಾಮೀಣ ಪ್ರದೇಶದ ಕಲಿಕಾರ್ಥಿಗಳು ಶಿಕ್ಷಣವನ್ನು ಕರ್ನಾಟಕ ಮುಕ್ತ ವಿದ್ಯಾಲಯ ಮೂಲಕ ಮುಂದುವರೆಸಲು ವರದಾನವಾಗಿದೆ. ಮುಕ್ತ ವಿದ್ಯಾಲಯದ ಗುರಿ, ಗುಣಮಟ್ಟದ ಶಾಲಾ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಗೆ ಸಾರ್ವತ್ರಿಕ ಮತ್ತು ಹೊಂದಿಕೊಳ್ಳುವ ಪ್ರವೇಶದೊಂದಿಗೆ ಅಂತರ್ಗತ ಕಲಿಕೆಗೆ ಒತ್ತುಕೊಡುವುದಾಗಿದೆ.

ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರಲು 2020ನೇ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಕಾರ್ಯಯೋಜನೆ ಹಮ್ಮಿಕೊಂಡು ಪ್ರಸ್ತುತ ಕಾಲಕ್ಕೆ ಅನ್ವಯವಾಗುವಂತಹ ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಸಾಮಾಜಿಕ ಬದಲಾವಣೆಯ ರೂವಾರಿಗಳನ್ನಾಗಿ ರೂಪಿಸಲು ಪೂರಕವಾದ ಕ್ರಿಯಾ ಯೋಜನೆ ರೂಪಿಸಿಕೊಂಡು ಪ್ರಾತಿದಾಯಕವಾಗಿ ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಹೆಜ್ಜೆ ಇಡುತ್ತಿದೆ. ಸೆಕೆಂಡರಿ ವಿಭಾಗಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹಾಗೂ ಸಂಘ ಸಂಸ್ಥೆಗಳ ಕೋರಿಕೆ ಮೇರೆಗೆ ವೃತ್ತಿಪರ ಸಲಹೆ ಮತ್ತು ಸಹಕಾರ ನೀಡುತ್ತಿದೆ. ಜೀವನೋಪಾಯಕ್ಕಾಗಿ ಮತ್ತು ಪದವಿಪೂರ್ವ ಹಂತದವರೆಗೆ ಜೀವನ ಪರ್ಯಂತ ಕಲಿಕೆಗಾಗಿ ಅಗತ್ಯ ಆಧಾರಿತ ಶೈಕ್ಷಣಿಕ ಮತ್ತು ವೃತ್ತಿಪರ ಶಿಕ್ಷಣ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ರೂಪಿಸಲಿದೆ. ಕಲಿಕಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ದೂರಶಿಕ್ಷಣ ಪಠ್ಯಕ್ರಮ ಮತ್ತು ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಲು, ಶ್ರೇಷ್ಠತೆಯನ್ನು ಸಾಧಿಸಲು ಪದವಿ ಪೂರ್ವ ಹಂತದವರೆಗೆ ಕಲಿಕೆಯನ್ನು ಸುಲಭಗೊಳಿಸಲು ಪರಿಣಾಮಕಾರಿ ಕಲಿಕೆಗೆ ಬೆಂಬಲ ವ್ಯವಸ್ಥೆ ನೀಡಲು ಶಿಕ್ಷಣ ಸಂಸ್ಥೆಗಳಿಗೆ ಕಲಿಕಾ ಕೇಂದ್ರ ತೆರೆಯಲು ಮಾನ್ಯತೆ ನೀಡುತ್ತದೆ.

ಸಂಸ್ಥೆಯ ಅಭಿವೃದ್ಧಿ ಚಟುವಟಿಕೆಗಳ ಮೂಲಕ ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಒತ್ತು ನೀಡಲಾಗುತ್ತಿದೆ. ನೆಟ್‌ವರ್ಕಿಂಗ್, ಸಾಮರ್ಥ್ಯ ವರ್ಧನೆ, ಸಂಪನ್ಮೂಲಗಳ ಹಂಚಿಕೆ ಮತ್ತು ಗುಣಮಟ್ಟದ ಭರವಸೆಯ ಮೂಲಕ ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟಕ್ಕೆ ಮುಕ್ತ ಶಿಕ್ಷಣವನ್ನು ಕೊಂಡೊಯ್ಯಲು ಉತ್ತೇಜಿಸಲಾಗುತ್ತಿದೆ. ಮೈಸೂರಿನ ಶಿಕ್ಷಕರ ಬಡಾವಣೆಯಲ್ಲಿ ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಕೇಂದ್ರ ಕಚೇರಿ ಇದೆ. ಮುಕ್ತ ವಿದ್ಯಾಲಯದ ಕಾರ್ಯವ್ಯಾಪ್ತಿ ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸಿದೆ. ಕೊಡಗು ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಬಹುತೇಕ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಮುಕ್ತ ವಿದ್ಯಾಲಯ ಕಲಿಕಾ ಕೇಂದ್ರಗಳನ್ನು ತೆರೆಯಲು ರಾಜ್ಯದಲ್ಲಿನ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಾಗೂ ಮೂಲ ಸೌಲಭ್ಯಗಳನ್ನು ಹೊಂದಿರುವ ಸಂಘ ಸಂಸ್ಥೆಯ ಟ್ರಸ್ಟ್‌ಗಳಿಗೆ ಮಾನ್ಯತೆ ನೀಡಲಾಗುತ್ತದೆ. ಪ್ರಸ್ತುತ ರಾಜ್ಯದಾದ್ಯಂತ 106 ಕಲಿಕಾ ಕೇಂದ್ರಗಳಿಗೆ, 34 ಮಾಹಿತಿ ಕೇಂದ್ರಗಳಿಗೆ ಅನುಮತಿ ನೀಡಲಾಗಿದೆ.

ಕಲಿಕಾರ್ಥಿಗಳಿಗಿರುವ ಸೌಲಭ್ಯಗಳು

- ಅಧ್ಯಯನ ವಿಷಯಗಳ ಆಯ್ಕೆಯಲ್ಲಿ ಸ್ವಾತಂತ್ರ್ಯ
- ಕಲಿಕಾ ವೇಳೆ, ಕಲಿಯುವ ಸ್ಥಳ, ಪರೀಕ್ಷೆ ತೆಗೆದುಕೊಳ್ಳುವ ಸಮಯ, ಕಲಿಕಾ ಕೇಂದ್ರಗಳ ಆಯ್ಕೆ ಸ್ವಾತಂತ್ರ್ಯ
- ಮೂರು ವರ್ಷದಲ್ಲಿ ಆರು ಬಾರಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ
- ಗಳಿಕೆ ಮೂಲಕ ಕಲಿಕೆಗೆ ಸದವಕಾಶ
- ಪಠ್ಯಪುಸ್ತಕ ಹಾಗೂ ಆಧುನಿಕ ವಿದ್ಯುನ್ಮಾನಗಳಾದ ಆಡಿಯೋ-ವೀಡಿಯೋ ಮೂಲಕ ಕೆಓಎಸ್ ಆ್ಯಪ್‌ನಲ್ಲಿ ವಿದ್ಯಾರ್ಥಿಗಳು ತಾವಿರುವ ಸ್ಥಳದಲ್ಲೇ ತಮ್ಮ ಬಿಡುವಿನ ವೇಳೆಯಲ್ಲೇ ಶಿಕ್ಷಣ ಪಡೆಯಲು ಅವಕಾಶ

ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗಿರುವ ಸೌಲಭ್ಯಗಳು

- ಮೂರು ಭಾಷೆಗಳನ್ನು ಅಧ್ಯಯನ ಮಾಡುವ ಬದಲು ಒಂದು ಭಾಷೆ ಮಾತ್ರ ಅಧ್ಯಯನ ಮಾಡಲು ಅವಕಾಶ
- ಪರೀಕ್ಷೆ ಬರೆಯಲು ಮೂರು ಗಂಟೆ ಅವಧಿ ಪರೀಕ್ಷೆಗೆ ಒಂದು ಗಂಟೆ ಹೆಚ್ಚುವರಿ ಕಾಲಾವಕಾಶ ನೀಡಿಕೆ
- ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲ್ಕ್ಯುಲೇಟರ್ ಬಳಸಲು ಅವಕಾಶ ಹಾಗೂ ಸ್ವಂತ ವೆಚ್ಚದಲ್ಲಿ ಪರೀಕ್ಷೆ ಬರೆಯಲು ಹಾಗೂ ಪ್ರಶ್ನೆಪತ್ರಿಕೆ ಓದಲು ಸಹಾಯಕರನ್ನು ಒದಗಿಸಿಕೊಳ್ಳಲು ಅವಕಾಶ

ಮಕ್ಕಳ ಚಿತ್ರಕಥೆ

‘ಕುರುಡ ನೀಡಿದ ಉತ್ತರ...!’

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಂದೂರಿನಲ್ಲಿ ಒಬ್ಬ ಕುರುಡನಿದ್ದ.




ಆ ಊರಿನಲ್ಲಿ ಒಂದು ದೇವಸ್ಥಾನವಿತ್ತು.




ಒಮ್ಮೆ ಆ ಕುರುಡನಿಗೆ ದೇವಸ್ಥಾನಕ್ಕೆ ಹೋಗುವ ಆಸೆಯಾಯಿತು. ಆತ ಹೊರಟೇಬಿಟ್ಟ.




ಈ ಕುರುಡ ದೇವಸ್ಥಾನಕ್ಕೆ ಬಂದದ್ದನ್ನು ನೋಡಿ, ಅಲ್ಲಿದ್ದ ಜನ ನಗುತ್ತಿದ್ದರು.



ಆ ಜನಗಳ ನಡುವೆ ಒಬ್ಬ ನಗುನಗುತ್ತಲೇ ಕುರುಡನನ್ನು ಕೇಳಿಯೇಬಿಟ್ಟ,"ದೇವರ ದರ್ಶನಕ್ಕೇನೋ ಬಂದಿದ್ದೀಯಾ... ಆದರೆ ನೀನು ದೇವರನ್ನು ನೋಡಬಲ್ಲೆಯಾ...?".



ಅದಕ್ಕೆ ಕುರುಡ ಉತ್ತರಿಸಿದ,"ನಾನು ದೇವರನ್ನು ನೋಡುತ್ತೇನೋ ಇಲ್ಲವೋ....ಆದರೆ ದೇವರು ನನ್ನನ್ನು ನೋಡುತ್ತಾನೆ. ಅದೇ ನನ್ನ ಭಾಗ್ಯ...!".



ವಾರಭವಿಷ್ಯ

10.11.2024 ರಿಂದ 16.11.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ತುಲಾ, ವೃಶ್ಚಿಕ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಕುಜ-ಕಟಕ, ಬುಧ-ವೃಶ್ಚಿಕ, ಗುರು-ವೃಷಭ, ಶುಕ್ರ-ಧನುಸ್ಸು, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, ‘ಭಾವಸಾರ ರತ್ನ’
‘ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು’
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಗೃಹ ನಿರ್ಮಾಣ ಕೆಲಸಗಳು ತ್ವರಿತಗತಿಯಲ್ಲಿ ಸಾಗುವುದು. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವ ಸಂಭವವಿದೆ. ಹೊಸ ವಾಹನ, ಬೆಲೆ ಬಾಳುವ ವಸ್ತು ಮನೆಗೆ ಬರುವುದು. ಸ್ಥಿರಾಸ್ತಿ ಸಂಬಂಧಿತ ಒಪ್ಪಂದಗಳು ಅನುಕೂಲಕರವಾಗಿರುತ್ತದೆ. ನಿಮ್ಮ ಸ್ವಂತ ಕೆಲಸಗಳ ಬಗ್ಗೆ ಆದ್ಯತೆ ನೀಡಿ. ಅನುಚಿತ ವ್ಯಕ್ತಿಗಳ ಸಂಪರ್ಕದಿಂದ ತೊಂದರೆಗೆ ಸಿಲುಕುವಿರಿ.

ಶ್ರೀ ನೃಸಿಂಹ ದರ್ಶನ. ಶುಭ ಸಂಖ್ಯೆ-6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸ್ನೇಹಿತರ ಸಹಾಯ ನಿರೀಕ್ಷಿಸಿದರೆ ತಪ್ಪಾಗಲಾರದು. ಚರ-ಸ್ಥಿರ ಆಸ್ತಿ ವ್ಯವಹಾರಗಳು ಭಾಗ್ಯದ ಬಾಗಿಲು ತೆರೆಯುವುದು. ವಾರದ ಕಡೆಗೆ ಸಂಭವಿಸುವ ಗಜಕೇಸರಿ ಯೋಗ ಬಲದಿಂದ ಕಠಿಣ ಕೆಲಸಗಳು ಹಗುರವೆನಿಸುವುದು. ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವುದರಿಂದ ಮನೋಲ್ಲಾಸ. ನಿಮಗಾಗದವರು ಮಿತ್ರತ್ವ ಬಯಸಿ ಬರಬಹುದು. ನಿರಾಕರಿಸದಿರಿ. ಶೀತ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀದೇವಿ ಸ್ತುತಿ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವೈಯಕ್ತಿಕ ಕ್ಷೇತ್ರದಲ್ಲಿ ಅಭಿವೃದ್ಧಿ, ನೂತನ ವಸ್ತ್ರಾಭರಣ ಖರೀದಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಲೇವಾದೇವಿ ಸಂಸ್ಥೆಗಳಿಗೆ ಗ್ರಾಹಕರಿಂದ ತೊಂದರೆ. ಆಸ್ತಿ ಹಂಚಿಕೆ ವಿಷಯದಲ್ಲಿ ಮನೆಯಲ್ಲಿ ಭಿನ್ನಮತದ ಕಾರಣ ಅಸಮಾಧಾನ. ಸಮಾಜ ವಿರೋಧಿ ಶಕ್ತಿಗಳ ಸಂಪರ್ಕದಿಂದ ಪೊಲೀಸ್ ಠಾಣೆ ದರ್ಶನ. ಶ್ವಾಸ ಸಂಬಂಧಿ ಅನಾರೋಗ್ಯ ಕಾಡುವುದು.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-1

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಮುಟ್ಟಿದ್ದೆಲ್ಲಾ ಚಿನ್ನ ಆಗದಿದ್ದರೂ ಬೆಳ್ಳಿ ಆಗುವ ಸಾಧ್ಯತೆ ಇದೆ. ಸರ್ಕಾರಿ ನೌಕರರಿಗೆ ಪದೋನ್ನತಿಯ ಜೊತೆ ವರ್ಗಾವಣೆ. ಪತ್ರ ಬರಹಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಸಂಪಾದನೆ. ವಿವಾಹಯೋಗ್ಯರಿಗೆ ಸೂಕ್ತ ಬಾಳ ಸಂಗಾತಿ ದೊರೆಯುವರು. ಹಳೆಯ ಕಾಯಿಲೆಗಳಿಂದ ಮುಕ್ತಿ ದೊರೆಯುವುದು. ಅಷ್ಟಮ ಶನಿದೇವ, ವಾಹನ ಡ್ರೈವ್ ಅತಿವೇಗ ದೇಹಕ್ಕೆ ಮಾರಕವಾದೀತು.

ಶ್ರೀ ತ್ರಿಪುರ ಸುಂದರೀ ಸ್ತೋತ್ರ, ಶುಭ ಸಂಖ್ಯೆ-7

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸರ್ಕಾರಿ ಉದ್ಯೋಗಿಗಳಿಗೆ ಹಿರಿಯ ಅಧಿಕಾರಿಗಳ ಒಲವು. ಕೌಟುಂಬಿಕ ವಿಚಾರಗಳಲ್ಲಿ ಉಂಟಾಗಿದ್ದ ವಿವಾದಗಳು ದೂರವಾಗುತ್ತವೆ. ವೃತ್ತಿಪರ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರೆಯುತ್ತದೆ. ಆರ್ಥಿಕ ಸ್ಥಿರತೆಯನ್ನು ಸಾಧಿಸಲು ದೈವಬಲ ಬೇಕೆಂದರೆ ಪುರುಷ ಪ್ರಯತ್ನವೂ ಬೇಕು. ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಅವಕಾಶ ಒದಗಿ ಬಂದಿದೆ. ಆಧ್ಯಾತ್ಮ ಅಧ್ಯಯನದ ಬಗ್ಗೆ ಒಲವು ತೋರುವಿರಿ.

ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ-4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಐಹಿಕ ಸುಖಭೋಗಗಳನ್ನು ಅನುಭವಿಸುವಿರಿ. ಮನೆಯಲ್ಲೂ, ಆಫೀಸಿನಲ್ಲೂ ಆಗುವ ಬದಲಾವಣೆಗೆ ಸಿದ್ಧರಾಗಿರಿ. ಮಕ್ಕಳ ಸಾಧನೆಯಿಂದ ಹರ್ಷ. ಪರೀಕ್ಷೆ, ಸಂದರ್ಶನದಲ್ಲಿ ಯಶಸ್ಸು, ಬಂಗಾರದಲ್ಲಿ ಬಂಡವಾಳ ಹೂಡಿಕೆಯಿಂದ ಲಾಭ. ವಿವಾಹ ಯೋಗ್ಯರಿಗೆ ನಿಶ್ಚಿತಾರ್ಥ ಆಗುವ ಸಂಭವ. ಸ್ತ್ರೀಯರು ಪ್ರಸಾಧನ ವಸ್ತು ಖರೀದಿಗೆ ಹೆಚ್ಚಿನ ಹಣ ವ್ಯಯಿಸುವರು.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-3

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನೀವಂದುಕೊಂಡದ್ದೇ ಒಂದು, ಆಗುತ್ತಿರುವುದೇ ಮತ್ತೊಂದು, ಸ್ವಯಂಕೃತಾಪರಾಧಗಳಿಂದ ಚಿಂತೆಗೀಡಾಗುವಿರಿ. ಉದ್ಯಮಪತಿಗಳಿಗೆ ನೌಕರ ವರ್ಗದವರ ಅಸಹಕಾರದಿಂದ ನಷ್ಟ, ಜೀವನದ ಸಾಧಕ-ಬಾಧಕಗಳ ಬಗ್ಗೆ ಅರಿವು ಉಂಟಾಗದಿರಲು ಶನಿ-ಗುರು ಗ್ರಹಗಳೇ ಕಾರಣ. ಆರೋಗ್ಯದಲ್ಲಿಯೂ ವ್ಯತ್ಯಯ ಉಂಟಾದೀತು. ವಾರಾಂತ್ಯಕ್ಕೆ ನಂಬಿದ ದೈವ ನಿಮ್ಮ ಕೈ ಬಿಡದು.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-4

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಗುರು ಜನರ ಸಹಾಯದಿಂದ ಕಠಿಣ ಕೆಲಸ ಸುಖಾಂತ್ಯವಾಗುವುದು. ಅಂದುಕೊಂಡ ಕೆಲಸ ಸುಗಮವಾಗಿ ಸಾಗುವುದು. ನಿರೀಕ್ಷಿತ ಹಣ ಸಮಯಕ್ಕೆ ಸರಿಯಾಗಿ ಕೈ ಸೇರುವುದು. ದೇವತಾ ಉತ್ಸವಾದಿಗಳಲ್ಲಿ ಭಾಗಿಯಾಗುವಿರಿ. ಲೆಕ್ಕ ಪರಿಶೋಧಕರಿಗೆ ಉತ್ತಮ ಫೈಲ್‌ಗಳು ದೊರೆಯುವುದು. ಶನಿದೇವ ಶುಭನಿಲ್ಲದ ಕಾರಣ ಆಸ್ತಿ ವಿಚಾರಗಳು ನಿಮ್ಮ ಮನಸ್ಸಿನಂತೆ ಇತ್ಯರ್ಥವಾಗದು.

ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆದಿಗೆ ಶುಭ ಕಾರ್ಯಕ್ಕೆ ಪ್ರೇರಣೆ. ನವ ಉಲ್ಲಾಸ. ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆ. ಹೊಸ ವ್ಯಾಪಾರ ಸ್ಥಾಪನೆಯ ಪ್ರಯತ್ನದಲ್ಲಿ ಪ್ರಗತಿ. ವಾರದ ಉತ್ತರಾರ್ಧದಲ್ಲಿ ಸಂಬಂಧಿಕರಲ್ಲಿ ಕಲಹ. ಉದ್ಯಮಪತಿಗಳಿಗೆ ನೌಕರರ ಅಸಹಕಾರದಿಂದ ನಷ್ಟ, ವಾಹನ ಸಂಚಾರ ಸಮಯದಲ್ಲಿ ಜಾಗೃತರಾಗಿರಿ. ಸ್ತ್ರೀಯರು ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡಿ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)

ಸಾಡೇಸಾತಿ ಶನಿದೇವನ ಪ್ರಭಾವದ ನಡುವೆಯೂ ನಿಮಗೆ ದೇವಗುರು ಬೃಹಸ್ಪತಿಯ ರಕ್ಷೆ ಇದೆ. ಉದ್ಯೋಗ ವ್ಯವಹಾರಗಳಲ್ಲಿ ಗಣನೀಯ ಪ್ರಗತಿಯನ್ನು ಹೊಂದುವಿರಿ. ಹೊಸ ವಿಷಯ ಅರಿಯಬೇಕೆಂಬ ನಿಮ್ಮ ಜ್ಞಾನದಾಹ ನಿಮ್ಮ ಭವಿಷ್ಯ ಉಜ್ವಲಗೊಳಿಸಲು ಸಹಾಯಕವಾಗಲಿದೆ. ಉದ್ಯೋಗಾಕಾಂಕ್ಷಿಗಳಿಗೆ ನಿರಾಶೆ ಹೊಂದುವ ಅಗತ್ಯವಿಲ್ಲ. ಆರೋಗ್ಯದಲ್ಲಿ ದಿಢೀರ್ ವ್ಯತ್ಯಾಸವಾಗಬಹುದು.

ಶ್ರೀ ಶ್ರೀಕಂಠೇಶ್ವರ ದರ್ಶನ. ಶುಭ ಸಂಖ್ಯೆ-6

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ಚಂದ್ರಗ್ರಹ ನಿಮ್ಮ ಪರವಿದೆ. ಸ್ನೇಹಿತರಿಂದ ಸಹಾಯ ದೊರೆಯಲಿದೆ. ಹಣಕಾಸಿನ ಕೊರತೆ ಏನೂ ಕಾಣದು. ಸ್ತ್ರೀಯರೊಬ್ಬರ ಸಹಾಯ ದೊರೆಯುವುದು. ಕೃಷಿಕರಿಗೆ ಉತ್ತಮ ಬೆಲೆ ದೊರೆತು ಮುಖದಲ್ಲಿ ಸಂತಸ. ಸರ್ಕಾರಿ ನೌಕರರು ತಮ್ಮ ಮೇಲು ಅಧಿಕಾರಿಗಳ ಜೊತೆ ವಿಧೇಯತೆಯಿಂದ ವರ್ತಿಸುವುದು ನಿಮ್ಮ ಅಭ್ಯುದಯಕ್ಕೆ ಕಾರಣವಾಗುವುದು. ವಾತ ಪ್ರಕೋಪ ಕಾಡುವುದು.

ಶ್ರೀ ಶಿವಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-4

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವ್ಯಾಪಾರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗಿದರೂ, ವಿವಿಧ ಮೂಲಗಳಿಂದ ಹಣ ದೊರೆತು ಕಾರ್ಯಾನುಕೂಲವಾಗುವುದು. ಆಸ್ತಿ ವಿಲೇವಾರಿ ವಿಷಯದಲ್ಲಿ ಕಾನೂನು ತಜ್ಞರ ಸಮಾಲೋಚನೆಯ ಅಗತ್ಯವಿದೆ. ಗುರು ಬಲದ ಕೊರತೆ ಇರುವ ಕಾರಣ ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ಕೇಳಿಸಿಕೊಂಡಿದ್ದಕ್ಕೆಲ್ಲಾ ಮಹತ್ವ ಕೊಡಬೇಡಿ. ‘ಜಾಣ ಕಿವುಡು ಬುದ್ಧಿವಂತರ ಲಕ್ಷಣ’.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ-9

ತಂಬಾಕು ದರ ಕುಸಿತ ಹಿನ್ನೆಲೆ

ಕಟ್ಟೆಮಳಲವಾಡಿಯಲ್ಲಿ ರೈತರ ಸಮಸ್ಯೆ ಆಲಿಸಿದ ಯದುವೀರ್

ಕಟ್ಟೆಮಳಲವಾಡಿ, ನ.9– ತಂಬಾಕು ದರ ಕುಸಿತ ಹಿನ್ನೆಲೆಯಲ್ಲಿ ತಾಲೂಕಿನ ಕಟ್ಟೆಮಳಲವಾಡಿ ಡಿ.ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಗೆ ಶನಿವಾರ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ ಪರಿಶೀಲಿಸಿ, ರೈತರ ಸಮಸ್ಯೆಗಳನ್ನು ಆಲಿಸಿದರು.

ನಂತರ ಮಾತನಾಡಿದ ಸಂಸದರು, ಅತೀ ಶೀಘ್ರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ತಂಬಾಕಿಗೆ ಉತ್ತಮ ಬೆಂಬಲ ಬೆಲೆ ದೊರಕುವಂತೆ ಕ್ರಮ ವಹಿಸಲಾಗುವುದು. ತಂಬಾಕು ದರ ಕಡಿಮೆ ಮಾಡುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಹೀಗಾಗಿ ತಂಬಾಕು ಖರೀದಿ ಕಂಪನಿಗಳು ದರ ಇಳಿಸಬಾರದು. ತಂಬಾಕು ಮಾರುಕಟ್ಟೆಯಲ್ಲಿ ಖರೀದಿ ಮಾಡುವ ಕಂಪನಿಗಳು ಕ್ವಾಲಿಟಿ ತಂಬಾಕು ಜೊತೆ ಲೋ ಗ್ರೇಡ್ ತಂಬಾಕನ್ನೂ ಖರೀದಿ ಮಾಡಲೇಬೇಕು. ಇಲ್ಲದಿದ್ದರೆ ಬೇಡಿಕೆ ಬರುವವರೆಗೆ ಹರಾಜು ಮಾರುಕಟ್ಟೆಗೆ ಬಂದ್ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ ಅವರು ಇನ್ನು ಎರಡ್ಮೂರು ದಿನದಲ್ಲಿ ಮಾರುಕಟ್ಟೆ ಪ್ರಾರಂಭವಾದಾಗ ಇದ್ದ ಬೆಲೆ ನೀಡಬೇಕು. ರೈತರ ಸಮಸ್ಯೆ ಗಮನದಲ್ಲಿಟ್ಟು ಕೊಂಡು ರೈತರ ಪರ ಹೋರಾಟಕ್ಕೆ ಸಿದ್ಧ ಎಂದರು.

ತಂಬಾಕು ಖರೀದಿಯಲ್ಲಿ ಬಿಸಿನೆಸ್ ಮಾಡುವ ತಜ್ಞರಿದ್ದು, ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರೆ ರೈತರಿಗೆ ಉತ್ತಮ ದರ ಸಿಗುತ್ತಿಲ್ಲ. ಈಗಾಗಲೇ ಮಾರುಕಟ್ಟೆ ಒಂದು ತಿಂಗಳು ವಿಳಂಬವಾಗಿ ಪ್ರಾರಂಭವಾಗಿದ್ದು, ರೈತರು ತಂಬಾಕು ಬೆಳೆಯಲು ಬ್ಯಾಂಕುಗಳಲ್ಲಿ ಸಾಲ ಮಾಡಿದ್ದು ಒಂದು ತಿಂಗಳು ಹೆಚ್ಚಾಗಿ ಬಡ್ಡಿ ಕಟ್ಟಬೇಕಾಗಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು, ಕೇಂದ್ರ ಸಚಿವರೊಂದಿಗೆ ರೈತರ ಪರ ಮಾತನಾಡುತ್ತೇನೆ. ತಂಬಾಕು ಮಂಡಳಿ ರೈತರ ಜೊತೆ ನೇರ ಸಂಪರ್ಕಕ್ಕೆ ಸಿಗುವ ರೀತಿ ಮಾಡುವುದು ನನ್ನ ಗುರಿ ನನ್ನ ಕರ್ತವ್ಯ ಎಂದರು.



ಸಂಸದ ಯದುವೀರ್ ರೈತರ ಸಮಸ್ಯೆಗಳನ್ನು ಆಲಿಸಿದರು.

ಇದೇ ವೇಳೆ ಸ್ಥಳದಲ್ಲಿದ್ದ ರೈತರು ತಂಬಾಕು ಬ್ಯಾರೆನ್ ಕುಸಿದು ಬಿದ್ದರೆ, ಲೈಸನ್ಸ್ ಹೊಂದಿರುವ ರೈತ ನಿಧನರಾದರೆ 50 ಸಾವಿರ ಬದಲು 5 ಲಕ್ಷ ಪರಿಹಾರ ನೀಡಬೇಕು. ಆಂಧ್ರಪ್ರದೇಶದಲ್ಲಿ ಈ ವರ್ಷ ನೀಡಿರುವ ಬೆಲೆ ನೀಡಬೇಕು. ಮಂಡಳಿಗೆ ತಂಬಾಕು ಖರೀದಿಸಲು ನೋಂದಾಯಿತ ಕಂಪನಿಗಳು ಹರಾಜಿನಲ್ಲಿ ಭಾಗವಹಿಸಬೇಕು. ತಂಬಾಕು ಮಾರುಕಟ್ಟೆ ಆವರಣದಲ್ಲಿ ಮೂಲ ಸೌಕರ್ಯ ಒದಗಿಸಬೇಕು. ರೈತರ ತಂಬಾಕನ್ನು ಬಿಡ್ ಮಾಡಿದ ನಂತರ ನೋಬಿಡ್ ಮಾಡಬಾರದು. ಅನಧಿಕೃತ ತಂಬಾಕು ಬೆಳೆಗಾರರಿಗೆ ಲೈಸನ್ಸ್ ನೀಡಬೇಕು. ಸೇರಿದಂತೆ ತಮ್ಮ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

> ಈ ಬಾರಿ ಉತ್ತಮ ದರ್ಜೆ ತಂಬಾಕಿಗಿಂತ ಲೋಗ್ರೇಡ್ ತಂಬಾಕು ಹೆಚ್ಚಾಗಿದ್ದರಿಂದ ದರ ಕುಸಿತ ಕಂಡಿದೆ. ಜೊತೆಗೆ ವಿದೇಶಿ ಕಂಪನಿಗಳು ಸ್ಯಾಂಪಲ್ ತೆಗೆದುಕೊಂಡು ಹೋಗಿವೆ. ಈಗಾಗಲೇ ಹಲವು ವಿದೇಶಿ ಖರೀದಿದಾರರು ತಂಬಾಕನ್ನು ವೀಕ್ಷಿಸುತ್ತಿದ್ದಾರೆ. ಇವರು ಖರೀದಿಸಲು ಒಪ್ಪಿಗೆ ನೀಡಿದ ದಿನವೇ ರೈತರಿಗೆ ಉತ್ತಮ ಬೆಲೆ ಸಿಗಲಿದೆ
> - ಲಕ್ಷ್ಮಣರಾವ್, ತಂಬಾಕು ಪ್ರಾದೇಶಿಕ ವ್ಯವಸ್ಥಾಪಕ

ತಂಬಾಕು ಬೆಳೆಗಾರರ ಹಿತರಕ್ಷಣಾ ಸಮಿತಿ ಗೌರವಾಧ್ಯಕ್ಷ ಉಂಡವಾಡಿ ಚಂದ್ರೇಗೌಡ, ಸಮಿತಿ ಅಧ್ಯಕ್ಷ ಮೋದೂರು ತಂಬಾಕು ರೈತ ಹರವೆ ಮೂರ್ತಿ, ಕಟ್ಟೆಮಳಲವಾಡಿ ರವಿಪ್ರಸಾದ್, ನಿಲುವಾಗಲು ಪ್ರಭಾಕರ್, ಶೀರೆನಹಳ್ಳಿ ಬಸವರಾಜೇಗೌಡ, ನಿಜಗನಹಳ್ಳಿ ಬಸವರಾಜಪ್ಪ, ಮೋದೂರು ಮಹೇಶ್ ಸೇರಿದಂತೆ ಹಲವರು ತಮ್ಮ ಸಮಸ್ಯೆಗಳನ್ನು ಸಂಸದರ ಗಮನಕ್ಕೆ ತಂದರು.

ಸಭೆಯಲ್ಲಿ ತಂಬಾಕು ಮಂಡಳಿ ಸದಸ್ಯರಾದ ಹಬ್ಬನಕುಪ್ಪೆ ದಿನೇಶ್, ಪಿರಿಯಾಪಟ್ಟಣ ಬಸವರಾಜ್, ಕಾಂತರಾಜು, ಹುಣಸೂರು ನಗರಸಭಾ ಸದಸ್ಯ ಗಣೇಶ್ ಕುಮಾರಸ್ವಾಮಿ, ಹಾರಂಗಿ ಮಹಾಮಂಡಲದ ಉಪಾಧ್ಯಕ್ಷ ಹನಗೂಡು ಮಂಜುನಾಥ್, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ, ಹಿರೀಕ್ಯಾತನಹಳ್ಳಿ ಸತೀಶ್, ಹರಾಜು ಮಾರುಕಟ್ಟೆಯ ಅಧೀಕ್ಷರಾದ ಸಿದ್ದರಾಜು, ಬ್ರಿಜ್ ಭೂಷಣ್, ಮೀನಾ ಸೇರಿದಂತೆ ವಿವಿಧ ಕಂಪನಿಯ ಖರೀದಿದಾರರು ಇದ್ದರು.

ಸಿ.ಪಿ.ಯೋಗೇಶ್ವರ್ ಪರ ಸಂಸದ ಸುನೀಲ್ ಬೋಸ್ ಮತಯಾಚನೆ



ಸಿ.ಪಿ.ಯೋಗೇಶ್ವರ್ ಪರ ಸಂಸದ ಸುನೀಲ್ ಬೋಸ್ ಮತಯಾಚಿಸಿದರು.

ಚನ್ನಪಟ್ಟಣ, ನ.9– ದೇಶದ ಜನರನ್ನು ಸಮಾನವಾಗಿ ಕಂಡು ಎಲ್ಲರ ರಕ್ಷಣೆ ಖಾತರಿಪಡಿಸಿದ ಸಂವಿಧಾನವನ್ನು ಬದಲಾಯಿಸಬೇಕು ಎಂಬ ಉದ್ದೇಶ ಹೊಂದಿರುವ ಬಿಜೆಪಿ ಮತ್ತು ಜೆಡಿಎಸ್ ಎನ್‌ಡಿಎ ಕೂಟವನ್ನು ಸೋಲಿಸಬೇಕು ಎಂದು ಸಂಸದ ಸುನೀಲ್ ಬೋಸ್ ಕರೆ ನೀಡಿದರು.

ಉಪ ಚುನಾವಣೆ ಅಂಗವಾಗಿ ತಾಲೂಕಿನ ಗಾಂಧಿಗ್ರಾಮ, ಬೆಳಕೆರೆ, ಕುಕ್ಕೂರು ದೊಡ್ಡಿ, ಮಾಳೂರು ಪಟ್ಟಣ, ಎಸ್.ಎಂ.ಹಳ್ಳಿ, ಕುಡ್ಲೂರು, ಭೈರಾಪಟ್ಟಣ, ಹೊಟ್ಟಿಗನ ಹೊಸಹಳ್ಳಿ, ಚಕ್ಕೆರೆ, ಸಂಕಲಗೆರೆ, ಮತ್ತಿಕೆರೆ ಹಾಗೂ ಶೆಟ್ಟಿಹಳ್ಳಿ ಸೇರಿದಂತೆ ವಿವಿಧೆಡೆ ಪ್ರಚಾರ ನಡೆಸಿದ ಅವರು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರ ಮತಯಾಚಿಸಿದರು.

ಸಿ.ಪಿ.ಯೋಗೇಶ್ವರ್ ಸ್ಥಳೀಯ ಅಭ್ಯರ್ಥಿಯಾಗಿದ್ದು, ಚನ್ನಪಟ್ಟಣದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. 2 ಬಾರಿ ಗೆದ್ದರೂ, ಯಾವುದೇ ಕೆಲಸ ಮಾಡದೇ ಕ್ಷೇತ್ರ ತೊರೆದು ಹೋಗಿರುವ ಕುಮಾರಸ್ವಾಮಿ ಅವರು ಕಣ್ಣೀರಿನ ಹೆಸರಲ್ಲಿ ಮಗನ ಪರವಾಗಿ ಮತ ಕೇಳುತ್ತಿದ್ದು, ಕಣ್ಣೀರಿಗೂ ಜನರ ಪರವಾದ ಕೆಲಸಕ್ಕೂ ಯಾವುದೇ ಸಂಬಂಧ ಇಲ್ಲ ಎಂಬ ಸಂಗತಿ ಅರಿತು ಜನರು ಮತ ಚಲಾಯಿಸಬೇಕು. ಸ್ಥಳೀಯ ನಾಯಕನಾಗಿ ಕ್ಷೇತ್ರವನ್ನು ಚೆನ್ನಾಗಿ ಬಲ್ಲ ಯೋಗೇಶ್ವರ್ ಅವರು ಜನಪರ ನಿಲುವನ್ನು ಹೊಂದಿದ್ದು, ಅವರನ್ನು ಗೆಲ್ಲಿಸುವ ಮೂಲಕ ಅವರ ಕೆಲಸಗಳಿಗೆ ಗೌರವ ಸಲ್ಲಿಸಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮಿ ನಾರಾಯಣ, ಪ್ರಥಮ ದರ್ಜೆ ಗುತ್ತಿಗೆದಾರ ಕಗ್ಗಲಿಪುರ ಕೆಎಂ ಮಧುಕುಮಾರ್, ರಾಘವೇಂದ್ರ, ಕನ್ನಾಯಕನಹಳ್ಳಿ ಕುಮಾರ್, ಸಬಿಲ್ ಖಾನ್, ಅಬ್ದುಲ್ ಅತಿಕ್ ಭಾಗವಹಿಸಿದ್ದರು.

ಕಾರು, ಬೈಕ್, ಸೈಕಲ್‌ಗೆ ಬೆಂಕಿ ಹಚ್ಚಿದ್ದ ಪ್ರಕರಣ

ಮೂವರು ಆರೋಪಿಗಳ ಬಂಧನ



ಚಂದ್ರೇಗೌಡ



ಕುಮಾರ



ಮಂಜು

ಹುಣಸೂರು, ನ.9– ಹಳೇ ದ್ವೇಷದ ಹಿನ್ನೆಲೆಯಲ್ಲಿ ತಾಲೂಕಿನ ಮುತ್ತುರಾಯನ ಹೊಸಳ್ಳಿಯಲ್ಲಿ ಕಾರು, ಬೈಕ್, ಸೈಕಲ್‌ಗೆ ಬೆಂಕಿ ಹಚ್ಚಿದ್ದ ಮೂವರು ಆರೋಪಿಗಳನ್ನು ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುತ್ತುರಾಯನ ಹೊಸಳ್ಳಿ ಗ್ರಾಮದ ನಿವಾಸಿ ಚಂದ್ರೇಗೌಡ(42), ಕುಮಾರ(31) ಹಾಗೂ ಮೈಸೂರು ತಾಲೂಕು ಹೊಸ ಆನಂದೂರು ಗ್ರಾಮದ ಮಂಜು(29) ಬಂಧಿತ ಆರೋಪಿಗಳು.

ವಿವರ: ಗ್ರಾಮದ ನಿವಾಸಿ ಮನು ಕುಮಾರ್ ಅವರು ಅ.16ರಂದು ಮನೆಗೆ ಬೀಗ ಹಾಕಿ ಕುಟುಂಬ ಸಮೇತರಾಗಿ ದಸರಾ ಲೈಟಿಂಗ್ಸ್ ನೋಡಲು ಮೈಸೂರಿಗೆ ಹೋಗಿದ್ದ ವೇಳೆ ಹಳೇ ದ್ವೇಷದ ಹಿನ್ನಲೆಯಲ್ಲಿ ಚಂದ್ರೇಗೌಡ ಹಾಗೂ ಆತನ ಭಾಮೈದ ಮಂಜು ಹಾಗೂ ಕುಮಾರ್ ಮನೆಗೆ ಹಾಗೂ ಮನೆ ಮುಂದೆ ನಿಲ್ಲಿಸಿದ್ದ ಬೈಕ್, ಕಾರು, ಸೈಕಲ್‌ಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದರು. ಈ ವೇಳೆ ಮನೆ ಬಾಗಿಲು, ಕಿಟಕಿಗಳು, ಸಿಸಿ ಕ್ಯಾಮರಾ, ಮನೆಯ ವಿದ್ಯುತ್ ಮೀಟರ್, ವೈಯರ್, ಮನೆಯ ಶೀಟ್ ಸೇರಿದಂತೆ ಅಂದಾಜು 3.15 ಲಕ್ಷ ರೂ. ನಷ್ಟ ಸಂಭವಿಸಿತ್ತು. ಈ ಸಂಬಂಧ ಮನೆ ನಿವಾಸಿ ಮನುಕುಮಾರ್ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ಸಂಬಂಧ ಎಸ್ಪಿ ವಿಷ್ಣುವರ್ಧನ್, ಡಿವೈಎಸ್‌ಪಿ ಗೋಪಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ನೇತೃತ್ವದಲ್ಲಿ ಎಸ್‌ಐ ರಾಧ, ಸಿಬ್ಬಂದಿಗಳಾದ ಮಂಜುನಾಥ್, ಪ್ರಕಾಶ್, ಮಹದೇವಮ್ಮ, ಹರೀಶ್, ಇಮ್ರಾನ್ ಷರೀಫ್ ಅವರುಗಳನ್ನು ಒಳಗೊಂಡ ತಂಡ ರಚಿಸಿ ಆರೋಪಿಗಳ ಬಂಧನಕ್ಕೆ ಬಲೆ ಬೀಸಲಾಗಿತ್ತು. ಬಳಿಕ ತನಿಖೆ ಕೈಗೊಂಡ ಪೊಲೀಸರು ಬಲ್ಲ ಮೂಲಗಳ ಮಾಹಿತಿ ಮೇರೆಗೆ ಆರೋಪಿಗಳನ್ನು ಬಂಧಿಸಿ ತನಿಖೆಗೊಳಪಡಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಈ ಹಿಂದೆ ಚಂದ್ರೇಗೌಡ ಹಾಗೂ ಮನ ಕುಮಾರ್ ಅವರ ನಡುವೆ ಗಲಾಟೆ ನಡೆದಿದ್ದು, ಇಬ್ಬರ ವಿರುದ್ಧವೂ ಪ್ರಕರಣ ದಾಖಲಾಗಿತ್ತು. ಹೀಗಾಗಿ ಹಳೇ ದ್ವೇಷದ ಹಿನ್ನೆಲೆಯಲ್ಲಿ ಈ ಕೃತ್ಯ ಎಸಗಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇಂದು ವಿದ್ಯುತ್ ವ್ಯತ್ಯಯ

ನಂಜನಗೂಡು, ನ9– ನಂಜನಗೂಡು ವಿದ್ಯುತ್ ವಿತರಣಾ ಕೇಂದ್ರ ಮತ್ತು ತಾಂಡವಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ನ10ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ನಂಜನಗೂಡು ಪಟ್ಟಣ, ಕಲ್ಲಹಳ್ಳಿ ಕೈಗಾರಿಕಾ ಪ್ರದೇಶ, ನೆಸ್ಲೆ, ಎಟಿ&ಎಸ್, ಮ್ಯಾಕ್ಸ್ ಫಾರ್ಮ್ ಕಾರ್ಖಾನೆಗಳು ಮತ್ತು ದೇವಿರಮ್ಮನಹಳ್ಳಿ, ದೇಬೂರು, ಹಂಡುವಿನಹಳ್ಳಿ, ತಾಂಡವಪುರ, ಚಿಕ್ಕಯ್ಯನ ಛತ್ರ, ಮರಳೂರು ಗ್ರಾಮಗಳು, ತಾಂಡ್ಯ ಕೈಗಾರಿಕಾ ಪ್ರದೇಶದ ಬಾಲಾಜಿ, ಇಂಡಸ್, ಗಣಪತಿ ಕಾರ್ಖಾನೆಗಳು ಹಾಗೂ ಕೆಂಪಿಸಿದ್ದನಹುಂಡಿ, ಹುಳಿಮಾವು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕೆಜಿ ಕೊಪ್ಪಲಿನಲ್ಲಿ ಅನ್ನಸಂತರ್ಪಣೆ

ಮೈಸೂರು,ನ.9(ಪಿಎಂ)– ಮೈಸೂರಿನ ಕನ್ನೇಗೌಡನಕೊಪ್ಪಲು (ಕೆಜಿ ಕೊಪ್ಪಲು) ಶ್ರೀ ಮಾರಮ್ಮನ ದೇವಾಲಯದ 17ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ಪ್ರಯುಕ್ತ ಭಾನುವಾರ ಮಧ್ಯಾಹ್ನ 1 ಗಂಟೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ದೇವಾಲಯ ಆವರಣದಲ್ಲಿ ಅನ್ನಸಂತರ್ಪಣೆ ನಡೆಯಲಿದ್ದು, ಇದಲ್ಲದೆ, ವಿವಿಧ ಪೂಜಾ ವಿಧಿವಿಧಾನ ಸಹ ಜರುಗಲಿದೆ. ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ಪೂಜೆ ಹಾಗೂ ದುರ್ಗಾ ಹೋಮ, ಸಪ್ತಮಾತೃಕಾ ಹೋಮ, ಪೂರ್ಣಾಹುತಿ, ಕಳಾ ಹೋಮ, ಕುಂಭಾಭಿಷೇಕ ಅಲಂಕಾರ, ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ್ ವಿನಿಯೋಗ ಸಹ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀಗುರುಕಂಬಳೇಶ್ವರ ಶಾಲೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ

ನಂಜನಗೂಡು, ನ.9– ತಾಲೂಕಿನ ಶ್ರೀಮಲ್ಲನಮೂಲೆ ಮಠಕ್ಕೆ ಸೇರಿದ ಬಸವನಪುರದ ಶ್ರೀಗುರುಕಂಬಳೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನವನ್ನು ಮಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ನಂತರ ಮಾತನಾಡಿದ ಸ್ವಾಮೀಜಿ, ಮಕ್ಕಳ ಭವಿಷ್ಯ ರೂಪಿಸುವ ಸ್ಥಳವೆಂದರೆ ಶಾಲೆ. ಮಕ್ಕಳು ನಾಳಿನ ಭರವಸೆ. ಆದ್ದರಿಂದ ಅವರಿಗೆ ವಸ್ತು ಪ್ರದರ್ಶನಗಳ ಮೂಲಕ ವಿಜ್ಞಾನದ ಬಗ್ಗೆ ಅರಿವು ಮೂಡಿಸಬೇಕು. ವಿಜ್ಞಾನ ವಸ್ತು ಪ್ರದರ್ಶನಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಉಂಟು ಮಾಡುತ್ತದೆ. ಅವರ ಆಲೋಚನೆ ಮತ್ತು ತಾರ್ಕಿಕ ಶಕ್ತಿ ಹೆಚ್ಚಿಸುತ್ತದೆ. ಅವು ಮಕ್ಕಳನ್ನು ಸೃಜನಶೀಲ ಮತ್ತು ಜಿಜ್ಞಾಸೆಯನ್ನಾಗಿ ಮಾಡಬಹುದು. ಮಗುವಿಗೆ ತನ್ನ ಕೈಗಳಿಂದ ಯೋಜನೆ ಅಥವಾ ಕೆಲಸದ ಮಾದರಿ ಮಾಡಲು ಅವಕಾಶ ಸಿಗುತ್ತದೆ. ಈ ಪ್ರದರ್ಶನಗಳು ವಿದ್ಯಾರ್ಥಿ ಸಮುದಾಯದಲ್ಲಿ ಆರೋಗ್ಯಕರ ಸ್ಪರ್ಧೆ ಪ್ರೋತ್ಸಾಹಿಸುತ್ತದೆ ಎಂದರು.



ಶ್ರೀಗುರುಕಂಬಳೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ ನಡೆಯಿತು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಡಿ.ಎಸ್. ಸದಾಶಿವಮೂರ್ತಿ, ಬಿ.ಎಂ.ಪ್ರಭುಸ್ವಾಮಿ ವಸ್ತು ಪ್ರದರ್ಶನದ ಕೊಠಡಿಗಳನ್ನು ಉದ್ಘಾಟಿಸಿ ಭಾಗವಹಿಸಿದ್ದ ಮಕ್ಕಳಿಗೆ ಶುಭ ಕೋರಿದರು.

ವಿಜ್ಞಾನ ವಸ್ತು ಪ್ರದರ್ಶನವನ್ನು ತಾಂಡವಪುರ ಕ್ಲಸ್ಟರ್‌ನ ಕೆ.ಎಸ್.ಹುಂಡಿ, ತಾಂಡವಪುರ, ಬಂಚಳ್ಳಿಹುಂಡಿ, ಅಡಕನಹಳ್ಳಿಹುಂಡಿ, ಬಸವನಪುರದ ಸರ್ಕಾರಿ ಶಾಲೆ ವಿದ್ಯಾರ್ಥಿಗಳು ವೀಕ್ಷಿಸಿದರು.

ವಸ್ತು ಪ್ರದರ್ಶನದಲ್ಲಿ ಮಾನವನ ಹೃದಯ, ಜೀರ್ಣಾಂಗ ವ್ಯೂಹ, ಸೌರ ಶಕ್ತಿ, ಗಿಡಗಳ ಉಪಯೋಗಗಳು, ಅನುಭವ ಮಂಟಪ, ನೀರಿನ ಕಾರಂಜಿಗಳು, ಜಗತ್ತಿನ ಏಳು ಅದ್ಭುತಗಳು, ಲೇಸರ್ ಹೋಂ, ಸೆಕ್ಯೂರಿಟಿ ಅಲಾರಾಮ್, ಮೈಕ್ರೋಸ್ಕೋಪ್, ಅಯೋಧ್ಯೆಯ ರಾಮ ಮಂದಿರ ಸೇರಿದಂತೆ 196 ಮಾದರಿಗಳನ್ನು ವಿದ್ಯಾರ್ಥಿಗಳು ವೀಕ್ಷಣೆಗೆ ಇಟ್ಟಿದ್ದರು.

ತೀರ್ಪುಗಾರರಾಗಿ ಭೌತಶಾಸ್ತ್ರ ಉಪನ್ಯಾಸಕ ಜಿ.ಷಡಕ್ಷರಿಸ್ವಾಮಿ ಹಾಗೂ ಗಣಿತ ಉಪನ್ಯಾಸಕ ಟಿ.ಎನ್.ಸುರೇಶ್ ಪ್ರಿ–ಕೆಜಿ ಯಿಂದ 8ನೇ ತರಗತಿ ಮಕ್ಕಳಿಗೆ ತರಗತಿವಾರು 3 ಬಹುಮಾನಗಳನ್ನು ಘೋಷಿಸಿದರು. ಈ ವೇಳೆ ಮುಖ್ಯ ಶಿಕ್ಷಕಿ ಮಹೇಶ್ವರಿ, ಶಿಕ್ಷಕರಾದ ಭಾನುಪ್ರಿಯ, ಅನಿತಾ, ನೇತ್ರ, ಬಸಮ್ಮಣ್ಣಿ, ದೈಹಿಕ ಶಿಕ್ಷಕ ಮಹದೇವಶೆಟ್ಟಿ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಸ್ಮಶಾನ ಜಾಗ ವಕ್ಫ್ ಬೋರ್ಡ್‌ಗೆ ಖಾತೆ

ಸಮಸ್ಯೆ ಬಗೆಹರಿಸುವಂತೆ ರಂಗಸಮುದ್ರ ಗ್ರಾಮಸ್ಥರ ಒತ್ತಾಯ



ತಿ.ನರಸೀಪುರ, ನ.9– ರಾಜ್ಯದ ಹಲವೆಡೆ ವಕ್ಫ್ ಪ್ರಕರಣಗಳು ತೀವ್ರ ಚರ್ಚೆಗೆ ಮತ್ತು ಪ್ರತಿಭಟನೆಗೆ ಗ್ರಾಸವಾಗಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಕ್ಷೇತ್ರ ವರುಣದ ರಂಗಸಮುದ್ರ ಗ್ರಾಮದಲ್ಲಿ ಸ್ಮಶಾನ(ಸರ್ಕಾರಿ ಜಾಗ) ಜಾಗವು ಮುಸಲ್ಮಾನರ ಖಬರಸ್ತಾನ್ ಸುನ್ನಿ ವಕ್ಫ್ ಆಸ್ತಿ ಎಂದು ಆರ್‌ಟಿಸಿಯಲ್ಲಿ ನಮೂದಾಗಿರುವುದು ಚರ್ಚೆಗೆ ಕಾರಣವಾಗಿದೆ.

ಕಸಬಾ ಹೋಬಳಿ ರಂಗಸಮುದ್ರದ ಸ್ಮಶಾನ ಜಾಗ ಕಪ್ಪಯ್ಯನ ತೋಪು ಎಂದು ಸರ್ವೆ ನಂ.257ರಲ್ಲಿ 19 ಗುಂಟೆ ಜಮೀನು 2019–20ರ ಆರ್‌ಟಿಸಿಯಲ್ಲಿ ನಮೂದಾಗಿತ್ತು. ಆದರೆ 2024–25ನೇ ಸಾಲಿನ ಆರ್‌ಟಿಸಿಯಲ್ಲಿ ಮುಸಲ್ಮಾನರ ಖಬರಸ್ತಾನ್ ಸುನ್ನಿ ವಕ್ಫ್ ಆಸ್ತಿ ಎಂದು ನಮೂದಾಗಿರುವುದು ವಾಟ್ಸಾಪ್‌ಗಳಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕವಾಗಿ ಚರ್ಚೆ ಆರಂಭಗೊಂಡಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ವಿವಾದಕ್ಕೆ ತೆರೆ ಎಳೆಯಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ರಂಗಸಮುದ್ರ ಗ್ರಾಮದ ರುದ್ರಭೂಮಿಯಾಗಿರುವ ಈ ಜಾಗದಲ್ಲಿ ಸಮಾಧಿಗಳು ಕೂಡ ಇವೆ. ಗ್ರಾಮದಲ್ಲಿರುವ ಮುಸಲ್ಮಾನರಿಗೆ ಪ್ರತ್ಯೇಕ ರುದ್ರಭೂಮಿ ಇದೆ. ರಂಗಸಮುದ್ರ ಗ್ರಾಮದ ಸಿ.ಗಿರಿಧರ್ ಸೇರಿದಂತೆ ಕೆಲ ಗ್ರಾಮಸ್ಥರು ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿ, ಖಬರಸ್ತಾನ್ ಸುನ್ನಿ ವಕ್ ಆಸ್ತಿ ಎಂದು ಆರ್‌ಟಿಸಿಯಲ್ಲಿ ನಮೂದಾಗಿರುವುದನ್ನು ತೆರವು ಗೊಳಿಸಿ, ರಂಗಸಮುದ್ರ ಗ್ರಾಮಸ್ಥರ ಸ್ಮಶಾನ ಆಸ್ತಿ ಎಂದು ಆರ್‌ಟಿಸಿಯಲ್ಲಿ ನಮೂದಿಸಬೇಕೆಂದು ಕೋರಿದ್ದಾರೆ.

> ರಂಗಸಮುದ್ರ ಸ್ಮಶಾನ 1965ರ ಗೆಜೆಟ್ ನೋಟಿಫಿಕೇಷನ್ ಪ್ರಕಾರ ಮೈಸೂರು ಉಪವಿಭಾಗಾಧಿಕಾರಿಗಳು ಕಪ್ಪಯ್ಯನ ತೋಪು ಜಾಗವನ್ನು ಖಬರಸ್ತಾನ್ ಸುನ್ನಿ ವಕ್ಫ್ ಆಸ್ತಿ ಎಂದು ಆರ್‌ಟಿಸಿಯಲ್ಲಿ ನಮೂದಿಸಿದ್ದಾರೆ. ಈ ಬಗ್ಗೆ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ವರದಿಯೊಂದಿಗೆ ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಡಲಾಗಿದೆ. ಜಿಲ್ಲಾಧಿಕಾರಿಗಳ ಆದೇಶದ ಅನ್ವಯ ಮುಂದಿನ ಕ್ರಮ ವಹಿಸಲಾಗುವುದು.
> -ಟಿ.ಜೆ.ಸುರೇಶಾಚಾರ್, ತಹಸೀಲ್ದಾರ್.

> ಜಿಲ್ಲೆಯಲ್ಲಿ ಸಾಕಷ್ಟು ಜಮೀನು ವಕ್ಫ್ ಬೋರ್ಡ್ ಹೆಸರಿಗೆ ಆಗಿದೆ. ರೈತರು ದಶಕಗಳಿಂದ ಉಳುಮೆ ಮಾಡಿಕೊಂಡು ಬರುತ್ತಿರುವ ಜಮೀನು ಹಾಗೂ ಸ್ಮಶಾನದ ಪಹಣಿಯಲ್ಲಿ ವಕ್ಫ್ ಬೋರ್ಡ್ ಹೆಸರು ಸೇರುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಕೂಡಲೇ ಸರ್ಕಾರ ಆಗಿರುವ ಗೊಂದಲಗಳನ್ನು ಸರಿಪಡಿಸುವ ಕೆಲಸ ಮಾಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೀಗಾಗುತ್ತಿದೆ ಏನೋ ಎಂಬ ಭಾವನೆ ಅನ್ನದಾತರಲ್ಲಿ ಮೂಡುತ್ತಿವೆ. ಇನ್ನಾದರೂ ಸರ್ಕಾರ ಇಂತಹ ಅನ್ಯಾಯ ಕೆಲಸಕ್ಕೆ ಕಡಿವಾಣ ಹಾಕಬೇಕು.
> - ಅತ್ತಹಳ್ಳಿ ದೇವರಾಜ್, ರಾಜ್ಯ ಸಂಘಟನಾ ಕಾರ್ಯದರ್ಶಿ, ಕಬ್ಬು ಬೆಳೆಗಾರರ ಸಂಘ

ನ.12ಕ್ಕೆ, ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಮೈಸೂರು, ನ.9– ಜಿಲ್ಲಾಡಳಿತ, ಜಿಪಂ ಮೈಸೂರು ವತಿಯಿಂದ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮವನ್ನು ನ.12 ರಂದು ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮದ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸುವರು. ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಅನಿಲ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಬೀದಿ ಬದಿ ವ್ಯಾಪಾರಿಗಳ ಸಂಘಕ್ಕೆ ಮಹದೇವ್ ಅಧ್ಯಕ್ಷ



ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷರಾಗಿ ಮಹದೇವ್ ಆಯ್ಕೆಯಾಗಿದ್ದಾರೆ.

ಸರಗೂರು, ನ.9– ಶ್ರೀವಿನಾಯಕ ಬೀದಿ ಬದಿ ವ್ಯಾಪಾರಿಗಳ ಸಂಘದ ನೂತನ ಅಧ್ಯಕ್ಷರಾಗಿ ಪಟ್ಟಣದ ಮಹದೇಶ್ವರ ಟಿಫಾನೀಸ್ ಮಾಲೀಕ ಮಹದೇವ್ ಆಯ್ಕೆಯಾಗಿದ್ದಾರೆ.

ಪಟ್ಟಣದ ಸೋಮೇಶ್ವರ ದೇವಾಲಯದ ಆವರಣದಲ್ಲಿ ನಡೆದ ಸಂಘದ ಮಾಸಿಕ ಸಭೆಯಲ್ಲಿ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ಮಹದೇವ್ ಸರ್ವಾನುಮತದಿಂದ ಆಯ್ಕೆಯಾದರು.

ಗೌರವಾಧ್ಯಕ್ಷರಾಗಿ ಭೈರನಾಯಕ, ಉಪಾಧ್ಯಕ್ಷ ಗೋವಿಂದರಾಜು ಮತ್ತು ಮಹದೇವಮ್ಮ, ಪ್ರಧಾನ ಕಾರ್ಯದರ್ಶಿ ಸತೀಶ್, ಸಹ ಕಾರ್ಯದರ್ಶಿ ನಂದೀಶ್, ಕೃಷ್ಣಪ್ರಸಾದ್, ಖಜಾಂಚಿ ರಂಗಸ್ವಾಮಿ, ಸಲಹೆಗಾರ ರವಿಕುಮಾರ್, ನಿರ್ದೇಶಕರಾಗಿ ವೆಂಕಟಸ್ವಾಮಿ, ಚಾಂದ್ ಖಾನ್, ರವಿಕುಮಾರ್, ನಾಗರಾಜು, ವೆಂಕಟೇಶ್, ಲಕ್ಷ್ಮೀ, ಶಶಿಕಲಾ, ಚೌಡನಾಯಕ, ರಂಗಸ್ವಾಮಿ, ಉಮೇಶ್, ಸಂಜೀವ್ ನಾಯಕ, ಮಂಜುನಾಥ್, ಜಾವಿದ್ ಆಯ್ಕೆಯಾಗಿದ್ದು, ಸಂಘದ ಸರ್ವ ಸದಸ್ಯರು ನೂತನ ಕಾರ್ಯಕಾರಿ ಮಂಡಳಿಗೆ ಶುಭ ಕೋರಿದರು.

ಆನೆಕಾಲು ರೋಗ ತಪಾಸಣಾ ಶಿಬಿರಕ್ಕೆ ಚಾಲನೆ



ಆನೆಕಾಲು ರೋಗ ತಪಾಸಣಾ ಶಿಬಿರವನ್ನು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಉದ್ಘಾಟಿಸಿದರು.

ತಿ.ನರಸೀಪುರ, ನ.9– ಆನೆ ಕಾಲು ರೋಗಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಜನರನ್ನು ಪರೀಕ್ಷೆಗೆ ಒಳಪಡಿಸಿ ರೋಗ ಲಕ್ಷಣ ಕಂಡು ಬಂದರೆ ಉಚಿತವಾಗಿ ಔಷಧಿ ನೀಡುವ ಮೂಲಕ ಗುಣಪಡಿಸಲಾಗುವುದು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗರ್ಗೇಶ್ವರಿ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ತಿ.ನರಸೀಪುರ ಪಟ್ಟಣ ವ್ಯಾಪ್ತಿಯ ಹೊಸ ತಿರುಮಕೂಡಲಿನ ಜನತೆಗೆ ಆಯೋಜಿಸಿದ್ದ ಆನೆಕಾಲು ರೋಗ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಈ ಶಿಬಿರವನ್ನು ತಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿ ದೊಡ್ಡ ಮೂಲಗೂಡು, ಸೋಮನಾಥಪುರ, ತಲಕಾಡು ಹೋಬಳಿಯ ಕಾವೇರಿಪುರ, ಗರ್ಗೇಶ್ವರಿ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದೇವೆ ಎಂದರು.

ಯಾವುದೇ ರೋಗವನ್ನು ಆರಂಭದಲ್ಲೇ ಕಂಡು ಹಿಡಿದರೆ ಸಂಪೂರ್ಣ ಗುಣಪಡಿಸಲು ಸಾಧ್ಯ. ನಮ್ಮ ದೇಹದ ಯಾವುದೇ ಭಾಗದಲ್ಲಿ ಅನಾರೋಗ್ಯದ ಲಕ್ಷಣ ಕಂಡು ಬಂದ ಕೂಡಲೇ ವೈದ್ಯರಿಗೆ ತೋರಿಸುವುದು ಬಹಳ ಮುಖ್ಯ. ನಿರ್ಲಕ್ಷಿಸಿದರೆ ತೊಂದರೆಯಾಗುತ್ತದೆ ಎಂದರು.

ಸೊಳ್ಳೆಗಳು ಕಚ್ಚಿ ಅದು ಮತ್ತೊಬ್ಬರಿಗೆ ಕಚ್ಚಿದಾಗಲೂ ರೋಗ ಬರುವ ಸಾಧ್ಯತೆ ಇದೆ. ಆದ್ದರಿಂದ ಮುಂಜಾಗ್ರತ ಕ್ರಮವಾಗಿ ಆರೋಗ್ಯ ಇಲಾಖೆಯಿಂದ ಈ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಜನತೆ ಮುಂದೆ ಬಂದು ಪರೀಕ್ಷೆ ಮಾಡಿಸಿಕೊಳ್ಳಬೇಕೆಂದರು.

ಗರ್ಗೇಶ್ವರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಮಹದೇವಸ್ವಾಮಿ ಮಾತನಾಡಿ, ಸೊಳ್ಳೆ ನಮಗೆ ಕಚ್ಚಿದಾಗ ವೈರಾಣು ನಮ್ಮ ದೇಹ ಪ್ರವೇಶಿಸಿ ನಮ್ಮ ರಕ್ತ ಪರಿಚಲನೆ ಅಡ್ಡ ಗಟ್ಟುವುದರಿಂದ ರಕ್ತಚಲನೆ ಆಗುವುದಿಲ್ಲ. ಆಗ ಕಾಲು ದಪ್ಪವಾಗುತ್ತಾ ಹೋಗುತ್ತದೆ. ಆದ್ದರಿಂದ ಮುಂಜಾಗ್ರತಾ ಕ್ರಮ ಕೈಗೊಂಡು ಈ ರೋಗ ಬರದಂತೆ ತಡೆಗಟ್ಟಬಹುದೆಂದರು.

ಕಾರ್ಯಕ್ರಮದಲ್ಲಿ ಮೈಸೂರಿನ ರೇಖಾ, ದಿನೇಶ್, ಪುರಸಭೆ ಮಧು, ರವಿ, ವೆಂಕಟೇಶ್, ಗರ್ಗೇಶ್ವರಿ ದಿನೇಶ್ ಕುಮಾರ್ ಸೇರಿದಂತೆ ಇತರೆ ಸಿಬ್ಬಂದಿ ವರ್ಗ ಹಾಜರಿದ್ದರು.

ಶಾಸಕರಿಂದ ಏಕಪಕ್ಷೀಯವಾಗಿ ವಾಲ್ಮೀಕಿ ಜಯಂತಿ ಆಚರಣೆ

ನಾಯಕ ಸಂಘದ ಅಧ್ಯಕ್ಷರ ಹೆಸರು ಕೈಬಿಟ್ಟಿರುವುದು ಖಂಡನೀಯ: ಮಾಜಿ ಶಾಸಕ ಚಿಕ್ಕಣ್ಣ

ಹೆಚ್.ಡಿ.ಕೋಟೆ, ನ.9– ಪಟ್ಟಣದಲ್ಲಿ ನ.12ರಂದು ನಡೆಯುವ ವಾಲ್ಮೀಕಿ ಜಯಂತಿಯ ಆಹ್ವಾನ ಪತ್ರಿಕೆಯಲ್ಲಿ ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಅವರ ಹೆಸರನ್ನು ಕೈಬಿಟ್ಟು ಶಾಸಕ ಅನಿಲ್ ಏಕಪಕ್ಷೀಯವಾಗಿ ಜಯಂತಿ ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದಲ್ಲಿ ನಡೆಯುವ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿದ್ದು, ಆಹ್ವಾನ ಪತ್ರಿಕೆಯಲ್ಲಿ ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಅವರ ಬದಲು ಈ ಹಿಂದಿನ ಅಧ್ಯಕ್ಷ ಹೆಚ್.ಎಲ್.ಶಂಭುಲಿಂಗ ನಾಯಕರ ಹೆಸರು ಹಾಕಿಸಿರುವುದನ್ನು ತಾಲೂಕು ನಾಯಕ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದರು.

ಈಗಾಗಲೇ ತಾಲೂಕು ನಾಯಕರ ಸಂಘದ ಗೌರವಾಧ್ಯಕ್ಷ ಎಂ.ಸಿ.ದೊಡ್ಡನಾಯಕ ಅವರಿಗೆ ಮಾಜಿ ಅಧ್ಯಕ್ಷ ಹೆಚ್.ಎಲ್.ಶಂಭುಲಿಂಗನಾಯಕ ಅವರು ರಾಜೀನಾಮೆ ನೀಡಿದ್ದಾರೆ. ಬಳಿಕ ಪಟ್ಟಣದ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ನನ್ನ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಮಾಜದ ಎಲ್ಲಾ ಮುಖಂಡರ ಸಮ್ಮುಖದಲ್ಲಿ ಎಂ.ಸಿ.ದೊಡ್ಡ ನಾಯಕ ಅವರನ್ನು ತಾಲೂಕು ನಾಯಕ ಸಂಘದ ನೂತನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿ ಪದಾಧಿಕಾರಿಗಳನ್ನು ಸಹ ಆಯ್ಕೆ ಮಾಡಲಾಗಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಮಾತನಾಡಿದರು.

ಅನಿಲ್ ಅವರು ಎಲ್ಲಾ ಸಮುದಾಯದವರ ಮತ ಪಡೆದು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಶಾಸಕರು ಸಮಾಜವನ್ನು ಒಗ್ಗೂಡಿಸಿ ಅಧ್ಯಕ್ಷ ಎಂ.ಸಿ. ದೊಡ್ಡ ನಾಯಕ ಅವರ ನೇತೃತ್ವದಲ್ಲಿ ವಾಲ್ಮೀಕಿ ಜಯಂತಿ ನಡೆಸಬೇಕು. ಆದರೆ ಸಮಾಜ ಒಡೆಯುವ ಕೆಲಸದಲ್ಲಿ ನಿರತರಾಗಿದ್ದು, ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಕಡೆಗಣಿಸಿರುವುದರಿಂದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಬಹಿಷ್ಕರಿಸುತ್ತೇವೆ. ಮುಂದಿನ ದಿನಗಳಲ್ಲಿ ಸಮುದಾಯ ಒಡೆಯುವ ಕೆಲಸಕ್ಕೆ ಮುಂದಾಗಬಾರದು ಎಂದು ಶಾಸಕ ಅನಿಲ್ ಅವರಿಗೆ ಎಚ್ಚರಿಕೆ ನೀಡಿದರು.

ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಸಿ. ದೊಡ್ಡನಾಯಕ ಮಾತನಾಡಿ, ಶಾಸಕ ಅನಿಲ್ ಅವರು ನಾಯಕ ಸಮಾಜವನ್ನು ಇಬ್ಭಾಗ ಮಾಡಿ ಒಂದು ಪಕ್ಷಕ್ಕೆ ಸೀಮಿತವಾದ ಮುಖಂಡರನ್ನು ಒಳಗೊಂಡ ಸಮಾಜದ ಹೆಸರಲ್ಲಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಇದನ್ನು ತಾಲೂಕು ನಾಯಕರ ಸಂಘ ಖಂಡಿಸುತ್ತದೆ. ಈ ಹಿಂದೆ ವಾಲ್ಮೀಕಿ ಜಯಂತಿಯನ್ನು ಮಾಜಿ ಶಾಸಕರಾದ ಚಿಕ್ಕಣ್ಣ, ದಿ.ಚಿಕ್ಕಮಾದು ಅವರ ನೇತೃತ್ವದಲ್ಲಿ ಸಮಾಜದ ಮುಖಂಡರನ್ನು ಪಕ್ಷಾತೀತವಾಗಿ ಪೂರ್ವಭಾವಿ ಸಭೆಗೆ ಆಹ್ವಾನಿಸಿ ಸಲಹೆ, ಸಹಕಾರ ಪಡೆದು ಕಾರ್ಯಕ್ರಮ ನಡೆಸಲಾಗುತ್ತಿತು. ಹೀಗಾಗಿ ಶಾಸಕರೂ ಸಹ ಇದೇ ನಿಯಮವನ್ನು ಅನುಸರಿಸಿ ಜಯಂತಿ ಆಚರಣೆಗೆ ಮುಂದಾಗಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ನಾಯಕ ಸಂಘದ ಉಪಾಧ್ಯಕ್ಷ ಮಿಲ್ ನಾಗರಾಜು, ಪ್ರಧಾನ ಕಾರ್ಯದರ್ಶಿ ಚಾಕಳ್ಳಿ ಕೃಷ್ಣ, ಕಾರ್ಯದರ್ಶಿ ನಾಗನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಸೋಮನಾಯಕ, ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ರಾಜನಾಯಕ, ಉಪಾಧ್ಯಕ್ಷ ಬೀರನಾಯಕ, ಮುಖಂಡರಾದ ಸೂರಿ, ಬಿಲ್ ನಾಯಕ, ಜವರನಾಯಕ, ಚನ್ನ ನಾಯಕ, ನಿಂಗನಾಯಕ, ಬೆಟ್ಟನಾಯಕ, ಕಾಂತನಾಯಕ, ಗಣೇಶ, ರಾಮನಾಯಕ, ಸೋಮನಾಯಕ, ಸಿದ್ದನಾಯಕ ಇನ್ನಿತರರಿದ್ದರು.

ಮುಕ್ತ ವಿವಿ ಆವರಣದಲ್ಲಿ ಸಂಗೀತದ ಸುಗಂಧದ ನಡುವೆ

ನಾನಾ ವಸ್ತ್ರ ವಿನ್ಯಾಸ, ಕರಕುಶಲ ವಸ್ತುಗಳ ಪ್ರದರ್ಶನದ ಹೊನಲು

●ತಿನಿಸು-ಉಪಾಹಾರ ಸವಿಯೂ ಉಂಟು ●ರೇಷ್ಮೆ-ಕಾಟನ್ ಸೀರೆ ಸೇರಿ ತರಾವರಿ ಬಟ್ಟೆ-ಬರೆಯೂ ಲಭ್ಯ ●ಪ್ರವಾಸೋದ್ಯಮ ಸಚಿವಾಲಯ ಆಯೋಜನೆ





ಮುಕ್ತ ವಿವಿ ಘಟಿಕೋತ್ಸವ ಭವನದ ಹೊರಾವರಣದಲ್ಲಿರುವ ಮಳಿಗೆಯೊಂದರಲ್ಲಿ ಸೀರೆಯನ್ನು ನೋಡುತ್ತಿರುವ ಗ್ರಾಹಕರು. ಮತ್ತೊಂದು ಚಿತ್ರದಲ್ಲಿ ಇಲ್ಲಿನ ಕುಂದಣ ಕಲೆಯ ಮಳಿಗೆ ಕಾಣಬಹುದು.

ಮೈಸೂರು,ನ.9(ಪಿಎಂ)- ಒಂದೆಡೆ ಸಂಗೀತ ಸುಗಂಧದ ಘಮಲು ಸೂಸುತ್ತಿದ್ದರೆ, ಮತ್ತೊಂದೆಡೆ ಜವಳಿ ಮತ್ತು ಕರಕುಶಲ ಪ್ರದರ್ಶನದ ಹೊನಲಿನ ಜೊತೆಗೆ ತಿನಿಸು-ಉಪಾಹಾರದ ಮಳಿಗೆಯೂ ಇದ್ದು, ರುಚಿ ಸವಿಯುವ ಮನಸು ಮೂಡುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ ವತಿಯಿಂದ 'ಮೈಸೂರು ಸಂಗೀತ ಸುಗಂಧ ಉತ್ಸವ್' ಶೀರ್ಷಿಕೆಯಡಿ ನ.8ರಿಂದ 10ರವರೆಗೆ ಕರ್ನಾಟಕ ಸಂಗೀತ ಪರಂಪರೆಯ ಸಂಗೀತ ಉತ್ಸವ ಹಮ್ಮಿಕೊಂಡಿದ್ದು, ಅಂತೆಯೇ ಇದೇ ಮೂರು ದಿನಗಳ ಕಾಲ ಸದರಿ ಘಟಿಕೋತ್ಸವ ಭವನದ ಹೊರಾವರಣದಲ್ಲಿ 10ಕ್ಕೂ ಹೆಚ್ಚು ಮಳಿಗೆಗಳಲ್ಲಿ ಬಟ್ಟೆ-ಬರೆ, ಆಟಿಕೆ, ಚಿತ್ರಕಲೆಗಳೊಂದಿಗೆ ಬಾಯಿ ಚಪ್ಪರಿಸಲು ತಿನಿಸುಗಳೂ ಲಭ್ಯವಿವೆ.

ಜವಳಿ, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಇಲ್ಲಿ ವ್ಯವಸ್ಥೆ ಮಾಡಲಾಗಿದೆ. ಇಳಕಲ್ಲು ಕೈಮಗ್ಗದ ರೇಷ್ಮೆ ಸೀರೆಗಳು, ಗುಳೇದಗುಡ್ಡ ಖಾನಾ ಹಾಗೂ ಸೀರೆಗಳು ಇಲ್ಲಿನ ಮಳಿಗೆಗಳಲ್ಲಿ ದೊರಯಲಿವೆ. ಬೆಂಗಳೂರಿನ ಕಾಮಾಕ್ಷಿಪಾಳ್ಯದ ಕಾಮಾಕ್ಷಿ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಂಘದ ಮಳಿಗೆಯಲ್ಲಿರುವ ರೇಷ್ಮೆ ಮತ್ತು ಕಾಟನ್ ಸೀರೆಗಳು ಮಹಿಳೆಯರು ಹಾಗೂ ಯುವತಿಯರನ್ನು ಆಕರ್ಷಿಸುತ್ತಿವೆ. ಈ ಮಳಿಗೆಯ ರಂಗನಾಥ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಮ್ಮ ಸಂಘದಲ್ಲಿ ನೂರಾರು ನೇಕಾರರು ಕೆಲಸ ಮಾಡಿ ಜೀವನ ನಡೆಸುತ್ತಿದ್ದಾರೆ. ನಮ್ಮಲ್ಲಿ ಉತ್ತಮ ಗುಣಮಟ್ಟದ ರೇಷ್ಮೆ ಮತ್ತು ಕಾಟನ್ ಸೀರೆಗಳನ್ನು ನೇಯ್ಗೆ ಮಾಡುತ್ತೇವೆ. ನಮ್ಮ ಉತ್ಪನ್ನಗಳಿಗೆ ಬೇಡಿಕೆ ಇದ್ದು, ಒಳ್ಳೆಯ ವ್ಯಾಪಾರ ಸಹ ಆಗುತ್ತಿದೆ. ಸಾವಿರ ರೂ.ನಿಂದ ನಮ್ಮಲ್ಲಿ ಸೀರೆಗಳು ದೊರೆಯಲಿವೆ ಎಂದು ತಿಳಿಸಿದರು.

ನನ್ನ ಸಹೋದರ ಆರ್.ಮಂಜುನಾಥ್ ನೇತೃತ್ವದಲ್ಲಿ 6 ಮಂದಿ ನೇಕಾರರು ನೇಯ್ಗೆ ಮಾಡಿರುವ 'ಅಮೃತವರ್ಷಿಣಿ ರೇಷ್ಮೆ ಸೀರೆ'ಗೆ 10ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ-2024 ಮತ್ತು ಕೈಮಗ್ಗ ನೇಕಾರರ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಥಮ ಬಹುಮಾನ ಲಭಿಸಿದೆ. ಈ ಸೀರೆಯನ್ನು ಸಹ ಇಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದೇವೆ. ಈ ಸೀರೆಗೆ ಒಂದೂವರೆ ಲಕ್ಷ ರೂ. ನಿಗದಿ ಮಾಡಿದ್ದೇವೆ. ಆದರೆ ಅಂತಹ ಮತ್ತೊಂದು ಸೀರೆ ಸಿದ್ಧಪಡಿಸುವವರೆಗೆ ಅದನ್ನು ಮಾರಾಟ ಮಾಡುವುದಿಲ್ಲ ಎಂದರು.

ಸಂಡೂರ್ ಕುಶಲಕಲಾ ಕೇಂದ್ರದ ಮಳಿಗೆಯಲ್ಲಿ ಲಂಬಾಣಿ ಕಸೂತಿ ಉತ್ಪನ್ನಗಳು ದೊರೆಯಲಿವೆ. ಇಲ್ಲಿ ಖಾದಿ ಬಟ್ಟೆಯಲ್ಲಿ ಸಿದ್ಧಪಡಿಸಿದ ಸೀರೆ, ಟಾಪ್ಸ್, ಕುರ್ತಾ ಮಾತ್ರವಲ್ಲದೆ, ಬ್ಯಾಗ್‌ಗಳು ಲಂಬಾಣಿ ಶೈಲಿಯ ವಿನ್ಯಾಸದಲ್ಲಿ ಸಿದ್ಧಗೊಂಡು ಆಕರ್ಷಿಸುತ್ತಿವೆ. ಜೊತೆಗೆ ಇಲ್ಲಿರುವ ಮೈಸೂರು ಸಾಂಪ್ರದಾಯಿಕ





ಚಿತ್ರಕಲೆ ಮಳಿಗೆಯಲ್ಲಿ ದೇವಾನು ದೇವತೆಗಳ ಚಿತ್ತಾರಗಳು ಮೂಡಿವೆ. ಮಳಿಗೆಯಲ್ಲಿದ್ದ ಕಲಾವಿದ ಡಾ.ಜೆ.ದುಂಡರಾಜ ಮಾತನಾಡಿ, 16ನೇ ಶತಮಾನದಿಂದ ಈ ಕಲೆ ಇದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ್ ಇದಕ್ಕೆ ಉತ್ತೇಜನ ನೀಡಿದರು. ನಾನು ಕಳೆದ 34 ವರ್ಷಗಳಿಂದ ಈ ಶೈಲಿಯ ಚಿತ್ರಕಲಾ ವೃತ್ತಿಯಲ್ಲಿ ತೊಡಗಿದ್ದೇನೆ. ನನ್ನ ಗುರುಗಳು ಜಯಚಾಮರಾಜ ಒಡೆಯರ್ ಆಸ್ಥಾನದಲ್ಲಿ ಕಲಾವಿದರಾಗಿದ್ದರು. ಅವರಿಂದ ನಾನು ಈ ಕಲೆ ಕರಗತ ಮಾಡಿಕೊಂಡೆ ಎಂದರು.

ಅಲ್ಲದೆ, ಸುಮಾರು 900 ಮಂದಿಗೆ ಈ ಕಲೆ ಬಗ್ಗೆ ತರಬೇತಿ ಕೊಟ್ಟಿದ್ದೇನೆ. ಹತ್ತು ಹಲವು ಪ್ರಶಸ್ತಿಗಳು ನನಗೆ ಸಂದಿವೆ. ಚಿನ್ನದ ಲೇಪನ ಮಾಡುವುದು ಈ ಕಲೆಯ ವಿಶೇಷ. ಹಿಂದೂ ಪುರಾಣಕ್ಕೆ ಸಂಬಂಧಿಸಿದಂತೆ ದೇವಾನುದೇವತೆಗಳ ಚಿತ್ರ ಮಾತ್ರ ರಚಿಸುವುದು ಈ ಕಲೆಯ ಮತ್ತೊಂದು ವೈಶಿಷ್ಟ್ಯ ಎಂದು ಮಾಹಿತಿ ನೀಡಿದರು.

ಕುಂದಣ ಕಲೆಯ ಮಳಿಗೆ ಸಹ ಇಲ್ಲಿದ್ದು, ಇಲ್ಲಿ ಬಗೆಬಗೆಯ ಚಿತ್ತಾರಗಳು ಕುಂದಣ ಕಲೆಯಲ್ಲಿ ಕಲಾವಿದ ಮೋಹನ್ ಅವರ ಕೈಚಳಕದಲ್ಲಿ ಮೂಡಿಬಂದಿವೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಕುಂದಣ ಕಲೆ ಮೈಸೂರಿನ ಸಾಂಪ್ರದಾಯಿಕ ಕಲೆಯಾಗಿದೆ. ಕುಂದಣ ಕಲೆಗೆ ಆಧುನಿಕ ಸ್ಪರ್ಶ ನೀಡಿ ವಿನೂತನ ಕಲಾಕೃತಿ, ಚಿತ್ರಕಲೆಯನ್ನು ತಯಾರು ಮಾಡುತ್ತಿದ್ದೇನೆ. ನಾನು ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಪ್ರವೃತ್ತಿಯಾಗಿ ಈ ಕಲೆಯಲ್ಲಿ ತೊಡಗಿಸಿಕೊಂಡಿದ್ದೇನೆ ಎಂದರು.

ಈ ಕುಂದಣ ಕಲೆಯಲ್ಲಿ ತೊಡಗಿಸಿಕೊಂಡಿರುವ ಕಲಾವಿದರು ತಮ್ಮ ಮುಂದಿನ ಪೀಳಿಗೆಗೆ ಇದನ್ನು ಕಲಿಸುತ್ತಿಲ್ಲ. ಇದರಲ್ಲಿ ಬದುಕು ಸಾಗಿಸಲು ಸಾಧ್ಯವಿಲ್ಲವೆಂದು ಬಹುತೇಕರು ಕೈಚೆಲ್ಲಿದ್ದಾರೆ. ಹಾಗಾಗಿ ನಾನು ಇದಕ್ಕೆ ಆಧುನಿಕ ಸ್ಪರ್ಶ ನೀಡುವ ಮೂಲಕ ಹೊಸ ವಿನ್ಯಾಸ ಕೊಟ್ಟಿದ್ದೇನೆ. ಆ ಮೂಲಕ ಈ ಕಲೆಯನ್ನು ಉಳಿಸಿ ಬೆಳಸಬೇಕೆಂಬುದು ನನ್ನ ಉದ್ದೇಶ. ವಿವಿಧ ಮರಗಳಿಂದ ಕಲೆ ಮೂಡಿಸುವುದು ಈ ಕಲೆಯ ವಿಶೇಷ ಎಂದು ಹೇಳಿದರು.

ಚನ್ನಪಟ್ಟಣದ ಆಟಿಕೆಗಳು ಇಲ್ಲಿನ ಮಳಿಗೆಯೊಂದರಲ್ಲಿ ಪುಟಾಣಿಗಳು ಮಾತ್ರವಲ್ಲದೆ, ಹಿರಿಯರ ಗಮನವನ್ನೂ ಸೆಳೆಯುತ್ತಿವೆ. ಇಲ್ಲಿನ ಮಳಿಗೆಗಳಲ್ಲಿರುವ ಬಹುತೇಕ ಉತ್ಪನ್ನಗಳು ಜಿಐ ಟ್ಯಾಗ್ ಮಾನ್ಯತೆ ಹೊಂದಿವೆ ಎಂಬುದು ವಿಶೇಷ. ಜೊತೆಗೆ ಇಲ್ಲಿ ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾದ ಇನ್‌ಸ್ಟಿಟ್ಯೂಟ್ ಹೋಟೆಲ್ ಮ್ಯಾನೇಜ್‌ಮೆಂಟ್ (ಐಹೆಚ್‌ಎಂ) ಬೆಂಗಳೂರಿನ ಮಳಿಗೆಯಲ್ಲಿ ತರಾವರಿ ತಿಂಡಿ ತಿನಿಸು, ಉಪಾಹಾರ ಕಾಫಿ-ಟೀ ಸಹ ಲಭ್ಯವಿದೆ. ಮಸಾಲೆ ದೋಸೆ, ಉದ್ದಿನ ವಡೆ, ಬಜ್ಜಿ, ಮೈಸೂರು ಪಾಕ್, ಮಸಾಲ ಬೊಂಡ ಮೊದಲಾದ ತಿನಿಸುಗಳು ನಮ್ಮಲ್ಲಿ ಕಡಿಮೆ ದರದಲ್ಲಿ ದೊರೆಯಲಿವೆ ಎಂದು ಮಳಿಗೆಯಲ್ಲಿದ್ದವರು ಮಾಹಿತಿ ನೀಡಿದರು. ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಮಳಿಗೆಯೂ ಇದ್ದು, ಇಲ್ಲಿ ಮೈಸೂರು ಸೇರಿದಂತೆ ರಾಜ್ಯದ ಪ್ರವಾಸಿ ತಾಣಗಳ ಕುರಿತು ಮಾಹಿತಿ ನೀಡಲಾಗುತ್ತಿದೆ.

50:50 ಅನುಪಾತದಡಿ 300 ಮಂದಿಗೆ ತ್ವರಿತವಾಗಿ ಮುಡಾ ನಿವೇಶನ ಹಂಚಿಕೆ!

ಮೈಸೂರು, ನ.9- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಶೇ. 50:50 ಅನುಪಾತದಡಿ ಹಂಚಿಕೆ ಮಾಡಲಾದ ನಿವೇಶನಗಳ ಫಲಾನುಭವಿಗಳ ಪಟ್ಟಿಯೊಂದು ಲಭ್ಯವಾಗಿದ್ದು, ಈ ಪಟ್ಟಿಯಂತೆ ಸುಮಾರು 300 ಮಂದಿಗೆ ನಿವೇಶನ ಸಿಕ್ಕಿದೆ. ಪ್ರಾಧಿಕಾರದಲ್ಲಿ ನಿವೇಶನಗಳನ್ನು ಕಡ್ಲೇಪುರಿಯಂತೆ ಹಂಚಲಾಗಿದೆ ಎಂದು ಶಾಸಕ ಶ್ರೀವತ್ಸ ಆರೋಪಿಸಿದ್ದಾರೆ.

ಅಬ್ದುಲ್ ವಾಜಿದ್ ಎಂಬ ವ್ಯಕ್ತಿಗೆ ಮುಡಾದಿಂದ ಪರಿಹಾರ ರೂಪದಲ್ಲಿ ಬರೋಬ್ಬರಿ 25 ನಿವೇಶನ ಹಂಚಲಾಗಿದೆ. ವಾಜಿದ್ ವಂಶಸ್ಥರ ಜಮೀನನ್ನು 1962ರಲ್ಲಿ ಅಂದಿನ ಸಿಐಟಿಬಿ ಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸಿದೆ. ಆದರೆ ಈ ಜಮೀನನ್ನು ಭೂಸ್ವಾಧಿನಪಡಿಸಿಕೊಳ್ಳದೇ ಬಡಾವಣೆ ನಿರ್ಮಿಸಲಾಗಿದೆ ಎಂದು 50:50 ಅನುಪಾತದಡಿ ಪರಿಹಾರ ಕೋರಿ 61 ವರ್ಷಗಳ ಬಳಿಕ 2022ರ ಡಿಸೆಂಬರ್‌ನಲ್ಲಿ ಮುಡಾಗೆ ಅರ್ಜಿ ಸಲ್ಲಿಸಲಾಗಿದೆ. ಮುಡಾ ಆಯುಕ್ತರು 2023ರ ಫೆಬ್ರವರಿಯಲ್ಲಿ ಅಂದರೆ ಅರ್ಜಿ ಕೊಟ್ಟ ಎರಡೇ ತಿಂಗಳಿಗೆ 25 ಸೈಟ್ ಮಂಜೂರು ಮಾಡಿದ್ದಾರೆ. ಅದೇ ರೀತಿ ಸೈಯ್ಯದ್ ಯೂಸುಫ್‌ಗೆ 21, ಮಲ್ಲಪ್ಪರಿಗೆ 19, ಎಸ್.ವಿ.ವೆಂಕಟಪ್ಪರಿಗೆ 17, ದೇವಮ್ಮರಿಗೆ 16, ಮಹದೇವು ಮತ್ತು ಗೀತಾ 12, ಸುರೇಶಮ್ಮ 11, ವೈರಮುಡಿ 10, ಚೌಡಯ್ಯಗೆ 7 ನಿವೇಶನಗಳನ್ನು ನೀಡಲಾಗಿದೆ.

ಸರ್ಕಾರದ ಕಾನೂನು ಹೇಳುವಂತೆ, 2009ರ ಹಿಂದಿನ ಬಡಾವಣೆಗಳಿಗೆ ಶೇ. 50:50 ಅನುಪಾತ ಅನ್ವಯವಾಗುವುದಿಲ್ಲ. ಆದರೆ, ಇದು 1962ರ ಕೇಸ್ ಎಂಬುದು ದಾಖಲೆಯಲ್ಲಿದೆ. ಇನ್ನು, ಕಡತಗಳು ನಾಪತ್ತೆಯಾಗಿರುವ ಬಗ್ಗೆ ಸಭೆಯಲ್ಲಿ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ ಎಂದು ಬಿಜೆಪಿ ಶಾಸಕ ಶ್ರೀವತ್ಸ ಹೇಳಿದ್ದಾರೆ. ಜೊತೆಗೆ, ಈ ನಿವೇಶನಗಳಿಗೆ ಸಂಬಂಧಪಟ್ಟಂತೆ ಮನೆ ನಿರ್ಮಿಸಲು ನಕ್ಷೆಗೆ ಅನುಮತಿ ಕೊಡುವುದನ್ನು ನಿಲ್ಲಿಸಬೇಕು. ಕಾಮಗಾರಿ ಮಾಡುತ್ತಿರುವವರಿಗೆ ತಡೆಯಾಜ್ಞೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಗಮನ ಸೆಳೆದ 'ರೆಕ್ಕೆಪುಕ್ಕ' ಛಾಯಾಚಿತ್ರ ಪ್ರದರ್ಶನ



ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ಆಯೋಜಿಸಿದ್ದ 'ರೆಕ್ಕೆಪುಕ್ಕ' ಛಾಯಾಚಿತ್ರಗಳ ಪ್ರದರ್ಶನವನ್ನು ಪಕ್ಷಿ ತಜ್ಞರು ವೀಕ್ಷಿಸಿದರು.

ಮೈಸೂರು, ನ.9(ಜಿಎ)-ಭಾರತದ ಪಕ್ಷಿಗಳ ಪಿತಾಮಹ ಡಾ. ಸಲೀಂ ಆಲಿ ಜನ್ಮದಿನದ ಅಂಗವಾಗಿ ಕಲಾಮಂದಿರ ಆವರಣದ ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ಶನಿವಾರ ಆಯೋಜಿಸಿದ್ದ 'ರೆಕ್ಕೆಪುಕ್ಕ' ಛಾಯಾಚಿತ್ರಗಳ ಪ್ರದರ್ಶನದ ಪಕ್ಷಿ ಲೋಕ ಎಲ್ಲರ ಗಮನ ಸೆಳೆಯಿತು.

ಬಾಬಾ ಅಣು ಸಂಶೋಧನಾ ಕೇಂದ್ರದ ವಿಜ್ಞಾನಿ ಗಿರಿ ಚಂದ್ರಶೇಖರ್, ವಿಪ್ರೊ ಕಂಪನಿ ತಂತ್ರಜ್ಞ ಕಶ್ಯಪ್ ಅವರು ಕರ್ನಾಟಕ, ಅರುಣಾಚಲಪ್ರದೇಶ, ಉತ್ತರಾಖಂಡ, ಸಿಕ್ಕಿಂ, ಪಶ್ಚಿಮ ಬಂಗಾಳದ ಕಾಡುಗಳಲ್ಲಿ ಕಾಣಸಿಗುವ ಅಪರೂಪದ ಪಕ್ಷಿಗಳನ್ನು ಕ್ಯಾಮರಾ ಕಣ್ಣಿನಲ್ಲಿ ಸೆರೆ ಹಿಡಿದಿರುವುದು ಪಕ್ಷಿಲೋಕವೇ ಅನಾವರಣಗೊಂಡಿತ್ತು.

ಪ್ರದರ್ಶನಕ್ಕೆ ಚಾಲನೆ ನೀಡಿದ ಪಕ್ಷಿ ತಜ್ಞ ಮನು ಮಾತನಾಡಿ, ಪ್ರವಾಸೋದ್ಯಮದ ಹೆಸರಿನಲ್ಲಿ ಪರಿಸರ ವಿನಾಶದ ಯತ್ನವೂ ನಡೆದಿರುವುದು ಬೇಸರದ ಸಂಗತಿ. ವನ್ಯಜೀವಿ ನೆಲೆಗಳನ್ನು ಸಂರಕ್ಷಿಸುವ ಕೆಲಸ ಆಗಬೇಕು ಎಂದು ಆಗ್ರಹಿಸಿದರು.

ಬಂಡೀಪುರದಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ಹೆಚ್ಚಾಗಿದ್ದು, ಹುಲಿ, ಆನೆಗಳು ಊರಿಗೆ ಬರುತ್ತಿವೆ. ಕಾಡಿನ ಸುತ್ತ ವ್ಯವಸಾಯ ಹೆಚ್ಚಿದೆ. ಬಂಡೀಪುರ ಸುತ್ತಮುತ್ತ ಕಟ್ಟಡಗಳ ನಿರ್ಮಾಣಕ್ಕೆ 2 ಸಾವಿರಕ್ಕೂ ಹೆಚ್ಚು ಅರ್ಜಿ ಬಾಕಿ ಇದೆ. ಹುಲಿ ಆವಾಸಸ್ಥಾನದಲ್ಲೇ ಏಕೆ ಅವರಿಗೆ ಸ್ಥಳ ಬೇಕು ಎಂದು ಪ್ರಶ್ನಿಸಿದರು.

ಪ್ರದರ್ಶನದಲ್ಲಿ ವಿವಿಧ ಬಗೆಯ ಮಂಗಟ್ಟೆಗಳು, ಮರಕುಟಿಕ, ಮಿಂಚುಳ್ಳಿ, ಪಿಕಳಾರ, ಕಾಕರ್ನೆ, ಗೂಬೆ ಮೊದಲಾದ ಹಕ್ಕಿಗಳ ದರ್ಶನ ಸಿಗಲಿದೆ. ಭಾನುವಾರ ಬೆಳಗ್ಗೆ 10.30ರಿಂದ ಸಂಜೆ 7.30ರವರೆಗೆ ಪ್ರದರ್ಶನವಿರಲಿದೆ. ಪಕ್ಷಿತಜ್ಞರಾದ ವಿಜಯಲಕ್ಷ್ಮಿ, ಶಿವಪ್ರಕಾಶ್ ಈ ವೇಳೆ ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರಲ್ಲಿ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ

ಮೈಸೂರು, ನ.9(ಎಸ್‌ಪಿಎನ್)- ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ 38ನೇ ಪಂದ್ಯಾವಳಿಯನ್ನು ನ.10ರಿಂದ 14ರವರೆಗೆ ಆಯೋಜಿಸಲಾಗಿದೆ.

ಮೈಸೂರು ನಜರ್‌ಬಾದಿನ ಅಂಚೆ ತರಬೇತಿ ಕಾಲೇಜು ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ದಾಶ್ ಮಾತನಾಡಿ, ನ.10ರಂದು ಬೆಳಗ್ಗೆ 10 ಗಂಟೆಗೆ ಪಂದ್ಯಾವಳಿಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ.

ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಹಾಗೂ ಧ್ಯಾನ್‌ಚಂದ್ ಪ್ರಶಸ್ತಿ ಪುರಸ್ಕೃತರಾದ ತೃಪ್ತಿ ಮುರ್‌ಗುಂಡೆ, ಕರ್ನಾಟಕ ವೃತ್ತದ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಉಪಸ್ಥಿತರಿರುವರು ಎಂದ ಅವರು, ನ.14ರಂದು ಮಧ್ಯಾಹ್ನ 2 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಅಂಚೆ ಸೇವೆಗಳ ಮಂಡಳಿಯ ಸದಸ್ಯ ಆಶಿಶ್ ಕುಮಾರ್, ಒಲಂಪಿಯನ್, ಧ್ಯಾನ್‌ಚಂದ್ರ ಪ್ರಶಸ್ತಿ ಪುರಸ್ಕೃತ ಅಶ್ವಿನಿ ಅಕ್ಕುಂಜಿ ಚಿದಾನಂದ ಭಾಗವಹಿಸಲಿದ್ದಾರೆ ಎಂದರು.

194 ಆಟಗಾರರು ಭಾಗಿ: ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ 37 ನೇ ಪಂದ್ಯಾವಳಿ ರಾಯ್‌ಪುರ, ಛತ್ತೀಸ್‌ಗಡದಲ್ಲಿ ಯಶಸ್ವಿಯಾಗಿ ನಡೆದಿದ್ದು, 38ನೇ ಪಂದ್ಯಾವಳಿಯನ್ನು ಈ ಬಾರಿ ಮೈಸೂರಿನಲ್ಲಿ ಆಯೋಜಿಸಲಾಗಿದೆ. ಪಂದ್ಯಾವಳಿಯಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ

● 194ಆಟಗಾರರು ಭಾಗಿ ● ರಾಜ್ಯದಿಂದ 11 ಮಂದಿ ಆಯ್ಕೆ



ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ ಕುರಿತು ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ದಾಶ್ ವಿವರಣೆ ನೀಡುತ್ತಿರುವುದು.

ಉನ್ನತ ಬ್ಯಾಡ್ಮಿಂಟನ್ ಪ್ರತಿಭೆಗಳು ಭಾಗವಹಿಸಲಿದ್ದಾರೆ.

20 ಅಂಚೆ ವಲಯಗಳಿಂದ 134 ಪುರುಷರು, 60 ಮಹಿಳಾ ಅಧಿಕಾರಿಗಳು ಸೇರಿ ಒಟ್ಟು 194 ಆಟಗಾರರು ಸಿಂಗಲ್ಸ್, ಡಬಲ್ಸ್, ವೆಟರನ್ಸ್ (45 ವರ್ಷ ಮೇಲ್ಪಟ್ಟವರು), ಮಿಶ್ರ ಡಬಲ್ಸ್ ಮತ್ತು ಅನುಭವಿಗಳ ಡಬಲ್ಸ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಈ ಪಂದ್ಯಾವಳಿಯಲ್ಲಿ ವಿಜೇತರಿಗೆ ಟ್ರೋಫಿ ವಿತರಿಸಲಾಗುತ್ತಿದೆ. ಸ್ಪರ್ಧಿಗಳಿಗೆ ವಸತಿ ಸೇರಿದಂತೆ ಸಕಲ ಸವಲತ್ತುಗಳನ್ನು ಅಂಚೆ ಇಲಾಖೆಯಿಂದ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ರಾಜ್ಯದಿಂದ 11 ಮಂದಿ ಆಯ್ಕೆ: ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿಯು ಅಂಚೆ ಇಲಾಖೆಯೊಳಗಿನ ಬ್ಯಾಡ್ಮಿಂಟನ್ ಪ್ರತಿಭೆಗಳನ್ನು ಗುರುತಿಸುವುದರ ಜೊತೆಗೆ ಅಂಚೆ ವಲಯಗಳ ನಡುವಿನ ಬಾಂಧವ್ಯವನ್ನು ಬಲಪಡಿಸುತ್ತದೆ. ಹಲವು ವರ್ಷಗಳಿಂದ ಕರ್ನಾಟಕ ಅಂಚೆ ವಲಯ ಸತತವಾಗಿ ಪ್ರಬಲ ಸ್ಪರ್ಧಿಯಾಗಿ ಹೊರಹೊಮ್ಮಿದ್ದು, ಹಲವು ಬಾರಿ ಫೈನಲ್ ತಲುಪಿದೆ. ಅಂತೆಯೇ ಹೆಚ್ಚಿನ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ವಿಶೇಷವಾಗಿ ಮಹಿಳೆಯರ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗಗಳಲ್ಲಿ ಆರ್.ಲೀಲಾ ಲಕ್ಷ್ಮಿ ಪ್ರಮುಖ ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

38ನೇ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಅಕ್ಟೋಬರ್‌ನಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ. ಕರ್ನಾಟಕ ವಲಯದಿಂದ 7 ಪುರುಷರು, 4 ಮಂದಿ ಮಹಿಳೆಯರು ಸೇರಿ 11 ಮಂದಿ ಆಟಗಾರರು ಭಾಗವಹಿಸುತ್ತಿದ್ದಾರೆ. ಪಂದ್ಯಾವಳಿಯಲ್ಲಿ ಪೀಣ್ಯ ಸ್ಮಾಲ್ ಇಂಡಸ್ಟ್ರೀಸ್ ಪಿಎ ಬಾಬು ಶ್ರೀನಿವಾಸ್, ಹಾಸನ ಪಿಎ ಜಿ.ಪುರುಷೋತ್ತಮ್, ಶೇಷಾದ್ರಿಪುರಂ ಪೋಸ್ಟ್‌ಮ್ಯಾನ್ ಬಿ.ಎಂ.ಜನಾರ್ಧನ್, ಕೆ.ಆರ್.ನಗರ ಉಪವಿಭಾಗದ ಐಪಿ ಬಾಲಸುಬ್ರಮಣ್ಯಂ, ರಾಜಾಜಿನಗರ ಪೋಸ್ಟ್‌ಮ್ಯಾನ್ ಯು.ಶ್ರೀಕಂಠ, ಶಿವಮೊಗ್ಗ ಪಿಎ ಜಿ.ಪಿ.ಕುಮಾರ್ ಭಾಗವಹಿಸಿದ್ದಾರೆ. ಮಹಿಳೆಯರ ವಿಭಾಗದಿಂದ ಶೇಷಾದ್ರಿಪುರ ಪಿಎ ಆರ್.ಲೀಲಾಲಕ್ಷ್ಮಿ, ಲಕ್ಷ್ಮೀಪುರಂ ಪಿಎ ಪಿ.ಲತಾ, ಬಿಜಿ ಸಿಟಿಆರ್‌ಎಂಎಸ್ ಎಸ್‌ಎ ಅನುಷಾ, ಮಲ್ಲಹಳ್ಳಿ ಬಿಪಿಎಂ ಟಿ.ರಾಣಿ ಹಾಗೂ ವೆಟರನ್ ವಿಭಾಗದಿಂದ ಶಿವಮೊಗ್ಗದ ಪಿಎ ಎನ್.ಎ.ಮಂಜುನಾಥ್ ಸ್ಪರ್ಧಿಗಳಾಗಿ ಭಾಗವಹಿಸಲಿದ್ದಾರೆ.

ನೌಕರರ ಕಲ್ಯಾಣಕ್ಕೆ ಒತ್ತು: ತನ್ನ ಉದ್ಯೋಗಿಗಳ ಕಲ್ಯಾಣ ಮತ್ತು ಯೋಗಕ್ಷೇಮಕ್ಕೆ ಬದ್ಧವಾಗಿ ಕ್ರೀಡೆಗಳಲ್ಲಿ ಭಾಗವಹಿಸುವಿಕೆಯನ್ನು ಅಂಚೆ ಇಲಾಖೆ ಪ್ರೋತ್ಸಾಹಿಸಿದೆ. ರಾಷ್ಟ್ರವ್ಯಾಪ್ತಿ ಅಂಚೆ ನೌಕರರಲ್ಲಿ ಸಮುದಾಯದ ತೊಡಗಿಸಿಕೊಳ್ಳುವಿಕೆ ಇಲಾಖಾ ನೌಕರರಲ್ಲಿ ಟೀಮ್‌ವರ್ಕ್ ಮತ್ತು ದೈಹಿಕ ಸಾಮರ್ಥ್ಯ ಹೆಚ್ಚಿಸಲು ಈ ಪಂದ್ಯಾವಳಿ ಸೂಕ್ತವಾಗಿದೆ ಎಂದರು. ಗೋಷ್ಠಿಯಲ್ಲಿ ಉತ್ತರ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಸುಶೀಲ್ ಕುಮಾರ್, ದಕ್ಷಿಣ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಚಂದ್ರಶೇಖರ್ ಕಾಕುಮಾನ್, ನಿರ್ದೇಶಕ ಸಂದೇಶ್ ಮಹದೇವಪ್ಪ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಗೀತಾ ಸಂತೋಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ಕ)	4 ಪ್ರದರ್ಶನಗಳು
ಸಂಗಂ	
ನವಗ್ರಹ (ಕ)	4 ಪ್ರದರ್ಶನಗಳು
ಲಿಡೋ	
ಎಲಾ ಕುನ್ನಿ (ಕ)	2 ಪ್ರದರ್ಶನಗಳು
ಸಿಂಗಂ ಅಗೇನ್ (ಹಿಂ)	2 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಗಂ ಅಗೇನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಸಂಗೀತಾ ಸಂತೋಷ (ಕ)	2 ಪ್ರದರ್ಶನಗಳು
ಆದಿ ಪರ್ವ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜನವರಿ 23ರೊಳಗೆ ನೇತಾಜಿ ಅಸ್ಥಿ ಭಾರತಕ್ಕೆ ತನ್ನಿ

ಪ್ರಧಾನಮಂತ್ರಿಗೆ ಚಂದ್ರಕುಮಾರ್ ಬೋಸ್ ಪತ್ರ

ಕೋಲ್ಕತ್ತ, ನ.9- ಜಪಾನ್‌ನಲ್ಲಿ ಇರುವ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಅಸ್ಥಿಯನ್ನು 2025ರ ಜನವರಿ 23ರೊಳಗೆ ಭಾರತಕ್ಕೆ ತರಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ನೇತಾಜಿ ಅವರ ಮರಿಮೊಮ್ಮಗ ಚಂದ್ರಕುಮಾರ್ ಬೋಸ್ ಅವರು ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.


ನೇತಾಜಿ ಅವರ ಅಸ್ಥಿಯನ್ನು ಟೋಕಿಯೊದ ರೆಂಕೋಜಿ ದೇವಸ್ಥಾನದಲ್ಲಿ ಇನ್ನೂ ಬಿಟ್ಟಿರುವುದು ಮಹಾನ್ ನಾಯಕನಿಗೆ ಮಾಡುವ ಅವಮಾನ ಎಂದು ಅವರು ಹೇಳಿದ್ದಾರೆ.

ರೆಂಕೋಜಿ ದೇವಸ್ಥಾನದಲ್ಲಿ ನೇತಾಜಿ ಅವರ ಅಸ್ಥಿ ಇನ್ನೂ ಇದೆ. ಅವರ ಅಸ್ಥಿಯನ್ನು ವಿದೇಶಿ ನೆಲದಲ್ಲಿ ಇಡುವುದು ಅಪಮಾನದ ಪರಮಾವಧಿ. ಜನವರಿ 23ರೊಳಗೆ ಅಸ್ಥಿಯನ್ನು ಭಾರತಕ್ಕೆ ಮರಳಿ ತರಬೇಕು ಮತ್ತು ಗೌರವಾರ್ಥವಾಗಿ ದೆಹಲಿಯಲ್ಲಿ ಕರ್ತವ್ಯ ಪಥದಲ್ಲಿ ಸ್ಮಾರಕ ನಿರ್ಮಿಸಬೇಕು ಎಂದು ಚಂದ್ರ ಕುಮಾರ್ ಆಗ್ರಹಿಸಿದ್ದಾರೆ.

1945ರ ಆಗಸ್ಟ್ 18ರಂದು ನೇತಾಜಿ ಅವರು ವಿಮಾನ ದುರಂತದಲ್ಲಿ ಮೃತಪಟ್ಟಿದ್ದರು. ಬೋಸ್ ಅವರ ಸಾವಿಗೆ ಸಂಬಂಧಿಸಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ 10 ತನಿಖೆಗಳು ನಡೆದಿವೆ. ಈ ತನಿಖಾ ವರದಿಗಳನ್ನು ಗೋಪ್ಯ ದಾಖಲೆಗಳು ಎಂದು ವರ್ಗೀಕರಿಸಿ ಇಡಲಾಗಿದೆ. ಈ ಎಲ್ಲ ವರದಿಗಳಲ್ಲಿಯೂ ನೇತಾಜಿ ಅವರು ವಿಮಾನ ದುರಂತದಲ್ಲಿ ಮೃತಪಟ್ಟರು ಎಂದೇ ಹೇಳಲಾಗಿದೆ.

ಈ ಹತ್ತೂ ತನಿಖೆಗಳ ವರದಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಬೇಕು. ಆ ಮೂಲಕ ನೇತಾಜಿ ಅವರ ಸಾವಿನ ಕುರಿತು ರೂಪುಗೊಂಡಿರುವ ಹುಸಿ ಸಂಕಥನಗಳು ಅಂತ್ಯವಾಗಬೇಕಿದೆ. ಆದ್ದರಿಂದ ಈ ಬಗ್ಗೆ ಕೇಂದ್ರ ಸರ್ಕಾರವು ಅಂತಿಮ ಹೇಳಿಕೆಯನ್ನು ನೀಡಬೇಕು ಎಂದು ಪತ್ರದಲ್ಲಿ ಚಂದ್ರ ಕುಮಾರ್ ಕೋರಿದ್ದಾರೆ.

ರಾಜ್ಯ ಕಾನೂನು ಆಯೋಗದ ಅಧ್ಯಕ್ಷರಿಗೆ ಸ್ವಾಗತ



ಮೈಸೂರಿಗೆ ಭೇಟಿ ನೀಡಿದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳೂ ಆದ ರಾಜ್ಯ ಕಾನೂನು ಆಯೋಗದ ಅಧ್ಯಕ್ಷರಾದ ಅಶೋಕ್ ಇಂಚಿಗೇರಿ ಅವರನ್ನು ಮೈಸೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ನಾಗರಾಜ್ ಅಂಕಸದೊಡ್ಡಿ ಅವರು ಹೂಗುಚ್ಛ ನೀಡಿ, ಆತ್ಮೀಯವಾಗಿ ಸ್ವಾಗತಿಸಿದರು.

7ನೇ ವರ್ಷದ ಪುಣ್ಯಸ್ಮರಣೆ



ಶ್ರೀ ದೊಡ್ಡಮನೆ ರಾಜಲಿಂಗಯ್ಯ
(ಅಲಂಕಾರ್ ರಾಜಣ್ಣ)

ಮಾಲೀಕರು
ಅಲಂಕಾರ್ ಬಾರ್ ಅಂಡ್ ರೆಸ್ಟೋರೆಂಟ್, ಹುಣಸೂರು
ಸ್ಕೈಬರಿ ರೆಸ್ಟೋರೆಂಟ್, ಹುಣಸೂರು
ಅಧ್ಯಕ್ಷರು ಮುತ್ತುಮಾರಮ್ಮ ದೇವಸ್ಥಾನ ಸಮಿತಿ, ಹುಣಸೂರು
ಗಣಪತಿ ದೇವಸ್ಥಾನ ಸಮಿತಿ, ಹುಣಸೂರು
ಹಾಗೂ ಕಾಂಗ್ರೆಸ್ ಮುಖಂಡರು

ನಿಧನ : 10–11–2017

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷ ಕಳೆದರು ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು :
ಪತ್ನಿ ಶ್ರೀಮತಿ ಲೀಲಾವತಿ
ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

MUDA APPROVED SITE FOR SALE
in D Ravishankar Layout
40x60, North Facing
READY TO CONSTRUCT
Clear Title,
Near Christ Public School,
Price.1.20 Cr
93422 33113

SITES FOR SALE
- Fully Developed
- Ready for Registration
- Near Kadakola Industrial Area.
- Near by SKF, Sheshadripuram University & upcoming NIE Campus.
- **Bank Loan Available.**

Call: 8151056881

MAHENDRA DEVELOPERS
Muda approved sites & House for sale
- Vajamangala - 20x30, 20x40, 30x40
- Nagawala- 20x40, 30x40, 30x50,40x60
- Hunsuru - 20x30, 20x40, 30x40
- Devagalli - 30x40, 40x60
- Uttanahalli - 5.04 Guntas Farm land

8884001233

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

FOR SALE
5502 sq.ft.,
(CELLAR+G+3)
COMMERCIAL COMPLEX
at PrimeLocation, Near Chamundipuram Circle, Vidyaranyapuram, Mysore.
Contact: Harish
9686679609

VILLA PLOT FOR SALE
30X40
MUDA APPROVED
Near Infosys, L&T & BEML
Hobbal Industrial Area, Mysore
30X40 & 30X50
READY FOR CONSTRUCTION
Beside Narayana Guru Nagara Bogadi, Gaddige Road, Mysore
Call: 97314 00249 88614 40528



Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

1ನೇ ವರ್ಷದ ಸವಿನೆನಪು



ಶ್ರೀ ವೀರಭದ್ರಯ್ಯರವರು
ನಿಧನ: 10–11–2023

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿನ್ನ ನೆನಪಿನಲ್ಲಿರುವ

ದುಃಖತಪ್ತರು: ಅಣ್ಣ, ಶಿವಣ್ಣ,
ಅಕ್ಕ: ವನಜಾಕ್ಷಿ W/o ಬಸವರಾಜು,
ರಾಮಕೃಷ್ಣ W/o ಜ್ಯೋತಿ, ವರ್ಷಿಣಿ, ಯಶಿಕಾ,
ಮಂಜು ಮಾವ, ಕುಟುಂಬ ವರ್ಗದವರು ಹಾಗೂ ಸ್ನೇಹಿತರು

LAND FOR SALE
5 ACRES Agriculture Land HIGH WAY Attached.
Nagamangla to KR Pet Road. For Immediate Sale.
Call: **9448473358 9980072843**

SITE FOR SALE
60x40 (2400 Sqft)
TREASURY LAYOUT
80 FEET ROAD
NEAR: RR NAGAR
Just 200 Mtr from Christ Public School
9845311238/ 9844262246

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


-ಜಾಹೀರಾತು ವ್ಯವಸ್ಥಾಪಕರು

NISARGA ECO PARADISE
MYSURU - HUNSUR HIGHWAY
MEGA RESIDENTIAL TOWNSHIP
DTCP APPROVAL
DREAM HOME COMES YOUR WAY
RIGHT TIME TO INVEST IN MYSURU

30x40	30x50
40x60	50x80

Sites with all facilities
HURRY!! FEW LEFT
Just ₹650/ Per Sq.ft
Easy 4 Instalment Facility
HYLAND PROPERTIES
Hunsur-Mysore Highway, Mysuru
9071386615 9513301854

10ನೇ ವರ್ಷದ ಸವಿನೆನಪು



ಶ್ರೀ ಎಂ.ವಿ.ಗೋವಿಂದೇಗೌಡರು
ಮೈದನಹಳ್ಳಿ, ಇಲವಾಲ ಹೋಬಳಿ, ಮೈಸೂರು ತಾ॥ ಜಿ॥

ನೀವು ನಮ್ಮೆಲ್ಲರನ್ನಗಲಿ ಇಂದಿಗೆ 10 ವರ್ಷ ಕಳೆದರು
ನಿಮ್ಮ ಜೀವನದ ಅದರ್ಶಗಳು ನಮಗೆ ದಾರಿದೀಪವಾಗಿದೆ.
ನಿಮ್ಮ ಪ್ರೀತಿ ಮತ್ತು ನೆನಪುಗಳು ನಮ್ಮ ಹೃದಯಗಳಲ್ಲಿ ಅಮರವಾಗಿರುತ್ತದೆ.
ನಿಮ್ಮ ಹೆಸರೇ ನಮಗೊಂದು ದೊಡ್ಡ ಆಸ್ತಿ ಅದನ್ನು ಉಳಿಸುವ ಮತ್ತು ಬೆಳೆಸುವ ಕರ್ತವ್ಯ ಮತ್ತು ಜವಾಬ್ದಾರಿ ನಮ್ಮೆಲ್ಲರದು.

ಸದಾ ನಿಮ್ಮನ್ನು ಸ್ಮರಿಸುತ್ತಿರುವ ನಿಮ್ಮ ಪ್ರೀತಿಯ
ಗಂಡುಮಕ್ಕಳು: ನಾರಾಯಣ ಎಂ.ಜಿ, ನಾಗರಾಜು ಎಂ.ಜಿ
ಸೊಸೆಯಂದಿರು: ಸುಜಾತ ಬಿ.ಕೆ., ಜಯಲಕ್ಷ್ಮಿ
ಮೊಮ್ಮಕ್ಕಳು: ವರದರಾಜು ಎಂ.ಎನ್, ಗುರುಪ್ರಸಾದ್ ಎಂ.ಎನ್ ಮತ್ತು ಹೆಣ್ಣುಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ ವೆಂಕಟರಮಣೇಗೌಡರ ಕುಟುಂಬ ವರ್ಗದವರು
ಮೈದನಹಳ್ಳಿ, ಇಲವಾಲ ಹೋಬಳಿ, ಮೈಸೂರು

ಪ್ರಕಟಣೆ: ನಾರಾಯಣ ಎಂ.ಜಿ, ನಾಗರಾಜು ಎಂ.ಜಿ, ವರದರಾಜು ಎಂ.ಎನ್, ಗುರುಪ್ರಸಾದ್ ಎಂ.ಎನ್

ನೇರ II PUC !!
I PUC ಫೇಲಾಗಿದೆಯೇ ? ಚಿಂತೆ ಬಿಡಿ.
ನಾವು ನಿಮ್ಮನ್ನು ನೇರವಾಗಿ II PUC ಗೆ ಕೂರಿಸಿ,
ಮುದ್ರಿತ ನೋಟ್ ಗಳೊಂದಿಗೆ ಪರಿಣಾಮಕಾರಿಯಾದ ಕೋಚಿಂಗ್ ನೀಡಿ, ಪರೀಕ್ಷೆಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. PG ಸಹ ಲಭ್ಯ.
ಜ್ಞಾನವರ್ಧಿನಿ ಸೆಂಟರ್
ಮರಿಮಲ್ಲಪ್ಪ ಕಾಲೇಜಿನ ಎದುರು
9844355941 / 9482674037
www.direct2puc.com

FOR RENT
12500 Sqft Ware house/ Industrial shed for Rent in Tandya Kadakola, KIADB Area
9606276769

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷೀದಾರರು ಅದರ ಮಾಲೀಕರಾದ, ಬೆಂಗಳೂರು ನಗರ–560055, ಬೆಂಗಳೂರು ಉತ್ತರ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಜೊಹೋರ್ ಹೌಸ್, ಮನೆ ನಂಬರ್: 302 ರ ನಿವಾಸಿಯಾದ ಶ್ರೀಮತಿ. ಸುಧಾ ಉಮಾಪತಿ ಕೋಂ ಲೇಟ್ ಉಮಾಪತಿ @ ಟಿ. ಉಮಾಪತಿ, ಶ್ರೀ ನಿತಿನ್ ಉಮಾಪತಿ ಬಿನ್ ಲೇಟ್ ಉಮಾಪತಿ @ ಟಿ. ಉಮಾಪತಿ, ಶ್ರೀಮತಿ ದೀಪ ಉಮಾಪತಿ ಬಿನ್ ಲೇಟ್ ಉಮಾಪತಿ @ ಟಿ. ಉಮಾಪತಿ ರವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಹಲಾಳು ಗ್ರಾಮದ ಸರ್ವೆ ನಂಬರ್ 64/7 ರಲ್ಲಿನ ನಾಲ್ಕು ಎಕರೆ ಹದಿನಾರು ಗುಂಟೆ (4.16.00.00) ವಿಸ್ತೀರ್ಣದ ವಸತಿ Layout - Residential ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ 240253 ದಿನಾಂಕ 12–08–2021, ರ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ:– ಸರ್ವೆ ನಂಬರ್ 64/2 ; ಪಶ್ಚಿಮಕ್ಕೆ:– ಸರ್ವೆ ನಂಬರ್ 64/3 ; ಉತ್ತರಕ್ಕೆ: – ಸರ್ವೆ ನಂಬರ್ 62 ; ದಕ್ಷಿಣಕ್ಕೆ:– ಮೈಸೂರು–ಮನಂಥವಾಡಿ ರಸ್ತೆ.

Sd/- M.N. Prakash Kalappa,
KAR-1996-2000, Advocate,
#2-3, First Floor, PRI Complex, 67/7A,
New Sayyaji Rao Road, Fort Mohalla,
Mysore-570 004. Mob: 93431-12535. Email: mnprakashkalappa@gmail.com

ಮೈಸೂರು: 9–11–2024

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಜಂಟಿ ಅಭಿವೃದ್ಧಿ ಕರಾರು ಪತ್ರ ಮಾಡಿಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ನಮ್ಮ ಕಕ್ಷಿದಾರರು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಹದಿನೈದು (15) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಜಂಟಿ ಅಭಿವೃದ್ಧಿ ಕರಾರು ಪತ್ರದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ
ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹುಲಿಕೆರೆ ಗ್ರಾಮಕ್ಕೆ ಸೇರಿದ

ಐಟಂ ನಂ. 1:– ಸರ್ವೆ ನಂ. 145 ರ ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಜವರಶೆಟ್ಟಿರವರ ಜಮೀನು, ಪಶ್ಚಿಮಕ್ಕೆ: ರೈಲ್ವೆ ಹಳಿ, ಉತ್ತರಕ್ಕೆ: ಕುಮಾರ ಮತ್ತು ವೈರಮುಡಿರವರ ಜಮೀನು, ದಕ್ಷಿಣಕ್ಕೆ: ರೈಲ್ವೆ ಹಳಿ

ಐಟಂ ನಂ. 2:– ಸರ್ವೆ ನಂ. 152/3 ರ ವಿಸ್ತೀರ್ಣ 0–37 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸೆಬಾಸ್ಟಿನ್ ರವರ ಜಮೀನು, ಪಶ್ಚಿಮಕ್ಕೆ: ಜವರಶೆಟ್ಟಿರವರ ಜಮೀನು, ಉತ್ತರಕ್ಕೆ: ವೈರಮುಡಿರವರ ಜಮೀನು, ದಕ್ಷಿಣಕ್ಕೆ: ಜವರಶೆಟ್ಟಿರವರ ಜಮೀನು

ಐಟಂ ನಂ. 3:– ಸರ್ವೆ ನಂ. 153/1 ರ ವಿಸ್ತೀರ್ಣ 1 ಎಕರೆ 24 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಜಯಲಕ್ಷ್ಮಿ ರವರ ಜಮೀನು, ಪಶ್ಚಿಮಕ್ಕೆ: ಜವರಶೆಟ್ಟಿರವರ ಜಮೀನು, ಉತ್ತರಕ್ಕೆ: ಸೆಬಾಸ್ಟಿನ್ ಮತ್ತು ಜವರಶೆಟ್ಟಿರವರ ಜಮೀನು, ದಕ್ಷಿಣಕ್ಕೆ: ರಸ್ತೆ ಹಾಗೂ ರೈಲ್ವೆ ಹಳಿ.

JAYAKUMAR
Advocate
Office: No. 565/A, 20th Cross, 4th Main, 1st Stage, Vidyaranyapuram, Mysore-570 008. Mob.: 98445 39729

ದಿನಾಂಕ : 09–11–2024
ಸ್ಥಳ: ಮೈಸೂರು



ಹಸಿರು ನಮ್ಮ ಉಸಿರು

9ನೇ ವರ್ಷದ ಸವಿನೆನಪು



ದಿ॥ ಗೋದಾವರಿ ಬಾಯಿ
ನಿಧನ: 10–11–2015
ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬ ವರ್ಗದವರು ಕೃಷ್ಣಸ್ವಾಮಿ ಮಾವಟ್‌ಕರ್, ಮೋಹನ್‌ಕುಮಾರ್ ಕೆ, ರಂಜಿತಾ ಕೆ.

COMMERCIAL SITE FOR SALE
4018 sq.ft
North West Corner
Bogadi Gaddige Main Road
Brokers Excuse
Contact for further details:
9880655567, 9845967640

MUDA APPROVED
SITE FOR SALE
KBL SILICON CITY
30x40 N/W Corner
Near BEML, L&T, Infosys, Mysore
BANK LOAN AVAILABLE.
READY FOR REGISTRATION
Mob: 9686573798

HIRING MARKETING ASSISTANT FOR INTEGRATED PUC COLLEGE

We are looking for a dynamic, energetic and enthusiastic individual who can collaborate with us to drive success to our institution

- In building relationships with high schools
- In meeting schools Principals / HM to provide academic growth of our institution.
- In getting students admission for integrated PU Course.

Qualification: Any degree with minimum 2 years of experience in the education Organization
Location: Mysuru

Sd/- Principal,
MASVS, GURUKULA PU COLLEGE
Kuvempunagar, Mysore, **Phone: 9448979080**

Kodava Education Society®
COORG INSTITUTE OF TECHNOLOGY
ESTD : 1999
(Approved by AICTE & Affiliated to Visvesvaraya Technological University, Belagavi)
PONNAMPET - 571 216, Kodagu, Karnataka.
Ph.: 9611173724 |9611155457
CET CODE: 94 COMED-K: E038
Website: www.citcoorg.edu.in | Email: info@citcoorg.edu.in

APPOINTMENT NOTIFICATION

Applications are invited from the eligible candidates for the following full time post

Name of the Post	Qualification & Eligibility
Training and Placement Officer	Candidate with appropriate qualification and experience in Training and Placement of students.

Application (along with detailed Curriculum vitae, copies of testimonials and recent passport size photograph) may be sent to the Secretary, Kodava Education Society, at the above address so as to reach within 10 days from the date of this advertisement.

Salary as per AICTE norms and will not be a constraint for candidate with good academic records and experience.

Place: Ponnampet
Date: 09/11/2024

-Sd-
Secretary